## ಕನ್ನಡ ಪಾಸಿಂಗ್ ಪ್ಯಾಕೇಜ್

## 2020 ರ ವಾರ್ಷಿಕ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳ ಸಾಧನೆಗಾಗಿ 80+ ನಿಶ್ಚಿತ-ಖಚಿತ

ಗದ್ಯ (28) ಪದ್ಯ (30) ಪಪೋ (9) ಅಪಠಿತ ಗದ್ಯ (4)= 71

ಈ ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 07 * 01 = 07

**ಗದ್ಯಭಾಗ 3 ಪ್ರಶ್ನೆಗಳು 01*3=3**

1. ರಾಹಿಲನು ಯಾರು? **ಓರ್ವ ಡಾಕ್ಟರ್**
2. ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರ ವಾಗಿ ಹಿಡಿದುಕೊಂಡಿದ್ದೇನು? **ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆ**
3. ಗಡಿಪ್ರ ದೇಶಗಳಲ್ಲಿ 'ಬ್ಲಾಕ್ ಔಟ್'ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ? **ವಿಮಾನದಾಳಿಯಿಂದ ರಕ್ಷಿಸಿಕೊಳ್ಳಲು**
4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು? **ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು.**
5. ಯುದ್ಧದ ಬಗ್ಗೆ ಮುದುಕಿಯ ಅಭಿಪ್ರಾ ಯವೇನು? **"ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ"**
6. ಶ್ರೀ ೕರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರ ಹಿಸಿದ್ದಳು? **ಹೂವು, ರುಚಿಕರವಾದ ಹಣ್ಣು, ಮಧುಪರ್ಕ ಸಂಗ್ರಹಿಸಿದ್ದಳು**
7. ಮತಂಗಾಶ್ರ ಮದಲ್ಲಿ ವಾಸವಿದ್ದ ತಪಸ್ವಿನಿ ಯಾರು? **ಶಬರಿ**
8. ರಾಮಲಕ್ಷ್ಮಣರಿಗೆ ಮತಂಗಾಶ್ರ ಮಕ್ಕೆ ಹೋಗಲು ಸೂಚಿಸಿದವರು ಯಾರು? **ಧನು ಎಂಬ ರಾಕ್ಷಸ**
9. ಶ್ರೀ ೕರಾಮನ ತಂದೆಯ ಹೆಸರೇನು? **ದಶರಥ**
10. ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆ ಏನು? **ಭೂಗರ್ಭದಲ್ಲಿ ಗಾಡಿಗಳನ್ನು ಹಾಕಿದ್ದಾರೆ**
11. ನೆಲ್ಸನ್ ರವರ ಮೂರ್ತಿ ಇರುವ ಸ್ಥಳದ ಹೆಸರೇನು? **ಟ್ರಫಾಲ್ಗರ್ ಸ್ಕ್ವೇರ್**
12. 'ವೆಸ್ಟ್ ಮಿನಿಸ್ಟರ್ ಅಬೆ' ಯಾರ ಸ್ಮಾರಕವಾಗಿದೆ? **ಮರಣಹೊಂದಿರುವ ಸಾರ್ವಭೌಮರ, ಕವಿಪುಂಗವರ ಸ್ಮಾರಕವಾಗಿದೆ**
13. ಆಂಗ್ಲ ಸಾಮ್ರಾ ಜ್ಯದ ವೈಭವ ಕಂಡು ಬರುವ ಓಣಿ ಯಾವುದು? **ಚೇರಿಂಗ್ ಕ್ರಾಸ್**
14. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು ? **1895**
15. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣ ಬದ್ಧರಾಗಿದ್ದರು ? **ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ**
16. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾ ರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು? **ಶಿವನಸಮುದ್ರದ ಬಳಿ ಕಾವೇರಿ ನದಿಗೆ ನಿರ್ಮಿಸಿದ ಯೋಜನೆ**
17. ಬ್ರಿ ಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು? **ಸರ್ ಪದವಿ**
18. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು? **ನಾಲ್ವಡಿ ಕೃಷ್ಣರಾಜ ಒಡೆಯರು**
19. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ? **ಇಂಜಿನಿಯರ್ಸ್ ದಿನಾಚರಣೆ**
20. ಮನೆ ಮಂಚಮ್ಮ ಯಾರು? **ಗ್ರಾಮದೇವತೆ**
21. . ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು? **ಕವಿ ಸಿದ್ದಲಿಂಗಯ್ಯ**
22. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ? **ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದು..**
23. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು? **ಭೂಮಿಗೆ ಬಿದ್ದ ಬೀಜ ,ಎದೆಗೆ ಬಿದ್ದ ಅಕ್ಷರ**
24. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು? **ಹಳಕಟ್ಟಿಯವರು**
25. ವಚನಕಾರರಿಗೆ ಯಾವುದು ದೇವರಾಗಿತ್ತು? **ಅವರ ಪ್ರಜ್ಞೆಯೇ ದೇವರಾಗಿತ್ತು**
26. ಅಶೋಕ್ ಪೈ ಅವರ ವೃತ್ತಿ ಯಾವುದು? **ಮನೋವೈದ್ಯರು**
27. ಭಗವದ್ಗೀತೆಯನ್ನು ರಚಿಸಿದವರು ಯಾರು? **ಮಹರ್ಷಿ ವೇದವ್ಯಾಸರು**
28. ಹುಲಿಗೆ ಪರಮಾನಂದವಾಗಲು ಕಾರಣವೇನು? **ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ**
29. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು? **ಹುಲಿಯಿಂದ ತಪ್ಪಿಸಿಕೊಳ್ಳಲು ತಿರುಗುವ ದೊಂಬರಾಡದಲ್ಲಿ**
30. ಶಾನುಭೋಗರ ಬ್ರ ಹ್ಮಾಸ್ತ್ರ ಯಾವುದು? **ಖಿರ್ದಿ ಪುಸ್ತಕ**
31. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು? **ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ**
32. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ? **ಪಂಚತಂತ್ರ**
33. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು? **ಹೊನ್ನಿನ ಕಳ್ಳತನದ ಆರೋಪ**
34. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು? **ದುಷ್ಟಬುದ್ಧಿಯು ವೃಕ್ಷವೇ ಸಾಕ್ಷಿ ಎಂದು ಹೇಳಿದ್ದನ್ನು ಕೇಳಿ**
35. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು? **ದೇವರು, ಗುರುಗಳು, ದ್ವಿಜರನ್ನು ಪೂಜೆ ಮಾಡುತ್ತಾ ಕಳೆದನು**
36. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು? **ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿಯ ವ್ಯಾಜ್ಯ ಪರಿಹರಿಸಲು, ವೃಕ್ಷಸಾಕ್ಷಿ ಕೇಳಲು**
37. ಸುಕುಮಾರಸ್ವಾಮಿಯ ತಂದೆಯ ತಾಯಿಗಳ ಹೆಸರೇನು? **ತಂದೆ ಸೂರದತ್ತ, ತಾಯಿ ಯಶೋಭದ್ರೆ**
38. ಸುಕುಮಾರ ಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು? **ಸೆಟ್ಟಿಯ ಪಟ್ಟ**
39. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು? **ನೈಮಿತ್ತಕನು ಎಂದು ಈತನು ಋಷಿಗಳನ್ನು ನೋಡುವನೋ ಅಂದು ತಪಸ್ಸಿಗೆ ಹೋಗುತ್ತಾನೆ ಎಂದು ಹೇಳಿದನು.**
40. ಯಶೋಭದ್ರೆ ಯು ರತ್ನಕಂಬಳಿಗಳನ್ನು ಯಾರಿಗೆ ಕೊಟ್ಟಳು? **ತನ್ನ 32 ಜನ ಸೊಸೆಯರಿಗೆ ಕೊಟ್ಟಳು**
41. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು? **ಮಜ್ಜನದ (ಸ್ನಾನ ಮಾಡುವ ಸಮಯದಲ್ಲಿ ) ಕೆಳಕ್ಕೆ ಬಿದ್ದಿತು**

**ಪದ್ಯಭಾಗ 3 ಪ್ರಶ್ನೆಗಳು 1*3=3**

1. ನದೀಜಲಗಳು ಏನಾಗಿವೆ? **ಕಲುಷಿತವಾಗಿವೆ.**
2. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು? **ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕಿದೆ**
3. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು? **ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲಿ ಮುನ್ನಡೆಸಬೇಕು**
4. ಕಾಡುಮೇಡುಗಳ ಸ್ಥಿತಿ ಹೇಗಿದೆ? **ಕಾಡುಮೇಡುಗಳು ಬರಡಾಗಿವೆ**
5. ಯಾವ ಎಚ್ಚರದೊಳು ಬದುಕಬೇಕಿದೆ ? **ಮತಗಳೆಲ್ಲವೂ ಪಥಗಳು ಎನ್ನುವ**
6. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ? **ಹಕ್ಕಿಯು ಕಣ್ಣು ರೆಪ್ಪೆ ಮಿಟುಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಮುಂದೆ ಹಾರುತ್ತಿದೆ**
7. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ? **ಕರಿ, ಬಿಳಿ, ಕೆಂಪು, ಹೊನ್ನಿನ ಬಣ್ಣಗಳಿವೆ.**
8. ಹಕ್ಕಿಯ ಕಣ್ಣುಗಳು ಯಾವುವು? **ಸೂರ್ಯ ಚಂದ್ರ**
9. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ? **ಸಾರ್ವಭೌಮರ ನೆತ್ತಿಯನ್ನು**
10. ಹಕ್ಕಿ ಯಾರನ್ನು ಹರಸಿದೆ? **ಹೊಸಗಾಲದ ಹಸುಮಕ್ಕಳನ್ನು**
11. ಹಕ್ಕಿಯು ಯಾವುದರ ಸಂಕೇತವಾಗಿದೆ? **ಕಾಲಪಕ್ಷಿಯ ಸಂಕೇತ**
12. ಹಕ್ಕಿಯ ಚುಂಚಗಳುಎಲ್ಲಿಯವರೆಗೆ ಚಾಚಿವೆ? **ದಿಗ್ಮಂಡಲಗಳ ಆಚೆ**
13. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು? **ಕುಂಪಣಿ ಸರಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು**
14. ಹಲಗಲಿಯ ನಾಲ್ವರು ಪ್ರ ಮುಖರು ಯಾರು? **ಹನುಮ,ಜಡಗ,ರಾಮ,ಬಾಲ**
15. ಹಲಗಲಿಯ ಗುರುತು ಉಳಿಯದಂತಾದದು ಏಕೆ? **ಬ್ರಿಟೀಷರು ಹಲಗಲಿಯನ್ನು ಲೂಟಿ ಮಾಡಿ ಬೆಂಕಿ ಹಚ್ಚಿದ್ದರಿಂದ**
16. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ? **ಹತಾರ ಕದನ**
17. ಹಲಗಲಿ ಗ್ರಾ ಮ ಎಲ್ಲಿದೆ? **ಮುಧೋಳ, ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿದೆ.**
18. ಶ್ರೀ ೕಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು? **ಕೃಷ್ಣನು ಕರ್ಣನ ಸಂಗಡ ಮೈದುನ ತನದ ಸರಸವನ್ನು ಮಾಡಿ ರಥದಲ್ಲಿ ಕೂರಿಸಿದನು**
19. ಅಶ್ವಿನೀದೇವತೆಗಳವರಬಲದಿಂದ ಜನಿಸಿದವರುಯಾರು? **ನಕುಲ-ಸಹದೇವ**
20. ಕುಮಾರವ್ಯಾಸನ ಆರಾಧ್ಯ ದೈವ ಯಾರು? **ಗದುಗಿನ ವೀರ ನಾರಾಯಣ**
21. ಕುಮಾರವ್ಯಾಸನಿಗಿರುವ ಬಿರುದು ಯಾವುದು? **ರೂಪಕ ಸಾಮ್ರಾಜ್ಯದ ಚಕ್ರವರ್ತಿ**
22. ನಾರಾಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?

**ವ್ಯಾಸರ ಸಂಸ್ಕೃತ ,ಮಹಾಭಾರತವನ್ನು ಕನ್ನಡದಲ್ಲಿ ಕರ್ಣಾಟ ಭಾರತ ಕಥಾಮಂಜರಿ ಎಂಬ ಕೃತಿ ರಚಿಸಿದ್ದರಿಂದ**

23. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
**ಗಿಳಿಯ ಬಣ್ಣದ ಹಸಿರಿನಂತಿದೆ**
24. ಕವಿ ನೋಡಿದ ಅಡಕೆಯ ತೋಟ ಎಲ್ಲಿದೆ? **ವನದ ಅಂಚಿನಲ್ಲಿದೆ**
25. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?
**ಹಸುರು ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯ ಹಚ್ಚ ಹಸಿರನ್ನು ಕಂಡು ಪ್ರೇರಿತವಾದ ಕವನವಾಗಿದೆ**
26. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
**ಮಕಮಲ್ಲಿನ ಹೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ**
27. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು? **ಭೀಷ್ಮಾಚಾರ್ಯರಿಗೆ**
28. ದಿನಪಸುತ ಎಂದರೆ ಯಾರು? **ಕರ್ಣ**
29. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ? **ಭೀಮ ಮತ್ತು ಅರ್ಜುನ**
30. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು? **ದುರ್ಯೋಧನ**
31. ಅಂತಕಾತ್ಮಜ ಎಂದರೆ ಯಾರು? **ಧರ್ಮರಾಯ**
32.ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು? **ಲಕ್ಷ್ಮೀಶ**
33. ಯಜ್ಞಾಶ್ವವನ್ನು ಕಟ್ಟಿದವರು ಯಾರು? **ಲವ**
34. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು? **ಉತ್ತರೀಯದಿಂದ**
35. ಮುನಿಸುತರು ಹೆದರಲು ಕಾರಣವೇನು?
**ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು**
**36.** ದ್ರೋಣನು ಪರಶುರಾಮನಲ್ಲಿಗೆ ಏಕೆ ಬಂದನು?
**ದ್ರವ್ಯವನ್ನು (ಹಣವನ್ನು) ಬೇಡುವುದಕ್ಕಾಗಿ**
**37.**ದ್ರೋಣನು ಯಾರೊಡನೆ ಪರಶುರಾಮನಬಳಿಗೆ ಬಂದನು? **ಅಶ್ವತ್ಥಾಮನೊಡನೆ**
**38.**ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?
**ವಾರಣ,ವಾಯುವ್ಯ,ಆಗ್ನೇಯ,ಐಂದ್ರಾದಿ ಪ್ರಧಾನ ಅಸ್ತ್ರಗಳನ್ನು ಕೊಟ್ಟನು.**

ಪಠ್ಯಪೋಷಕ ಅಧ್ಯಯನ ಭಾಗ 1 ಪ್ರಶ್ನೆ 1*1=1

1. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ? **ಮುಸುರೆ ತಿಕ್ಕುತ್ತಿದ್ದಾಳೆ**
2. ಅಮ್ಮ ಎಲ್ಲಿ ಮಲಗಿದ್ದಾಳೆ? **ಗುಡಿಸಲಿನಲ್ಲಿ**
3. ಯಾರಿಗೆ ವಸಂತ ಮುಖ ತೋರಲಿಲ್ಲ?
**ಕಮ್ಮಾರ,ನೇಕಾರ,ಕುಂಬಾರ,ಕೇರಿಯ ಮಾರ ಮತ್ತು ಪುಟ್ಟಿಗೆ**
4. ಪುಟ್ಟಿಯ ಪ್ರಶ್ನೆಗಳೇನು? **ಗುಡಿಸಲೊಳಗೆ ಬರಲು ವಸಂತ ಹೆದರಿದನೇ?, ಹರಿದ ಚಿಂದಿ ಬಟ್ಟೆಗಳ ಕಂಡು ಮರುಗಿದನೇ?**
5. ಒಡೆಯನ ಅಂಗಳದಲ್ಲಿ ಮೈತುಂಬಿ ನಿಂತಿರುವುದು ಏನು? **ಮಾವಿನ ಮರಗಳು**
6. ಒಡೆಯನ ಅಂಗಳದಲ್ಲಿ ಯಾವ ಸಂಭ್ರಮವಿದೆ?
ಹಸಿರು ತುಂಬಿ ನಿಂತ ಮಾವಿನ ಮರಗಳು,ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು ಮನತುಂಬಿ ಹಾಡುವ ಕೋಗಿಲೆಗಳು,ಕಡಲುಕ್ಕಿ ಹರಿಯುವಂತಹ ಸಂಭ್ರಮವಿದೆ
7.ಏನನ್ನು ಕಂಡು ಪುಟ್ಟಿ ಮೂಕವಿಸ್ಮಿತಳಾಗಿದ್ದಾಳೆ?
**ಹೊಳೆವ ರಂಗೋಲಿಯಲಿ ಥಳಥಳಿಸುವ ಬಾಲ ರವಿಯನ್ನು ಕಂಡು**

******************************************************

ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 10*2= 20

ಗದ್ಯಭಾಗ 4 ಪ್ರಶ್ನೆಗಳು 4*2= 08

**1.ಡಾಕ್ಟರ್ ಗೆ ವಿಮಾನದ ಪೈಲಟ್ ಏನು ಹೇಳಿದನು?**
–"ಡಾಕ್ಟರ್"! ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. –ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. –ಎಲ್ಲಾದರೂ ಹೇಗಾದರೂ ಇಳಿಯೋಣ ವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ ಎಂದು ವಿಮಾನದ ಪೈಲಟ್ ನುಡಿದನು.
**2. ಮಹಿಳೆಯ ಆರ್ತ ನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**
–ಆ ಮಹಿಳೆ ಯಾವರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ?
– ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು?
–ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.

**3.ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾವುವು?**
–ನೋಡಪ್ಪ ನಾನು ಈ ಊರಿಗೆ ಬಂದು 50 ವರ್ಷಗಳಾದರೂ ಆಗಿರಬಹುದು –ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೆ ಇದ್ದೆವು.
– ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು ಈಗಲೂ ಇದೆ ಎನ್ನು ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ ಯುದ್ದ ಎಂದು ತಿರಸ್ಕಾರದಿಂದ ನುಡಿದಳು.
**4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**
*"ಇಷ್ಟು ವರ್ಷಗಳಿಂದಲೂ ಅಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ.
–ಈ ಯುದ್ಧವಲ್ಲದೇ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ
– ದೇವರೇ ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯ ಎಂದು ನಿರಾಸೆಯಿಂದಹೇಳಿದಳು.

---

**5. ಫೂಲವರ್ತ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**
ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ ಎಲಕ್ಟ್ರಿಕ್ ದೀಪದ ಸಾಮಾನು ಫೋಟೋ, ಅಡವಿಯ ಹೂವು,ಯುದ್ಧ ಸಾಮಗ್ರಿ ಎಲ್ಲವೂ ಇಲ್ಲಿ ದೊರೆಯುತ್ತಿದ್ದವು.
**6.ಲಂಡನ್ನಿನ ಹೆಣ್ಣು ಮಕ್ಕಳು ಯಾವಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?**
– ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ ಒಬ್ಬ ಹೆಣ್ಣು ಮಗಳು.
–ಸಿನಿಮಾ ಗೃಹದಲ್ಲಿ ನಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು –ಕಾಲೇಜಿನ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ.
**7.ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**
–ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ.
–ಕೋಟಿಗಟ್ಟಲೆ ಟೊಪ್ಪಿಗೆಗಳನ್ನು ಪರೀಕ್ಷಿಸಿ ಇದನ್ನು ಮನಗಾಣಬಹುದು.
–ಮನುಷ್ಯನಂತೆ ಟೊಪ್ಪಿಗೆಯಲ್ಲವೇ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ"
**8. ಪೊಯೆಟ್ ಕಾರ್ನರ್ ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?**
* ಪೊಯಟ್ ಕಾರ್ನರ್ ನಲ್ಲಿ ಕಿಪ್ಲಿಂಗ್, ಹಾರ್ಡಿ,ಮ್ಯಾಕಾಲೆ,ಜಾನ್ಸನ್,
* ಗೋಲ್ಡ್ ಸ್ಮಿತ್ , ಡ್ರಾಯ್ ಡನ್, ಬೆನ್ ಜಾನ್ಸನ್, ವರ್ಡ್ಸ್‌ವರ್ತ್
**9. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?**
* ಇಂಗ್ಲೆಂಡಿನ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರು ಇದರ ಮೇಲೆ ಕೂರುತ್ತಾರೆ. ಸ್ಟೋನ್ ಆಫ್ ಸ್ಕೋನ್ ಎಂದು ಇದರ ಹೆಸರು. * ಮೂರನೆ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದನಂತೆ * ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ.

---

**10. ಅಶೋಕ್ ಪೈ ಹೇಳಿದ ಸಂಶೋಧನಾ ಸತ್ಯವೇನು ?**
* ಟೆಲಿವಿಷನ್ ನೋಡುತ್ತಿದ್ದವರ ದುಃಖ ಅಥವ ಸಂತಸದ ಭಾವನೆಯು * ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ. * ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಎಲ್ಲ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆ. * ಎಂಬುದು ಅಶೋಕ ಪೈ ರವರು ಹೇಳಿದ ಸತ್ಯವಾಗಿದೆ.
**11. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು?ವಿವರಿಸಿ**
* ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ ಜ್ಞಾನ ಮಾತ್ರ ವಲ್ಲ. * ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. * ಅದು ಕೇಳಿ ತಿಳಿದಿದ್ದಲ್ಲ ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ. * ಅದು ತರ್ಕವಲ್ಲ ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

---

* **12. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**
* ರಾತ್ರಿ ಯಾಗಿದ್ದರಿಂದ ಶಾನುಬೋಗರ ಮನಸ್ಸಿನಲ್ಲಿ ಭಯ ಅವರಿಸಿತ್ತು. * ಹೊಟ್ಟೆಯೂ ಹಸಿಯುತ್ತಿತ್ತು. * ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಶಾನುಬೋಗರು ಯೋಚಿಸಿದರು.
**13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?**


agnidivya.blogspot.com

* ಏಕೆಂದರೆ ಯಾವ ನಾಡಿನಲ್ಲಿ ಶ್ರೀ ೀರಾಮನಂತ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರ ಂಥ ಉದ್ಭವಿಸಿತೋ
* ಅಂಥಹ' ಭರತಖಂಡದ ಹುಲಿಗಳು ಶತೃಗಳಾದರೂ ಸರಿಯೆ ಬೆನ್ನು ತಿರುಗಿಸಿರುವಾಗ ಕೊಲ್ಲುವುದಿಲ್ಲ. ಅದು ಧರ್ಮವಲ್ಲ.

**14. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

* ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು.. * ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಸದ್ದು ಮತ್ತು ರೈತರ ಮಾತನ್ನು ಕೇಳಿದ ಹುಲಿ ನಿರಾಶೆಯಿಂದ ಪಲಾಯನ ಮಾಡಿತು * ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಗಲಭೆ ಮಾಡುತ್ತ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಬಂದರು. * ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನಿರೆರಚಿ ಎಚ್ಚರಿಸಿದರು.

---

15. **ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?**

* ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸುಮ್ಮನೆ ಕೂರುವವರಲ್ಲ. ಮತ್ತೆ ವ್ಯಾಪರಕ್ಕೆ ಹೋಗಬೇಕಾಗುತ್ತದೆ. * ಆ ಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು
* ಉಳಿದ ಹೊನ್ನನ್ನೆಲ್ಲ ಇಲ್ಲಿಯೇ ಇಟ್ಟು ಬಿಡೋಣ. ಎಂದು ಸಲಹೆ ಯಿತ್ತನು.

**16. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

* ದುಷ್ಟಬುದ್ಧಿಯು ತನ್ನ ತಂದೆಯನ್ನು ಏಕಂತದಲ್ಲಿ ಕರೆದು * " ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ *,ನಮ್ಮ ಕುಟುಂಬವು ಹಲವು ಕಾಲ ಸುಖವಾಗಿ ಬಾಳಬಹುದು.* ನೀನು ಆ ಮರದ ಪೊಟರೆಯಲ್ಲಿಅಡಗಿದ್ದು ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡ ಎಂದು ಹೇಳು"ಎಂದು ಹೇಳಿದನು.

**17. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**

* ಧರ್ಮಧಿಕರಣರು ವಟವೃಕ್ಷಕ್ಕೆ ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಪವಿತ್ರ ವಾದ ಮರ. * ಆಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ.* ನೀನು ತಪ್ಪದೇ ನಿಜವನ್ನು ನುಡಿ" ಎಂದು ಹೇಳಿದರು.

---

**18. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?**

* ಸುಕುಮಾರ ಸ್ವಾಮಿಗೆ ಮೂವತ್ತೆರಡು ಲತಾಗೃಹಗಳು * ಅತ್ಯಂತ ಸುಂದರ ವಾದ ಮೂವತ್ತೆರಡು ಮಂದಿ ದಿವ್ಯವಾದ ಸ್ತ್ರೀಯರು ಇದ್ದರು. *
ಮೂವತ್ತೆರಡು ಬಗೆಯ ನಾಟ್ಯಗಳು, ಮೂವತ್ತೆರಡು ಕೋಟಿ ಹೊನ್ನು,
* ಐದು ಬಗೆಯ ರತ್ನಗಳು ಮುಂತದವುಗಳನ್ನು ಹೊಂದಿದ್ದನು.
* ಹೀಗೆ ಸುಕುಮಾರನು ಎಲ್ಲ ರಿತಿಯ ಸುಖಗಳನ್ನು ಅನುಭವಿಸುತ್ತಿದ್ದನು.

19. **ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?**

* ಲಕ್ಷದಿನಾರಗಳ ಬೆಲೆಬಾಳುವ ರತ್ನಗಂಬಳಿಗಳನ್ನು ಸುಕುಮಾರಸ್ವಾಮಿಯ ತಾಯಿಯು ಖರೀದಿಸಿದಳು. * ಮತ್ತು ಅವುಗಳನ್ನು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ಸೊಸೆಯಂದಿರಿಗೆ ಪಾದುಕೆಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು. * ಈ ಸಂಗತಿಯನ್ನು ತಿಳಿದು ಅರಸನು ಆಶ್ಚರ್ಯ ಪಟ್ಟನು.

**20. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದುಕೊಳ್ಳಲು ಕಾರಣ ವೇನು?**

* ಬಿಳಿ ಸಾಸುವೆ ಕಾಳುಗಳು ಸುಕುಮರಸ್ವಾಮಿ ಕುಳಿತಿದ್ದ ಆಸನದಲ್ಲಿ ಒತ್ತುತ್ತಿದ್ದುದರಿಂದ ಸೊಂಟವನ್ನು ಅತ್ತಿತ್ತ ಒರಳಾ'ಡಿಸುತ್ತಿದ್ದುದು,
* ದೀಪ ನೋಡಿದಾಗ ಅವನಿಗೆ ಕಣ್ಣೀರು ಸುರಿಯುತ್ತಿದ್ದುದು,
* ಅಲ್ಲದೆ ಸುಕುಮಾರ ಸ್ವಾಮಿ ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗುತ್ತ ಇನ್ನರ್ಧ ಉಗುಳುತ್ತಾ ಇದ್ದುದನ್ನು ನೋಡಿದ * ಅರಸನು ಸುಕುಮರಸ್ವಾಮಿಗೆ ವ್ಯಾದಿಯಿದೆ ಎಂದು ಭಾವಿಸಿದನು.

**21. ಸುಕುಮಾರ ಸ್ವಾಮಿಯ ವ್ಯಾದಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು?**

* ಅವಳು "ಒಡೆಯರೇ,ಇವು ರೋಗಗಳಲ್ಲ. * ಮಂತ್ರಾ ಕ್ಷತೆಯಾಗಿ ಹಾಕಿದ ಬಿಳಿ ಸಾಸಿವೆಗಳು ಒತ್ತಿದುದರಿಂದ ಸಹಿಸದಾದನು. * ಅವನು ಯಾವಾಗಲು ಮಾಣಿಕ್ಯ ರತ್ನದ ಬೆಳಕಿನಲ್ಲಿ ಇರುವುದರಿಂದ ದೀಪದ ಬೆಳಕನ್ನು ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತಿತ್ತು. * ತಾವರೆ,ನೈದಿಲೆ ಹೂಗಳ ಸುವಾಸನೆ ಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರ ಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ * ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು, ಉಳಿದ ಅನ್ನವನ್ನು ಉಗುಳುತ್ತಿದ್ದನು"ಎಂದು ಹೇಳಿದಳು.

---

22. ರಾಮನು ಗಿರಿವನವನ್ನು ಏನೆಂದು ಪಾರ್ಥಿಸಿದನು?

* ಎಲೈ ಗಿರಿವನವೇ ನನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ. * ಹೇಳಿರಿ ನನ್ನ ಪ್ರಿ ೀತಿಯ ರಾಣಿ ಸೀತೆಯು ದೊರೆಯುವಳೇ? ದೊರೆಯುವುದಿಲ್ಲವೇ? * ಅವಳು ಇರುವ ನೆಲೆಯನ್ನು ಯಾರಾದರೂ ತಿಳಿದಿರುವಿರಾ? * ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಗಿರಿವನವನ್ನು ಪ್ರಾ ರ್ಥಿಸಿದನು.

23. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

* ತಾಳಿಕೋ ಅಣ್ಣಾ ತಾಳಿಕೋ ಸೂರ್ಯನೇ ತೇಜಗೆಡಲು ಜಗಕೆ ಕಾಂತಿಯನ್ನು ನೀಡುವವರು ಯಾರು? * ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು? ಎಂದು ಸಂತೈಸಿದನು.

24. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

* ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, * ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, * ಸುವಾಸನೆಯೊಂದ ಕೂಡಿದ ಬಾಡದ ಹೋವುಗಳನ್ನು ಸಂಗ್ರ ಹಿಸಿ ಸಿದ್ದತೆ ಮಾಡಿಕೊಂಡಿದ್ದಳು.

**25.ಶಬರಿಯು ರಾಮ ಲಕ್ಷ್ಮಣರನ್ನು ಹೇಗೆ ಸಂತೈಸಿದಳು ?**

* ಶಬರಿಯು ರಾಮ ಲಕ್ಷ್ಮಣರನ್ನು ಕಂಡು ಬೆರಗಾಗಿ ,ಹತ್ತಿರಕ್ಕೆ ಬಂದು * ಮೈಮುಟ್ಟಿ,ಕಾಲಿಗೆ ಬಿದ್ದು ನಮಸ್ಕರಿಸಿ,ಕೈಯನ್ನು ಕಣ್ಣಿಗೊತ್ತಿಕೊಂಡಳು. * ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. *ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದು ತಂದೆನು ಎಂದು ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**26.ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?**

* ನಾವು ನಿನ್ನ ಪ್ರಿ ೀತಿಯ ಸ್ವಾಗತದಿಂದ ಸಂತಸಗೊಂಡೆವು. * ನಿನ್ನ ಸುಖದಲ್ಲಿ ನಮ್ಮ ಸುಖವನ್ನು ಕಂಡೆವು. * ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. * ನಾವು ನಿನಗೆ ಎಂದೆಂದಿಗೂ ಋಣಿಗಳು ಎಂದು ಹೇಳಿದರು.

---

**27. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

ನಗರ ಪಾಲಿಕೆಗಳು ಹಾಗೂ ಪಂಚಾಯಿತಿಗಳು ಕಾರ್ಯ ನಿರ್ವಹಿಸಲು ಆರಂಭ ಮಾಡಲಾಯಿತು. 1.ಗ್ರಾ ಮ ನೈರ್ಮಲ್ಯೀಕರಣ, 2,ವೈದ್ಯ ಸಹಾಯ, 3. ವಿದ್ಯಾ ಪ್ರ ಚಾರ,4. ನೀರಿನ ಸೌಕರ್ಯ, 5. ಪ್ರ ಯಾಣ ಸೌಲಭ್ಯ ಮುಂತಾದ ಕ್ಷೇತ್ರ ಗಳು ಸ್ವಯಂ ಆಡಳಿತ ಕ್ಷೇತ್ರ ಗಳಾದವು.

**28.ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?**

*ಶಿವನ ಸಮುದ್ರ ದ ಬಳಿ ಕಾವೇರಿ ನದಿ ಕಣಿವೆಯಲ್ಲಿ ಏಷ್ಯಾದ ಮೊಟ್ಟ ಮೊದಲ ಜಲ ವಿದ್ಯುತ್ ಯೋಜನೆಯು ಕ್ರಿ , ಶ 1900 ರಲ್ಲಿ ಪ್ರಾ ರಂಭವಾಯಿತು. * ಕ್ರಿ .ಶ. 1907 ರಲ್ಲಿ ಮಾರಿಕಣಿವೆಯಲ್ಲಿ ವಾಣಿವಿಲಾಸ ಸಾಗರ ಹಣೆಕಟ್ಟನ್ನು ಕಟ್ಟಲಯಿತು. * ಕ್ರಿ .ಶ. 1911 ರಲ್ಲಿ ಕಾವೇರಿ ನದಿಗೆ ಕನ್ನಂಬಾಡಿಯಲ್ಲಿ ಕೃಷ್ಣರಾಜ ಸಾಗರ ಹಣೆಕಟ್ಟನ್ನು ನಿರ್ಮಿಸಲಾಯಿತು.

**29.ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

* ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. *ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. * ಅದು ಕೆಲವೇ ಜನರ ಸ್ವತ್ತಾಗದೆ ಪಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು. ಎಂದು ಹೇಳಿದರು.

**30. ನೆಹರೂ ಅವರು ಸರ್.ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ ?** "ದುರಾದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಮತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ: ಹೆಚ್ಚು ಕೆಲಸಮಾಡಿದ್ದೀರಿ: ಅದನ್ನು ನಾವು ತಮ್ಮಿಂದ ಕಲಿಯೋಣ"

**31. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ಕ್ರಿ .ಶ 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವ ವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್ ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರ ಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

**32. ಮಹಾರಾಣಿ ವಾಣವಿಲಾಸ ಅವರು ನಾಲ್ವಡಿ ಕೃಷ್ಣರಾನ ಒಡೆಯರನ್ನು ಒಬ್ಬ ಸಮರ್ಥ ಆಡಳಿತಗಾರರನ್ನಾಗಿ ಮಾಡಿದ್ದು ಹೇಗೆ ?**
1895ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವಾದಾಗ ಅವರು ಕೇವಲ 10 ವರ್ಷದ ಬಾಲಕನಾಗಿದ್ದುದರಿಂದ ಮಹಾರಾಣಿ ವಾಣಿವಿಲಾಸರವರು ರೀಜೆಂಟರಾಗಿ ಆಡಳಿತ ನಿರ್ವಹಣೆ ಮಾಡಿದರು. ರಾಜಕುಮಾರರಿಗೆ ಸೂಕ್ತ ವಿದ್ಯಾಭ್ಯಾಸ,ಆಡಳಿತ ತರಬೇತಿ ಇವುಗಳನ್ನು ಮಹಾರಾಣಿಯವರು ತೀವ್ರ ನಿಗಾವಹಿಸಿ ನಡೆಸಿದುದರ ಪರಿಣಾಮವಾಗಿ, ನಾಲ್ವಡಿ ಕೃಷ್ಣರಾಜ ಒಡೆಯರು ಒಬ್ಬ ಸಮರ್ಥ ಆಡಳಿತಗಾರರಾದರು.

**33. ಮಾದರಿ ಮೈಸೂರು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹೇಗೆ ನಿರ್ಮಾಣಗೊಂಡಿತು?** ದಿವಾನರಾಗಿದ್ದ ಕೆ.ಶೇಷಾದ್ರಿ ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಕಂಕಣಬದ್ಧರಾದರು. ಇವರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾ ಪ್ತವಾಯಿತು.

ಪದ್ಯಭಾಗ 2 ಪ್ರ ಶ್ನೆಗಳು 2*2=4

1. **ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**
* ಕ್ರಿ .ಶ. 1857ರ ಪ್ರ ಥಮ ಸ್ವಾತಂತ್ರ್ಯ ಸಂಗ್ರಾ ಮದ ನಂತರ ಬ್ರಿ ಟಿಷ್ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ * ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು * ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

2. **ಹಲಗಲಿಗೆ ದಂಡು ಬರಲು ಕಾರಣವೇನು?**
* ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು * ಬ್ರಿ ಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ * ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. * ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು * ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

3. **ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**
* ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬಿಟಿಷರ ದಂಡು ಬಂದಿತು. * ಬಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. * ಬಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

4. **ಲಾವಣಿ ಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?**
* ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪಕಾರ * ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕ'ಟ್ಟಿದ ಹಾಡನ್ನು ಲಾವಣಿಗಳೆನ್ನುವರು. * ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು

---

5. **ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತದೆ?**
* ಕವಿಗೆ ನವರಾತಿಯಲ್ಲಿ ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸ,ಮುಗಿಲು,ಗದ್ದೆಯ ಬಯಲು,ಮಲೆ,ಕಣಿವೆ * ಸಂಜೆಯ ಬಿಸಿಲು,ಕಾಡಂಚಿನ ಅಡಕೆಯ ತೋಟ ,ಹೂವಿನ ಕಂಪಿನಲ್ಲಿ ಎಲರಿನ ತಂಪಿನಲ್ಲಿ ಹಕ್ಕಿಯ ಕೊರಲಿನಲ್ಲಿ ಹೀಗೆ ಆಗಸದಿಂದ ಬಿಸಿಲವರೆಗೆ ಕವಿಗೆ ಹಸುರು ಕಾಣುತ್ತಿದೆ.

6. **ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**
* ಹಸುರಾದ ಭೂಮಿ,ಆಗಸ,ಮುಗಿಲು,ಗದ್ದೆಯ ಬಯಲು ಮಲೆ ,ಕಣಿವೆ ; ಸಂಜೆಯ ಬಿಸಿಲು ಕಾಡಂಚಿನ ಅಡಕೆಯ ತೋಟ ಇವೆಲ್ಲಾ **ಕಣ್ಣಿಗೆ,** ಗೋಚರ ವಾದರೆ * ಹೂವಿನ ಕಂಪಿನ ಹಸುರು **ಮೂಗಿಗೆ, *** ಎಲರಿನ ತಂಪಿನ ಸ್ಪರ್ಷ **ಚರ್ಮಕ್ಕೆ, *** ಹಕ್ಕಿಯ ಕೊರಲಿನ ಚಿಲಿಪಿಲಿ ಗಾನ **ಕಿವಿಗೆ ,*** ಹೀಗೆ ಪ್ರ ಕೃತಿಯ ಹಸುರು ಸಕಲ ಇಂದ್ರಿ ಯಗಳನ್ನು ವ್ಯಾಪಿಸಿದೆ ಎಂದು ಕವಿ ವರ್ಣಿಸಿದ್ದಾರೆ.

7. **'ಕವಿಯ ಆತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**
ಕವಿಯ ಆತ್ಮವು ಹಸುರುಗಟ್ಟಲು, ಆಶ್ವಯುಜ ಮಾಸದ ನವರಾತ್ರಿ ಯಲ್ಲಿ ವಿಶಾಲವಾದ ಶ್ಯಾಮಲ ಕಡಲು ಹಸುರಾಗಸ, ಹಸರುಮುಗಿಲು,ಹಸಿರು ಗದ್ದೆಯ ಬಯಲು, ಹಸುರಿನ ಮಲೆ; ಹಸುರು ಕಣಿವೆ; ಸಂಜೆಯ ಬಿಸಿಲು; ಆಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ ; ಫಲಭರಿತ ಅಡಕೆಯತೋಟ; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಮುಂತಾದ ಅಂಶಗಳು ಕವಿಯ ಆತ್ಮವು ಹಸುರುಗಟ್ಟಲು ಕಾರಣವಾದವು

9. **ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**
* ಶೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. * ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. * ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರ ಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

10. **ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**
* ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು. * ಇದು ಅವನ ಯಜ್ಞ ಕುದುರೆ. * ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

11. **ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**
* ಲವನು ಆಶ್ರ ಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು * "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಹೇಳಿದರು. * ಆಗ ಲವನು ನಗುತ "ಬ್ರಾ ಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

---

12. **ಪರಶುರಾಮನು ಮಣ್ ್ಣನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?**
* ಪರಶುರಾಮನು ತನ್ನಲ್ಲಿ ಇದ್ದದ್ದನ್ನೆಲ್ಲಾ ಬೇಡಿದವರಿಗೆ ದಾನ ಮಾಡಿದ್ದರಿಂದ ಆತನ ಬಳಿ ಬಿಲ್ಲು–ಬಾಣಗಳಲ್ಲದೆ ಬೇರೇನೂ ಇರಲಿಲ್ಲ. * ಆ ಸಂಧರ್ಭದಲ್ಲಿ ದ್ರೊ ೀಣನು ಅಶ್ವತ್ಥಾಮನ ಜೊತೆಯಲ್ಲಿ ಏನಾದರೂ ದ್ರ ವ್ಯ ಬೇಡಲೆಂದು ಪರಶುರಾಮನ ಬಳಿಗೆ

ಬಂದನು. * ಆಗ ಪರಶುರಾಮನು ತನ್ನ ಬಳಿ ಚಿನ್ನದ ಪಾತ್ರೆ ಗಳಿಲ್ಲದುದರಿಂದ ದ್ರೋಣರಿಗೆ ಮಣ್ಣಿನ ಪಾತ್ರೆ ಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

**13. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು?**

* ದುಪದನು ದೋಣರಿಗೆ "ನೀನು ಯಾರೆಂದು ನನಗೆ ತಿಳಿದಿಲ್ಲ ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೋ? – ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂಆಗುತ್ತಾರೆಯೇ – ಎಂಬ ಮಾತುಗಳಿಂದ ದ್ರೋಣಾಚಾರ್ಯರನ್ನು ಹೀಯಾಳಿಸಿದನು.

**14. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು?**

– ದ್ರೋಣನು 'ಎಲೋಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎಂಬ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? * ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ * ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ.* ಈ ಸಭಾವಲಯದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನೀನು ಬೆಚ್ಚುವಂತೆ ಕಟ್ಟಿಸದೇ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ?" ಎಂದು ಪ್ರತ್ಯುತ್ತರ ಕೊಟ್ಟನು.

---

**ಈ ಕೆಳಗಿನ ಪ್ರಶ್ನೆಗಳಿಗೆ ಪದ್ಯಗಳ ಸಾರಾಂಶದಲ್ಲಿ ಎಲ್ಲಾ ಎರಡು ಅಂಕದ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ.**

1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?
2. ಕಾಡುಗಳನ್ನು ಹೇಗೆ ಮುಟ್ಟಬೇಕಿದೆ?
3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ
4. ಸೇತುವೆಯಾಗಬೇಕಿದೆ?
5. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆಬದುಕಬೇಕು ?

---

6. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
7. ಹೊಸಹಗಾಲದ ಹಸುಮಕ್ಕಳನ್ನು ಕಹಕ್ಕಿ ಹೇಗೆ ಹರಸಿದೆ?
8. ಹಕ್ಕಿಯು ಯಾವ ಮೇರೆ ಮೀರಿ ,ನೀರನು ಹೀರಿದೆ?
9. ಹಕ್ಕಿಯು ಎಲ್ಲಿಯವರೆಗು ತನ್ನ ಚುಂವ ಚಾಚಿದೆ ಯಾವ ಹೊಂಚನ್ನು ಹಾಕಿದೆ?
10. ಹಕ್ಕಿಯ ಗರಿಯಲ್ಲಿರುವ ಬಣ್ಣಗಳು ಯಾವುವು?
11. ಹಕ್ಕಿಯು ಹೇಗೆ ಸಾರ್ವಬೌಮರ ನೆತ್ತಿಯನ್ನು ಕುಕ್ಕಿದೆ ?
12. ಹಕ್ಕಿಯು ಯಾವ ವ್ಯಗದಲ್ಲಿ ಹಾರುತ್ತಿದೆ ಎಂದು ಕವಿ ಹೇಳಿದ್ದಾರೆ?

---

13. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?
14. ಕುಂತಿ,ಮಾದರಿಯರು ಯಾರದಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?
15. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
16. ಕೃಷ್ಣನು ಕೌರವೇಂದರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?
17. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

---

18. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯಧನ ಹೇಗೆ ವಿವರಿಸುತ್ತಾನೆ.
19. ಈ ನೆಲನೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?
20. ಪಾರ್ಥ ಬೀಮರ ಬಗೆಗೆ ದುರ್ಯೋಧನನ ಅಭಿಪ್ರಾಯನವೇನು?
21. ಏತಕ್ಕಾಗಿ ತಾನು ಯುದ್ಧ ಬೂಮಿಗೆ ಬಂದದ್ದು ಎಂದು ಬೀಷ್ಮನಿಗೆ ದುಯೋಧನ ಹೇಳುತ್ತಾನೆ?

ಪಠ್ಯಪೋಷಕ ಅಧ್ಯಯನ ಭಾಗ 2 ಅಂಕದ 4 ಪ್ರಶ್ನೆಗಳು 4*2 = 08

**1.ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?**

* ಜಾತಿ ಎಂಬುದು ಸಮಜದ ಒಂದು ಆಂತರಿಕ ಭಗವಗಿದೆ.ಹಿಂದೆ ಅದು ವಿಕಸವಗುತ್ತಿತ್ತು. * ಈಗ ಅದು ಘನೀಭೂತವಾಗಿದೆ. * ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ. * ಎಂದು ಜಾತಿ ವ್ಯವಸ್ಥೆಯ ಬಗ್ಗೆ ಸ್ವಾಮಿವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ.

**2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಏಕೆ?**

* ಕೊಮುವಾದವು ಏಕ ಧರ್ಮ ಮತ್ತು ಏಕ ಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ * ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಆದ್ದರಿಂದ ಸ್ವಾಮಿ ವೇಕಾನಂದರು ಕೋಮುವಾದದ ಕಟ್ಟ ವಿರೋಧಿಯಾಗಿದ್ದರು.

**3. ವಿವೇಕಾನಂದರು ಚಿಕಾಗೋ ಸಮ್ಮೇಳನದಲ್ಲಿ ಹೇಳಿದ್ದೇನು?**

* ಚಿಕಾಗೂದ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತಾ,

* ಸ್ವಮತಾಭಿಮಾನ, ಅನ್ಯಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ, ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. * ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಬಹಳ ಮುಂದುವರೆಯುತ್ತಿತ್ತು. ಎಂದುಹೇಳಿದರು

**4) ಸ್ವಾಮಿ ವಿವೇಕಾನಂದರು ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು ಏಕೆ?**

ಸ್ವಾಮಿ ವಿವೇಕಾನಂದರಿಗೆ ದೈಹಿಕ ಹಸಿವನ್ನು ಹಿಂಗಿಸುವುದು ಅವರ ಮೊದಲ ಆದ್ಯತೆ; ಆನಂತರ ಆತ್ಮದ ಹಸಿವು,ವೇದಾಂತದ ಹಸಿವು ಸಾಂಸ್ಥಿಕವಾದ ಹಸಿವು. ಈ ಕಾರಣದಿಂದಾಗಿಯೇ ಅವರು ಯಾವತ್ತೂ ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ. ಬದಲಾಗಿ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು.

**5.ಶೂದ್ರರಿಗೆ ಸ್ವಾಮಿ ವಿವೇಕಾನಂದರು ಏನೆಂದು ಕರೆ ಕೊಟ್ಟರು?**

ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿ ಶೂದ್ರರು,ಅಸ್ಪೃಶ್ಯರು ಸ್ವಾತಂತ್ರ್ಯಹೀನರಾಗಿ ಗುಲಾಮತನ ಅನುಭವಿಸುವುದನ್ನು ಟೀಕಿಸುವ ಅವರು ಶೂದ್ರ ವರ್ಗ ತನ್ನ ಊಳಿಗ ಸ್ವಭಾವವನ್ನು ಬಿಟ್ಟು ಹೊರಬರಬೇಕೆಂದು ಕರೆಕೊಡುತ್ತಾರೆ. ಮುಂದೊಮ್ಮೆ ಶೂದ್ರರು ತಮ್ಮ ಶೂದ್ರತ್ವದ ಶಕ್ತಿಯಿಂದಲೇ ಮೇಲೇಳುವ ಕಾಲ ಬರುತ್ತದೆ. ಎಂದು ಭಾವಿಸುತ್ತಾರೆ.

**6. ಮಾನವತಾವಾದ , ಮನುಷ್ಯತ್ವದ ಮಹಿಮೆಯನ್ನು ಕುರಿತು ವಿವೇಕಾನಂದರ ಅಭಿಪ್ರಾಯವೇನು ?**

ಮನುಷ್ಯತ್ವದ ಮಹಿಮೆಯನ್ನು ಎಂದಿಗೂ ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹೆಂದೆ ಇರಲಿಲ್ಲ. ಮುಂದೆ ಬರುವುದಿಲ್ಲ. ಕ್ರೈಸ್ತ,ಬುದ್ಧ,ಕೃಷ್ಣ, ರಾಮರೆಲ್ಲ ಅಹಮಸ್ಮಿ ಎಂಬ ಮಹಾವಾರಿಧಿಯ ತರಂಗಗಳು ಮಾತ್ರ ಎಂದು ಘೋಷಿಸಿದರು.

**7. ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ತಿಳಿಸಿ? ವಿವೇಕಾನಂದರು ಇಂದಿಗೂ ಸತ್ಯ ಹೇಗೆ?**

ವಿವೇಕಾನಂದರೆಂದರೆ ಸಾಮಾಜಿಕ ಸಂಕಟ, ಸಿಟ್ಟು, ಸ್ಫೋಟ, ಸ್ಪಷ್ಟತೆಗಳ ರೂಪಕ. ವಿವೇಕಾನಂದರ 'ಧೀರೋದಾತ್ತ' ನಿಲುವುಗಳು ವೈಯಕ್ತಿಕ ಮಾತ್ರ ವಾಗದೆ ಸಾಮಾಜಿಕವಾಗಿ ರೂಪಾಂತರಗೊಂಡು ಗಟ್ಟಿಯಾದದ್ದೇ ಅವರ ವ್ಯಕ್ತಿತ್ವದ ವಿಶೇಷ; ಅವರದು ಪ್ರಖರ ಸಾಮಾಜಿಕ ವ್ಯಕ್ತಿತ್ವ,ದೀನ ದಲಿತರ ಉದ್ಧಾರವೇ ಅವರ ಧರ್ಮದ ಮೊದಲ ತತ್ವ; ಅದೇ ಅವರ ವೈಚಾರಿಕ ಸತ್ವ ಆದ್ದರಿಂದ ವಿವೇಕಾವಂದರು ಇಂದಿಗೂ ಸತ್ಯ.

---

**1.ಒಡೆಯನ ಮನೆಯ ಅಂಗಳದ ಪ್ರಕೃತಿಯ ಸೌಂದರ್ಯ ಪುಟ್ಟ ಪೋರಿಗೆ ಹೇಗೆ ಕಂಡುಬಂದಿತು.**

ಒಡೆಯನ ಅಂಗಳದಲ್ಲಿ ಮೈತುಂಬಿ ನಿಂತ ಮಾವಿನ ಮರಗಳಲ್ಲಿ, ಕೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳಲ್ಲಿ ಮನದುಂಬಿ ಹಾಡುವ ಕೋಗಿಲೆಗಳ ಗಾನದಲ್ಲಿ ಉಕ್ಕಿ ಹರಿಯುವ ಕಡಲಿನಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

**2.ಪುಟ್ಟಿಯ ಪ್ರಶ್ನೆಗಳೇನು?**

ಗುಡಿಸಲೊಳಗೆ ಬರಲು ವಸಂತ ಹೆದರಿದನೇ? ಹರಿದ ಚಿಂದಿ ಬಟ್ಟೆಗಳನ್ನು ಕಂಡು ಮರುಗಿದನೇ? ಎಂಬುದು ಪುಟ್ಟಿಯ ಪ್ರಶ್ನೆಗಳು.

**3. ವಸಂತ ಯಾರಿಗೆ ಮುಖ ತೋರಲಿಲ್ಲ?**

ಕಮ್ಮಾರ,ಕುಂಬಾರ,ನೇಕಾರನಿಗೆ,ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ.

---

**4. ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆ ಏನು?**



agnidivya.blogspot.com

* ಏಪ್ರಿ ಲ್ 13 1919 ರಂದು ಬ್ರಿ ಟೀಷರ ಗುಂಡುಗಳಿಗೆ ಆಹುತಿಯದ
* ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ
* ಸಮ್ಮಿಳಿತ ರಕ್ತದಿಂದ ಈ ಪ್ರ ದೇಶ ಪಾವನವಾಗಿದೆ.

**5. ಭಗತ್ ಸಿಂಗ್ ನ ಸಹಚರರು ಯಾರು?**

ರಾಜಗುರು, ಸುಖದೇವ, ಬಟುಕೇಶ್ವರ ದತ್ತ

**6.ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸಿದನು?**

ಭಗತ್ ಸಿಂಗ್ ತನ್ನ ಸಹೋದರಿಗೆ ತಾನು ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದ ಸ್ಥಳದಿಂದ ಒಂದು ಡಬ್ಬಿಯಲ್ಲಿ ಸಂಗ್ರ ಹಿಸಿದ ಮಣ್ಣನ್ನು 'ತ್ಯಾಗದ ಪ್ರ ತೀಕ ಎಂದುತೋರಿಸುತ್ತಾನೆ.

**7.ಭಗತ್ ಸಿಂಗ್ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದರ ಫಲವೇನಾಯಿತು? ಅಥವಾ ಭಗತ್ ಸಿಂಗನು ವೀರಯೋಧನಾಗಿ ಅಮರನಾದುದು ಹೇಗೆ ತಿಳಿಸಿ**

*ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್ ಸಿಂಗ್* ಮುಂದೆ ತನ್ನ ಕ್ರಾ ಂತಿಕಾರಿ ಗುಂಪಿನ ಸಹಾಯದಿಂದ ಬ್ರಿ ಟೀಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ.*ಇದರ ಫಲವಾಗಿ ಮರಣ ದಂಡನೆಗೆ ಈಡಾಗಿ ತನ್ನ ಸಹಚರರಾದ ಸುಖದೇವ್,ರಾಜ್ ಗುರು, ಭಟುಕೇಶ್ವರ ದತ್ತರೊಂದಿಗೆ *ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು.

---

**1. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?**

ಏಕೆಂದರೆ ಅವರು ಮೃದು ಸ್ವಭಾವದವರಾಗಿದ್ದರು. ಅವರ ಜೀವನ ಸರಳವಾಗಿತ್ತು. ಸುಂದರಿಗೆ ಅವಳಿಗೆ ತಂದೆಯ ನೆಮ್ಮದಿಯೇ ಮುಖ್ಯವಾಗಿತ್ತು.

**2.ಮೃಗದ ಬಾಹ್ಯ ಆಕಾರ ಹೇಗಿತ್ತು?**

* ಮೃಗದ ಬಾಹ್ಯ ಆಕಾರ ಭೀಕರವಾಗಿತ್ತು.
* ಕೋರೆ ಹಲ್ಲು. ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಕರ್ಕಶ ಸದ್ದು, ಗೊಗ್ಗರು ಧ್ವನಿಯನ್ನು ಮಾಡುತ್ತಿತ್ತು.

**3. ಕನ್ಯೆ ಕೊಟ್ಟ ಶಾಪವೇನು?**

ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಪ್ರೀತಿಸುವವರೆಗೆ ಮೃಗವಾಗಿಯೇ ಇರು. ಎಂದು ಕನ್ಯೆ ಶಾಪ ಹಾಕಿದ್ದಳು.

**4. ಶಾಪ ವಿಮೋಚನೆಯ ಫಲವೇನು?**

* ಶಾಪ ವಿಮೋಚನೆಯ ನಂತರ ಮೃಗದ ಆಕಾರವೇ ಬದಲಾಯಿತು.
* ಅದು ಸುಂದರ ರಾಜಕುಮಾರನಾಗಿ ಬದಲಾಯಿತು. ರಾಜಕುಮಾರ ತನ್ನ ಮಂತ್ರ ದಂಡದಿಂದ ತನ್ನ ಪ್ರಜೆಗಳೆನ್ನೆಲ್ಲಾ ಕರೆದ. ಅರಮನೆ ಇನ್ನೂ ಮೋಹಕವಾಗಿ ಝುಗಝುಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

**5. ಮೃಗದ ಬಗೆಗೆ ಸುಂದರಿಯ ಮನ ಕಲಕುತ್ತಿತ್ತು ಏಕೆ?**

* ಮೃಗದ ಒರಟು ಮಾತು, ತಿಕ್ಕಲುನಡವಳಿಕೆ * ಮನಸ್ಸಿನಲ್ಲೇ ನಗು ತರುತ್ತಿದ್ದವು.
* ಹಾಗೂ ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

**6. ವರ್ತಕನು ನಗರದಲ್ಲಿ ವಾಸಿಸುವುದು ಕಷ್ಟವೆಂದು ಹಳ್ಳಿಗೆ ಹೋಗಲು ಕಾರಣವೇನು?**

ಏಕೆಂದರೆ ಅವನ ವ್ಯಾಪಾರ ಕುಸಿದು ಬಿತ್ತು ಬರಬೇಕಿದ್ದ ಹಣ ಬರಲಿಲ್ಲ. ಸರಕುಗಳು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ.ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು.ಇದ್ದಬದ್ದ ಸ್ತಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲತೀರಿಸಿ, ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯ ಕಡೆ ಒಂದು ಮನೆಕೊಳ್ಳಬೇಕಾಯಿತು ಆದ್ದರಿಂದ ನಗರದಲ್ಲಿ ವಾಸಿಸುವುದು ಕಷ್ಠವೆಂದು ತಿಳಿದು ಹಳ್ಳಿಗೆ ಹೋಗಬೇಕಾಗಿ ಬಂದಿತು.

***7.ಸುಂದರಿಗೆ ಮೃಗವನ್ನು ನೋಡುವ ಬಯಕೆ ಹೆಚ್ಚಾಗುತ್ತಿತ್ತು ಏಕೆ?***

ತಂದೆಯನ್ನು ನೋಡಲು ಬಂದ ಆಕೆಯ ಅಳಕು ಶುರುವಾಯಿತು. ಮೃಗ ಎಂದೂ ತನ್ನ ವಚನ ಮುರಿದಿರಲಿಲ್ಲ, ಮನ ನೋಯಿಸಿರಲಿಲ್ಲ . ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು. ಅದರ ಚಲನ-ವಲನ ನೆನಪಾದವು. ಮತ್ತೆ ನೋಡಬೇಕೆಂಬ ಆಶೆ ತ್ರೀವ್ರ ವಾಯಿತು. ಕೂಡಲೆ ತಂದೆಗೆ ತಿಳಿಸಿ ಅರಣ್ಯಕ್ಕೆ ಹೊರಟರು. ಅರಣ್ಯದ ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸು ತುಂಬಿತ್ತು. ಆದ್ದರಿಂದ ಸುಂದರಿಗೆ ಅದನ್ನು ನೋಡುವ ಬಯಕೆ ಹೆಚ್ಚಾಗಿತ್ತು.

---

**8. ಮೃಗವು ರಾಜಕುಮಾರನಾಗಿ ಬದಲಾದ ಸಂದರ್ಭದ ಘಟನೆಯನ್ನು ತಿಳಿಸಿ**

ತಂದೆಯ ಮನೆಗೆ ಹೋದ ಸುಂದರಿ ಮೃಗವನ್ನು ನೆನಸಿಕೊಂಡು ಅರಮನೆಗೆ ಹಿಂದಿರುಗಿದಾಗ ಮೃಗ ಅಲ್ಲಿರಲಿಲ್ಲ ಅರಮನೆಯ ಆಚೆಯ ಬಂಡೆಯ ಮೇಲೆ ಕೂರುತ್ತಿದ್ದುದು ನೆನಪಾಗಿ ಅಲ್ಲಿಗೆ ಹೋದಳು. ಆಗ ಮೃಗ ನೆಕ್ಕೊರಗಿತ್ತು. ಅದು ತೇಲುಗಣ್ಣು ಮೇಲುಗಣ್ಣಾಗಿ ಮಲಗಿತ್ತು. ಅದರ ದೇಹ ಬಡವಾಗಿ ಹೋಗಿತ್ತು. ಸತ್ತಿರಬಹುದೇ? ಎಂಬ ಭಯದಿಂದ ಮೂಗಿನ ಹತ್ತಿರ ಬೆರಳಿಟ್ಟು ನೋಡಿದಳು ಉಸಿರು ಹೋಗಿರಲಿಲ್ಲ. ದುಃಖದಿಂದ ಅಪ್ಪಿ " ನೀನು ನನ್ನವನು ನೀನು ಸಾಯಬಾರದು ; ನಾನು ನಿನ್ನನ್ನು ಮದುವೆ ಆಗುತ್ತೇನೆ" ಎಂದು ಕಂಬನಿಗರೆದಳು. ಆಗ ಸುಂದರಿಯು ಪ್ರೀತಿಸುವುದು ಮಾತ್ರ ವಲ್ಲ, ನಿನ್ನನ್ನು ಮದುವೆ ಆಗುತ್ತೇನೆ. ಎಂದಳು. ಆಗ ಮೃಗ ಸಂತೋಷಕ್ಕೆ ಹಿಗ್ಗಿತು. ಅದರ ಆಕಾರವೇ ಬದಲಾಯಿತು. ಸುಂದರ ರಾಜಕುಮಾರನಾಗಿ ಬದಲಾಯಿತು.

---

**11. 'ಜನಪದ ಒಗಟುಗಳು' ಪಾಠದಲ್ಲಿರುವ 'ಅಂಗಿ' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.**

* ಅಂಗಿಯ ಎರಡು ತೋಳುಗಳ ಭಾಗವೇ ಕೈ.ಅಂಗಿಗೆ ತಲೆಯಿಲ್ಲ.
* ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ, * ರಾಜಮಹಾರಾಜರನ್ನು ಬಿಡದಂತೆ ಮೆಲ್ಲನೆ ಬಂದು ಶರೀರಕ್ಕೆ ಉಡುಗೆಯಾಗಿ ಏರಿಕೊಳ್ಳುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪ್ರಚಂಡವಾಗಿದೆ.

**12.ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?**

* ಉಪ್ಪು ನೀರಿನಲ್ಲೇ ಇರುವ ಅಂಶವಾಗಿದೆ. ಅದನ್ನು ನೀರಿನಿಂದಲೆ ತಯಾರಿಸಲಾಗುತ್ತದೆ. * ಆದರೆ ಅದಕ್ಕೆ ನೀರು ತಾಗಿದರೆ ಕರಗಿ ಮಾಯವಾಗುತ್ತದೆ. ಎಂದು ಉಪ್ಪಿನ ವಿಶೇಷತೆ ಈ ಒಗಟಿನಲ್ಲಿ ವ್ಯಕ್ತವಾಗಿದೆ.

**13. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?**

* ಕಮಲದ ಹೂವು ಬೆಳೆಯಲು ಕೆಸರು ಬೇಕು. ಆದ್ದರಿಂದ ಅದು * ಕೆಸರಿನಲ್ಲೇ ಹುಟ್ಟಿಕೆಸರಿನಲ್ಲೇ ಬೆಳೆಯುವ ಒಂದು ವಿಧವಾದ ಗಿಡವಾಗಿದೆ.

**14. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

* ಹೊಲದ ಬದುವಿನಲ್ಲಿ ಹುಟ್ಟುವ ಉತ್ತರಾಣಿ ಗಿಡದಲ್ಲಿ ಬೆಳೆಯುವ ಬೀಜಗಳು ಮುಳ್ಳಿನಂತಿರುತ್ತವೆ. * ಆ ಗಿಡವಿರುವ ಬದುವಿನಲ್ಲಿ ನಡೆದುಕೊಂಡು ಹೋಗುವವವರ ಸೆರಗನ್ನು ಹಿಡಿದಿಕೊಳ್ಳುತ್ತದೆ.
* ರೈತನಿಗೆ ಬಹಳ ತೊಂದರೆ ಕೊಡುವ ಗರಿಕೆಯನ್ನು ಎಷ್ಟೇ ಉತ್ತರೂ ಹೊಲದಲ್ಲಿ ನಾಶಪಡಿಸಲು ಸಾಧ್ಯವಿಲ್ಲ ಅದು ಮತ್ತೆ ಚಿಗುರಿಕೊಳ್ಳುತ್ತದೆ. * ರೈತನ ಪ್ರಯತ್ನವನ್ನು ಕಂಡು ನಿನ್ನದು ವ್ಯರ್ಥ ಪ್ರಯತ್ನ ನನ್ನನ್ನು ನಾಶಪಡಿಸಲು ನಿನ್ನಿಂದ ಸಾಧ್ಯವಿಲ್ಲ ಎಂಬಂತೆ ನಗುತ್ತದೆ. ಎಂಬುದನ್ನು ಈ ಒಗಟಿನಲ್ಲಿ ಸ್ವಾರಸ್ಯಕರವಾಗಿ ಹೇಳಲಾಗಿದೆ

**15. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?**

* ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. * ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ.* ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. * ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ * ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

**16. ಉಪ್ಪು, ಉತ್ರಾಣಿ , ಗರಿಕೆ ಉತ್ತರ ಬರುವ ಒಗಟುಗಳನ್ನು ಬರೆಯಿರಿ**

"ನೀರಲ್ಲೇ ಹುಟ್ಟೋದು ನೀರಲ್ಲೆ ಬೆಳೆಯೋದು ನೀರು ತಾಗಿದರೆ ಮಟಮಾಯ"
"ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು ಉಳುವಾನ ಕಂಡು ನಗುವುದು"
"ಬದಿಯಲ್ಲಿ ಹುಟ್ಟೋದು ಬದಿಯಲ್ಲಿ ಬೆಳೆಯೋದು ಹೋಗೋರ ಮುಂಚೆರಗ ಹಿಡಿಯೋದು"

**ಗದ್ಯ ಭಾಗ 1 ಪ್ರಶ್ನೆ ಲೇಖಕರ / ಕವಿ ಪರಿಚಯ 02*03 =06**

**ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

- **ಸಾರ ಅಬುಬಕರ್**

ಸಾರಾ ಅಬುಬಕರ್ ರವರು **30 ಜೂನ್ 1936ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ಚಪ್ಪಲಿಗಳು, ಸುಳಿಗೆ ಸಿಕ್ಕವರು ತಳ ಒಡೆದ ದೋಣಿಯಲ್ಲಿ, ವಜ್ರಗಳು ಮೊದಲಾದ ಕೃತಿಗಳನ್ನು**

ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ **ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಸಸ್ತಿ** ಲಭಿಸಿದೆ.

- **ಪುರೋಹಿತತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ**

**ಕಾಲ.** **ಕ್ರಿ. ಶ. 1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು.ಇವರು **ಶಬರಿ, ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿ ವಿಜಯ, ಹಂಸ ದಮಯಂತಿ** ಮೊದಲಾದ ಕೃತಿಗಳನ್ನೂ ರಚಿಸಿದ್ದಾರೆ.ಶ್ರೀಯುತರ **'ಶ್ರೀ ಹರಿಚರಿತೆ'** ಕೃತಿಗೆ **'ಪಂಪ ಪ್ರಶಸ್ತಿ'** ನೀಡಿ ಗೌರವಿಸಲಾಗಿದೆ.ಶ್ರೀಯುತರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ವಿನಾಯಕ ಕೃಷ್ಣ ಗೋಕಾಕ್ :-**

ಡಾ. ವಿನಾಯಕ ಕೃಷ್ಣ ಅವರು **ಕ್ರಿ.ಶ. 1909** ರಲ್ಲಿ ಹಾವೇರಿ ಜಿಲ್ಲೆಯ **ಸವಣೂರಿನಲ್ಲಿ** ಜನಿಸಿದರು ಇವರು **ಜೀವನಪಾಠಗಳು, ಭಾರತ ಸಿಂಧು ರಶ್ಮಿ, ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ದ್ಯಾವಪೃಥಿವೀ, ಸಮರಸವೇ ಜೀವನ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

- **ಡಿ. ಎಸ್. ಜಯಪ್ಪಗೌಡ :**

**ಕ್ರಿ. ಶ. 1947**ರಲ್ಲಿ ಚಿಕ್ಕಮಗಳೂರು ಜಿಲ್ಲೆಯ **ದಾರದಹಳ್ಳಿಯಲ್ಲಿ** ಜನಿಸಿದರು. ಇವರು **ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು,** ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಜನಪದ ಆಟಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

1. **.ದೇವನೂರು ಮಹಾದೇವ :**

**ಶ್ರೀ ದೇವನೂರು ಮಹಾದೇವ** ಅವರು **ಕ್ರಿ. ಶ. 1948 ರಲ್ಲಿ** ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ **ದೇವನೂರಿನಲ್ಲಿ** ಜನಿಸಿದರು..ಇವರು **ಎದೆಗೆ ಬಿದ್ದ ಅಕ್ಷರ.ಕುಸುಮ ಬಾಲೆ, ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೋ, ನಂಬಿಕೆಯ ನಂಟ,** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

2. **ಎ. ಎನ್. ಮೂರ್ತಿರಾವ್ :**

**ಶ್ರೀ ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್** ಅವರು **ಕ್ರಿ. ಶ. 1900 ರಲ್ಲಿ** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ **ಅಕ್ಕಿಹೆಬ್ಬಾಳು** ಗ್ರಾಮದಲ್ಲಿಜನಿಸಿದರು. ಹಗಲುಗನಸು,ಅಲೆಯುವಮನ,ಅಪರವಯಸ್ಕರ ಅಮೇರಿಕಾಯಾತ್ರೆ ,ಚಂಡಮಾರುತ ,ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಚಿತ್ರಗಳು-ಪತ್ರಗಳು ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವರು ಎಂಬ ಕೃತಿಗೆ ಪಂಪಪ್ರಶಸ್ತಿ ಲಭಿಸಿದೆ.ಮೈಸೂರು ವಿ.ವಿ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿದೆ.

3. **ದುರ್ಗಸಿಂಹ :**

**ದುರ್ಗಸಿಂಹನು ಕ್ರಿ. ಶ. ಸುಮಾರು 1031** ರಲ್ಲಿ ಕಿಸುಕಾಡು ನಾಡಿನ **ಸಯ್ಯಡಿಯಲ್ಲಿ** ಜನಿಸಿದನು. ಇವನು ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು.ಮತಧರ್ಮ ಸಮನ್ವಯನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ನಿರ್ಮಿಸಿದ್ದಾನೆ. ಈತನು **'ಕರ್ಣಾಟಕ ಪಂಚತಂತ್ರ'** ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ.

4. **ಶಿವಕೊಟ್ಯಾಚಾರ್ಯ:**

**ಕಾಲ: 10ನೇ ಶತಮಾನ ಸ್ಥಳ: ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಕೋಗಳಿ ನಾಡಿನವರು. ಕೃತಿ. ವಡ್ಡಾರಾಧನೆ** ಜೈನ ಧಾರ್ಮಿಕ ಗ್ರಂಥವಾದ **ವಡ್ಡಾರಾಧನೆಯಲ್ಲಿ 19 ಕಥೆಗಳಿವೆ.**

**ಪದ್ಯ ಭಾಗ 1 ಪ್ರಶ್ನೆ ಕವಿ ಪರಿಚಯ 3*1=3**

5. **ಜಿ. ಎಸ್. ಶಿವರುದ್ರಪ್ಪ :**

ಸಮನ್ವಯ ಕವಿ ಎಂದು ಪ್ರಸಿದ್ಧರಾದ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು **ಕ್ರಿ. ಶ. 1926** ರಲ್ಲಿ ಶಿವಮೊಗ್ಗ ಜಿಲ್ಲೆಯ **ಶಿಕಾರಿಪುರದಲ್ಲಿ** ಜನಿಸಿದರು.ಆಧುನಿಕ ಕಾಲದ ಪ್ರಮುಖ ಕವಿಗಳಾದ ಇವರು **ಎದೆತುಂಬಿ ಹಾಡಿದೆನು,** ಸಾಮಗಾನ, ಚೆಲುವು-ಒಲವು, ದೇವಶಿಲ್ಪಿ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವ ಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ, ಕಾವ್ಯಾರ್ಥ ಚಿಂತನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ **ರಾಷ್ಟ್ರಕವಿ ಪ್ರಶಸ್ತಿ,** ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.

6. **ದ.ರಾ. ಬೇಂದ್ರೆ :**

**ಕಾಲ** 1896 **ಸ್ಥಳ:** ಧಾರವಾಡ

**ಕೃತಿಗಳು:** ಗರಿ,ನಾದಲೀಲೆ,ಉಯ್ಯಾಲೆ,ಸಖೀಗೀತ,ನಾಕುತಂತಿ

**ಪ್ರಶಸ್ತಿ:** ಪದ್ಮಶ್ರೀ ಪುರಸ್ಕಾರ, ಭಾರತೀಯ ಜ್ಞಾನಪೀಠ ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಡೆಮಿ ಪ್ರಸಸ್ತಿ.

7. **ಕುವೆಂಪು :**

**ಕಾಲ:** 1904

**ಸ್ಥಳ:** ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೋಕಿನ ಕುಪ್ಪಳ್ಳಿ

**ಕೃತಿಗಳು:** ಕೊಳಲು, ಪಾಂಚಜನ್ಯ, ಪಕ್ಷಿಕಾಶಿ, ಶ್ರೀ ರಾಮಾಯಣ ದರ್ಶನಂ ಮಲೆಗಳಲ್ಲಿಮದುಮಗಳು, ಕಾನೂರ ಹೆಗ್ಗಡತಿ, ಬೆರಳ್ಗೆಕೊರಳ್,ಯಮನಸೋಲು

**ಪ್ರಸಸ್ತಿಗಳು:** ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಂಪ ಪ್ರಸಸ್ತಿ, ರಾಷ್ಟ್ರ ಕವಿ ಅಭಿದಾನ

8. **ಕುಮಾರವ್ಯಾಸ :**

**ಕುಮಾರವ್ಯಾಸ** ಎಂದು ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ** ಅವರು **ಕ್ರಿ. ಶ. ಸುಮಾರು 1430** ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದರು. ಇವರು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿ ಕುಮಾರವ್ಯಾಸ ಎಂಬ ಅಭಿದಾನಕ್ಕೆ ಪಾತ್ರರಾದರು.ಇವರು **ಕರ್ನಾಟ ಭಾರತ ಕಥಾ ಮಂಜರಿ** ಮತ್ತು **ಐರಾವತ** ಎಂಬ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ.

9. **ರನ್ನ**

**ಕಾಲ:** 949

**ಸ್ಥಳ:** ಬಾಗಲಕೋಡೆ ಜಿಲ್ಲೆಯ ಮುದ್ದೇಬಿಹಾಳ

**ಕೃತಿಗಳು:** ಗದಾಯುದ್ಧ( ಸಾಹಸ ಭೀಮ ವಿಜಯ) ಅಜಿತ ತೀರ್ಥಂಕರ ಪುರಾಣ ತಿಲಕಂ, ಪರಶುರಾಮ ಚರಿತಂ, ಚಕ್ರೇಶ್ವರ ಚರಿತಂ ಮತ್ತು ರನ್ನಕಂದ ಎಂಬ ನಿಘಂಟು

**ಬಿರುದು:** ಕವಿ ಚಕ್ರವರ್ತಿ, ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ

10. **ಲಕ್ಷ್ಮೀಶ :**

**ಕವಿ ಲಕ್ಷ್ಮೀಶನು ಕ್ರಿ. ಶ. ಸುಮಾರು 1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು. ಇವನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು.ಇವರು **'ಜೈಮಿನಿ ಭಾರತ'** ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ **ಉಪಮಾಲೋಲ, ಕರ್ಣಾಟ ಕವಿಚೂತವನ ಚೈತ್ರ** ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

11. **ಪಂಪ :**

**ಕಾಲ : 902**

**ಸ್ಥಳ: ವೆಂಗಿ ಮಂಡಲದ ವೆಂಗಿಪಳು**

**ಕೃತಿ:** ವಿಕ್ರಮಾರ್ಜುನ ವಿಜಯ , ಆದಿಪುರಾಣ.

**ಬಿರುದು : ಸಂಸಾರ ಸಾರೋದಯ ಕವಿತ ಗುಣಾರ್ಣವ ಸರಸ್ವತಿ ಮಣಿಹಾರ**

**ಗದ್ಯ ಭಾಗ ಸಂದರ್ಭಗಳು 3*3=9**

**1. ಯುದ್ಧ ಸಾ.ರಾ. ಅಬುಬಕರ್/ ಚಪ್ಪಲಿಗಳು**

**12. "ದಯವಿಟ್ಟು ಬಾಗಿಲು ತೆಗೆಯಿರಿ ನನು ಗಾಯಗೊಂಡಿದ್ದೇನೆ"**
**ಸಂ:**ರಾಹಿಲನು ಕತ್ತಲಿನಲ್ಲಿ ಮಿಂಚಿನ ಸಹಾಯದಿಂದ ದಡಸೇರಿ ಮನೆಯೊಂದರೆ ಬಾಗಿಲಬಳಿ ಬಂದು ಈ ರೀತಿ ಹೇಳಿದನು.
**ಸ್ವಾ: ರಾಹಿಲನ ದಯನೀಯ ಸ್ಥಿತಿ,ಜೀವ ಉಳಿಸಿಕೊಳ್ಳುವ ತವಕ**

**13. "ನನಾಕೆಯನ್ನರ್ಯ ಪರೀಕ್ಷಿಸುವೆ ,ನೀವು ಬಿಸಿನೀರು ಸಿದ್ದಪಡಿಸಿ"**
**ಸಂ:** ಮುದುಕಿಯ ಸೊಸೆ ಹೆರಿಗೆ ನೋವಿನಿಂದ ನರಳುತ್ತಿರುವುದನ್ನು ಕಂಡು ಆಕೆಯನ್ನು ಪರೀಕ್ಷಿಸಲು ಮುಂದಾದಾಗ ಹೇಳಿದ ಮಾತು
**ಸ್ವಾ:** ರಾಹಿಲನ ಪರೋಪಕಾರದ ಗುಣ ವ್ಯಕ್ತವಾಗಿದೆ.

**14. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ"**
**ಸಂ:**ಬಂದವನು ನಮ್ಮವನಲ್ಲ ಶತ್ರು ದೇಶದವನು ಎಂದು ತಿಳಿದು ರೋಷದಿಂದ ಕೆರಳಿ ಆತನ ಕಣ್ಣುಗಳನ್ನು ನೋಡಿದಾಗ
ಸ್ವಾ: ಅವಳ ಹೇದಯದಲ್ಲಿರುವ ಮಾತೃ ಪ್ರೇಮ ವ್ಯಕ್ತವಾಗಿದೆ.

**15. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ'**
**ಸಂ:** ಸೈನಿಕರು ಮುದುಕಿಯ ಮನೆಯಲ್ಲಿ ಶೋಧನೆ ಮಾಡಲು ಮುಂದಾದಾಗ ಮುದುಕಿ ಅವರಿಗೆ ಹಾಳಿದ ಮಾತು.
**ಸ್ವಾ: ಯುದ್ದದಿಂಗಾಗಬಹುದಾದ ಅನಾಹುತಗಳು ಇಲ್ಲಿ ವ್ಯಕ್ತವಾಗಿದೆ.**

---

2. **ಶಬರಿ ಪು.ತಿ.ನ. ಶಬರಿ ಗೀತನಾಟಕ**

**16. " ಆವಿದೀ ಮರುಳು? ನಮ್ಮೆಡೆಗೆ ಬರುತಿಹುದು"**
**ಸಂ:**ರಾಮ ಲಕ್ಷ್ಮಣರು ಸೀತೆಯನು ್ನಹುಡುಕುತ್ತಾ ಮತಂಗಾಶ್ರ ಮದ ಬಳಿ ಬಂದು ಶಬರಿಯನ್ನು ಕಂಡಾಗ.
**ಸ್ವಾ:** ವೃದ್ಧೆಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡಿದ್ದು

**17. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ"?**
**ಸಂ:** ತನಗಾಗಿ ಹಂಬಲಿಸಿ ಕಾದುಕುಳಿತ ಶಬರಿಗೆ ರಾಮ ಹೇಳಿದ
**ಸ್ವಾ:** ರಾಮನೂ ಎಲ್ಲವನ್ನೂ ತಿಳಿದು ಏನೂ ಅರಿಯದಂತೆಕೇಳುವುದು

**18. " ರೂಪಿನಂತೆ ಮಾತುಕೂಡ ಎನಿತು ಉದಾರವಾಗಿದೆ"**
**ಸಂದರ್ಭ:**–ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ. **ಸ್ವಾರಸ್ಯ :–** "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮದುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

**19. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"**
**ಸಂದರ್ಭ:**–ರಾಮನದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ :–** "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

---

3. **ವಿ.ಕೃ. ಗೋಕಾಕ್– ಸಮುದ್ರದಾಚೆಯಿಂದ ಲಂಡನ್ ನಗರ**

**20. "ನಿಮ್ಮ ದೇಶದ ಗೌರವವನ್ನು ಕಾಯಿರಿ ! ಇದು ದೊಡ್ಡದಾದ ರಾಷ್ಟ್ರ"**
**ಸಂ:** ಟ್ರಫಲ್ಗರ್ ಸ್ಕ್ವೇರ್ನಲ್ಲಿರುವ ಶಿಲಾಮೂರ್ತಿಗಳ ದರ್ಶನ ಮಾಡಿದಾಗ ಬೀದಿಬೀದಿಗೆ ಇತಿಹಾಸ ಪ್ರಸಿದ್ಧ ಪುರುಷರು, ತಮ್ಮ ದೇಶಕ್ಕಾಗಿ ಜೀವನವನ್ನು **ಲೆಕ್ಕಿಸದೇ ದುಡಿದವರು ನಿಂತು ಕೈಯೆತ್ತಿ ಈ ಮಾತನ್ನು ಹೇಳುತ್ತಿರುವಂತಿದೆ ಎಂದು ಲೇಖಕರು ಈ ಮಾತನ್ನು ಹೇಳುತ್ತಾರೆ.**
**ಸ್ವಾ: ಇಲ್ಲಿನ ಪ್ರತಿಮೆಗಳು ದೇಶದ ಜನರ ರಾಷ್ಟ್ರಪ್ರೇಮದ ದ್ಯೋತಕವಾಗಿರುವುದು ಇಲ್ಲಿನ ಸ್ವಾರಸ್ಯವಾಗಿದೆ.**

**21. ಹೊತ್ತು! ಹೊತ್ತು ! ಹೊತ್ತೇ ಹಣ**
**ಸಂ:** ಸಮಯಕ್ಕೆ ಹೆಚ್ಚು ಒತ್ತು ಕೊಡುವ ಲಂಡನ್ ನಗರದ ಜನರು ಸದಾ ಕಾರ್ಯ ಪ್ರವೃತ್ತರಾಗಿರುತ್ತಾರೆಂದು ತಿಳಿಸುವಾಗ ಈ ಮಾತು ಬಂದಿದೆ.
**ಸ್ವಾ:** ವಿದೇಶಿಗರಲ್ಲಿನ ಹಣದ ಹಿಂದಿನ ಓಟ, ಕಾಲದ ಮಹತ್ವ

**22. ಯಾರನ್ನು ತುಳಿದರೇನು ! ಎಲ್ಲಿ ಹೆಚ್ಚೆ ಹಾಕಿದರೇನು ? ಎಲ್ಲವೂ ಅಷ್ಟೇ ! ಮಣ್ಣು1 ಮಣ್ಣು**
**ಸಂ: ವೆಸ್ಟ್ ಮಿನಿಸ್ಟರ್ ಅಭೆಯಲ್ಲಿ ನಡೆದಾಡುವಾಗ ಹೆಜ್ಜೆ,ಹೆಜ್ಜೆಗೂ ಪ್ರಸಿದ್ಧ ಕವಿ ಪುಂಗವರ, ಪ್ರಖ್ಯಾತ ನಾಟಕಕಾರರನ್ನು ಕಾಲ್ಕೆಳಕ್ಕೆ ಹಾಕಿ ತುಳಿಯು ತ್ತಿದ್ದೆ ವಲ್ಲಾ ಎಂದುಕೊಂಡು ಲೇಖಕರು ಈ ಮೇಲಿನ ಮಾತನ್ನು ಹೇಳುತ್ತಾರೆ.**
**ಸ್ವಾ: ಕವಿಗಳ ಬಗ್ಗೆ ಲೇಖಕರಿಗಿದ್ದ ಗೌರವ ಭಾವನೆ ಹಾಗೂ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ ಎಲ್ಲವೂ ಮಣ್ಣೇ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.**

**23. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ "**
**ಸಂ: ಪ್ರವಾಸದ ವರ್ಣನೆಯ ಮುಕ್ತಾಯದ ಸಮಯದಲ್ಲಿ ಬೇಕನ್ನವರ ಈ ಮಾತನ್ನು ಹೇಳುತ್ತಾರೆ.**
**ಸ್ವಾ: ಪ್ರವಾಸದಿಂದ ಬುದ್ಧಿ, ಮನಸ್ಸು ವಿಕಾಸವಾಗುತ್ತದೆ ಎಂಬುದು.**

---

4. **ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ/.ಡಿ.ಎಸ್ ಜಯಪ್ಪಗೌಡ /ದಿವಾನ್ ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು /ಭಾಗ್ಯಶಿಲ್ಪಿಗಳು–**

**24. "ಸಾಮಾಜಿಕ ಕಾನೂನುಗಳ ಹರಿಕಾರ"**
**ಸಂ:** ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟು ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದ ಸಂದರ್ಭದಲ್ಲಿ ಜನರು ಹೇಳಿದರು
**ಸ್ವಾ:** ಸಾಮಾಜಿಕ ಪಿಡುಗುಗಳನ್ನು ಹೊಗಲಾಡಿಸಲು ಹಲವಾರು ಕಾನೂನು ಜಾರಿಗೆ ತಂದು ಹೆಸರಾಗಿದ್ದು

**25. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"**
**ಸಂ:** ಹಲವಾರು ಸಾಧನೆಗಳನ್ನು ಮಾಡಿ ಕೀರ್ತಿಗಳಿಸಿದ್ದ ವಿಶ್ವೇಶ್ವರಯ್ಯನವರಿಗೆ ಪೂನಾದ ಮೂಥಾ ಕಾಲುವೆಗೆನೀರಿನ ನೆಲೆಯಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು ಈ ಅನ್ವೇಷಣೆ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರಿತು ಎಂದು ಲೇಖಕರು ಹೇಳಿದ್ದಾರೆ.
**ಸ್ವಾ:** ಅವರ ಬುದ್ಧಿಶಕ್ತಿ ಹಾಗೂ ಹೊಸ ಹೊಸ ಅನ್ವೇಷಣಾ ಸಾಮರ್ಥ್ಯ ಇಲ್ಲಿನ ಸ್ವಾರಸ್ಯವಾಗಿದೆ.

**26. ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು"**
**ಸಂ:** ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತ ಕಾಲದಲ್ಲಿ ಮೈಸೂರಿನ ಸರ್ವತೋಮುಖ ಅಭಿವೃದ್ಧಿಗಾಗಿ ಕಂಕಣಬದ್ಧರಾಗಿದ್ದರು ಅದರಿಂದಾಗಿ ಮೈಸೂರನ್ನು ಮಾದರಿ ಸಂಸ್ಥಾನವಾಗಿ ರೂಪಿಸಿದರು ಎಂದು ಹೇಳುವಾಗ ಈ ಮಾತು ಬಂದಿದೆ.
**ಸ್ವಾ:** ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದಷ್ಟು ಅಭಿವೃದ್ಧಿಯನ್ನು ಮೈಸೂರು ಸಂಸ್ಥಾನ ಕಂಡಿತು ಎಂಬುದು

agnidivya.blogspot.com

**27. " ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"**
**ಸಂ:** ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಮಾರಂಭದಲ್ಲಿ ಪಂಡಿತ್ ಜವಾಹರ್ ಲಾಲ್ ನೆಹರು ಅವರು ವಿಶ್ವೇಶ್ವರಯ್ಯನವರನ್ನು ಕುರಿತು ಈ ಮಾತುಗಳನ್ನು ಹೇಳಿದರು.
**ಸ್ವಾ:**ವಿಶ್ವೇಶ್ವರಯ್ಯನವರು ಮಾತಿನಲ್ಲಿ ಹೇಳದೆ ಎಲ್ಲವನ್ನೂ ಕಾರ್ಯ ಪ್ರವೃತ್ತರಾಗಿ ಮಾಡಿತೋರಿಸುತ್ತಿದ್ದರು ಎಂಬುದು ಸ್ವಾರಸ್ಯವಾಗಿದೆ.

**5. ದೇವನೂರು ಮಹದೇವ/ ಎದೆಗೆ ಬಿದ್ದ ಅಕ್ಷರ/**

**28. " ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"**
**ಸಂ:** ಗ್ರಾಮ ದೇವತೆ ಮಂಚಮ್ಮನಿಗೆ ಗುಡಿ ಕಟ್ಟುವಾಗ ಒಮ್ಮೆಮೇಲೆ ಆವಾಹಿಸಿಕೊಂಡು ಬಂದು ಜನರಿಗೆ ಹೇಳಿದ ಮಾತು
**ಸ್ವಾ:** ತನ್ನ ಬಕ್ತರಿಗೆ ಮನೆ ಇಲ್ಲದ ಮೇಲೆ ತನಗೂ ಬೇಡ ಎಂಬ ದೇವತೆಯ ಸಾಮರಸ್ಯ ತತ್ವ ಇಲ್ಲಿನ ಸ್ವಾರಸ್ಯವಾಗಿದೆ.

**29. " ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ"**
**ಸಂ:** ಅಶೋಕ್ ಪೈ ಮನೋವೈದ್ಯರು ಮನಸ್ಸಿನ ಮೇಲೆ ಹೇಳಿದ ಒಂದು ಸಂಶೋಧನಾ ಸತ್ಯವನ್ನು ಉದಾಹರಿಸುವಾಗ ಈ ಮಾತು ಬಂದಿದೆ.
**ಸ್ವಾ:** ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತದೆ.

**30. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"**
ವಚನಕಾರರು ತಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ ಅವರದ್ದೇ ಆದ ಇಷ್ಟ ದೈವವಿತ್ತು ಎಂದು ಹೇಳುವಾಗ ಈ ಮಾತು ಬಂದಿದೆ.
**ಸ್ವಾ: ವಚನಕಾರರಿಗೆ ಪ್ರಜ್ಞೆಯೇ ದಾವರಾಗಿದ್ದರಿಂದ ನುಡಿದಂತೆ ನಡೆಯಬೇಕಾಯಿತು ಪ್ರಜ್ಞೆಯ ಮುಂದೆ ಸುಳ್ಳು ನಡೆಯಲಾಗದು ಎಂಬುದು**

**31. ಈ ಸಮಷ್ಟಿ ಮನಸ್ಸಿನಲ್ಲಿ ಎಲ್ಲರೂ ಇರುತ್ತಾರೆ**
**ಸಂ:** ಕೊಲೆ, ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಠಿ ಮನಸ್ಸನ್ನು ಘಾಸಿಗೊಳಿಸುತ್ತದೆ ಎಂದು ಹೇಳುವಾಗ ಈ ಮಾತು ಬಂದಿದೆ.
**ಸ್ವಾ:** ಸಮಷ್ಠಿ ಮನಸ್ಸಿನಲ್ಲಿ ಎಲ್ಲರೂ ಇರುವುದರಿಂದ ಕಾರುಣ್ಯ ಹಾಗೂ ಸಾಮರಸ್ಯದ ಮನೋಭಾವ ಮೂಡಿಸಿಕೊಳ್ಳಬೇಕೆಂಬುದು ....

**6)ಎ .ಎನ್ ಮೂರ್ತಿರಾವ್ ಸಮಗ್ರ ಲಲಿತ ಪ್ರಬಂಧಗಳು/ವ್ಯಾಘ್ರಗೀತೆ**

**32. "ಖಂಡವಿದೆಕೋ ,ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ"**
**ಸಂ:** ಶಾನುಭೋಗರ ಬೆನ್ನಹಿಂದೆ ಬಂದ ಹುಲಿಯು ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು ಗೊಂದಲದಲ್ಲಿದ್ದಾಗ ಪುಣ್ಯಕೋಟಿಯ ಈ ಮಾತನ್ನು ಲೇಕಕರು ನೆನಪಿಸಿಕೊಳ್ಳುತ್ತಾರೆ.
**ಸ್ವಾ:** ಹುಲಿಯು ತನ್ನ ವಂಶಜರ ಆದರ್ಶ ಹಾಗೂ ಧರ್ಮಶ್ರದ್ಧೆಯನ್ನು ಮರೆಯಿತು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**33. "ಸ್ವಧರ್ಮೇ ನಿಧನಂ ಶ್ರೇಯಃ"**
**ಸಂ:** ಶಾನುಭೋಗರ ಬೆನ್ನಹಿಂದೆ ಬಂದ ಹುಲಿಯು ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು ಗೊಂದಲದಲ್ಲಿದ್ದಾಗ ಭಗವದ್ಗೀತೆಯ ಈ ಮಾತು ಹುಲಿಗೆ ನೆನಪಿಗೆ ಬಂತು ಎಂದು ಲೇಖಕರು ಹೇಳುತ್ತಾರೆ.
**ಸ್ವಾ:** ಅಧರ್ಮದ ಮಾರ್ಗ ಹಿಡಿಯುವುದು ತಪ್ಪು ಎಂದು ಭಗವದ್ಗೀತೆಯ ಈ ಸಾಲಿನ ಮೂಲಕ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

34. **'ದೇವರೇ, ಮರ ಹತ್ತುವಷ್ಟು ಅವಕಾಶ ಕರುಣಿಸು.**

**ಸಂ:** ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಮರದ ಕಡೆಗೆ ಓಡಿದಾಗ **ಸ್ವಾ:** 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಕಷ್ಟ ಬಂದಾಗ ದೇವರನ್ನು ನೆನೆಯುವುದನ್ನು...

24. **ನಾನು ಮುಖ ಮೇಲಾಗಿ ಬಿದ್ದಿದ್ದೆನೆ?'**
**ಸಂ:** ಪ್ರಜ್ಞೆ ತಪ್ಪಿದ್ದ ತನ್ನ ಮುಖದ ಮೇಲೆ ನೀರೆರಚಿ ಎಚ್ಚರಿಸಿದ ರೈತರನ್ನು ಕಂಡ ಶಾನುಭೋಗರು ಹೇಳಿದ್ದು
**ಸ್ವಾ:** ತಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ತನ್ನನ್ನು ತಿನ್ನಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡ ರೀತಿಯನ್ನು...

**25. ಹುಲಿ ಈಗ ಎಷ್ಟು ಹಸಿದಿರಬೇಕು.'**
**ಸಂ:** ಹುಲಿಯಿಂದ ತಪ್ಪಿಸಿಕೊಂಡು ಬಂದ ಶಾನುಭೋಗರು ಮನೆಯಲ್ಲಿ ರಸದೂಟವನ್ನು ಮಾಡುವಾಗ ಈ ಮಾತನ್ನು ಹೇಳುತ್ತಾರೆ
**ಸ್ವಾ:** ತನ್ನನ್ನು ತಿನ್ನಲು ಬಂದ ಹುಲಿಯ ಹಸಿವನ್ನು ನೆನೆದು ಅದರ ಮೇಲಿನ ಶಾನುಭೋಗರ ಕನಿಕರವನ್ನು..

**6. ದುರ್ಗಸಿಂಹ ಕರ್ಣಾಟಕ ಪಂಚತಂತ್ರ/ ವೃಕ್ಷಸಾಕ್ಷಿ**

26. **ಪೊನ್ನನೆಲ್ಲಮಂ ನೀನೇ ಕೊಂಡೆ**
**ಸಂ:** ಹೂತಿಟ್ಟ ಜಾಗದಲ್ಲಿ ಚಿನ್ನದ ನಾಣ್ಯಗಳು ಕಾಣದೆ ಇದ್ದಾಗ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳಿದ್ದು.
**ಸ್ವಾ:** ಸುಮ್ಮನಿದ್ದರೆ ಅಪವಾದವು ತನ್ನ ಮೇಲೆಯೇ ಬರುತ್ತದೆ ಎಂಬ ದುಷ್ಟಬುದ್ಧಿಯನ್ನು ದುಷ್ಟಬುದ್ಧಿಯ ಮಾತಿನ ಮೂಲಕ ಕವಿಯು...

27. **ಈತನ ಮಾತು ಆಶ್ರುತಪೂರ್ವಮ್**
**ಸಂ:** ಧರ್ಮಬುದ್ಧಿಯು ಹೊನ್ನನ್ನು ಕದ್ದಿದ್ದಕ್ಕೆ ವಟವೃಕ್ಷವೇ ಸಾಕ್ಷಿ ಎಂಬ ದುಷ್ಟಬುದ್ಧಿಯ ಮಾತನ್ನು ಕೇಳಿ ಧರ್ಮಾಧಿಕರಣರು ಹೇಳಿದ ಮಾತು
**ಸ್ವಾ:** ಧರ್ಮಾಧಿಕರಣರು ಮರವು ಸಾಕ್ಷಿ ಹೇಳುತ್ತದೆ ಎಂಬುದನ್ನು ಕೇಳಿ ಅಚ್ಚರಿಗೊಂಡಿದ್ದನ್ನು...

28. **ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನರಿವ ಬಗೆ**
**ಸಂ:** ದುಷ್ಟಬುದ್ಧಿಯು ತನ್ನ ತಂದೆಯಾದ ಪ್ರೇಮಮತಿಯನ್ನು ಸುಳ್ಳುಸಾಕ್ಷಿ ಹೇಳಲು ಒಪ್ಪಿಸುವಾಗ ತನ್ನ ಮಗನಿಗೆ ಬುದ್ಧಿ ಹೇಳುವಾಗ ಪ್ರೇಮಮತಿ ಈ ಮಾತನ್ನು ಹೇಳುತ್ತಾನೆ
**ಸ್ವಾ:** ಕೆಟ್ಟತನ, ಕೆಟ್ಟ ಆಲೋಚನೆಗಳು ಕೆಡುಕನ್ನೇ ಉಂಟುಮಾಡುತ್ತವೆ ಎಂಬುದನ್ನು...

29. **ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ**
**ಸಂ:** ಮರದ ಪೊಟರೆಯೊಳಗಿದ್ದ ಪ್ರೇಮಮತಿ ಮತಿಗೆಟ್ಟು ಧರ್ಮಬುದ್ಧಿಯೇ ಚಿನ್ನದ ನಾಣ್ಯಗಳನ್ನು ತೆಗೆದುಕೊಂಡ'ಎಂದಾಗ ಕವಿಯು **ಸ್ವಾ:** ಒಳಿತಿಗೆ ವಿರುದ್ಧವಾಗಿ ನಡೆದರೆ ಕೆಡುಕೇ ಆಗುತ್ತದೆ ಎಂಬ ನೀತಿವಾಕ್ಯವನ್ನು..

30. **ಹುಸಿಯದ ಬೇಹಾರಿಯೇ ಇಲ್ಲ**
**ಸಂ:** ಧರ್ಮಬುದ್ಧಿಯು ಮರದ ಪೊಟರೆಯ ಬಳಿ ಮನುಷ್ಯ ಸಂಚಾರ ಆಗಿರುವುದನ್ನು ಕಂಡು ನಿಶ್ಚಯಿಸಿದಾಗ ಧರ್ಮಾಧಿಕರಣರಿಗೆ ಹೇಳಿದ್ದು
**ಸ್ವಾ:** ವ್ಯಾಪಾರಿಯು ತನ್ನ ವೃತ್ತಿಧರ್ಮದಲ್ಲಿ ಸುಳ್ಳನ್ನು ಹೇಳುತ್ತಾನೆ ಎಂಬ ಲೋಕರೂಢಿಯ ಮಾತು ಸ್ವಾರಸ್ಯಪೂರ್ಣವಾಗಿದೆ.

7. **ಶಿವಕೋಟ್ಯಾಚಾರ್ಯ/ವಡ್ಡಾರಾಧನೆ ಕೃತಿ/ಸುಕುಮಾರಸ್ವಾಮಿಯ ಕಥೆ**

**31. ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಂ**

ಸಂ: ಜೋಯಿಸನೊಬ್ಬನು ಸುಕುಮಾರಸ್ವಾಮಿಯನ್ನು ನೋಡಿ ಹೇಳುವ ಮಾತು

8. **ಸ್ವಾ:** ಹಿಂದಿನ ಕಾಲದಲ್ಲಿಯೂ ಜನರು ಭವಿಷ್ಯವನ್ನು ನಂಬುತ್ತಿದ್ದರು ಎಂಬುದನ್ನು..

**32. ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು**

**ಸಂ:** ಅರಸರು ಬಂದಾಗ ತನ್ನ ಮಗನನ್ನು ಕರೆಯಲು ಹೋದ ಯಶೋಭದ್ರೆ ಗೆ ಸುಕುಮಾರಸ್ವಾಮಿಯು ಹೇಳುತ್ತಾನೆ

**ಸ್ವಾ:** ಹೊರಪ್ರ ಪಂಚದ ಅರಿವೇ ಇರದ, ಸುಕುಮಾರಸ್ವಾಮಿಯ ಮನೆಯೊಳಗಿನ ವೈಭವದ ಜೀವನವನ್ನು...

9. **33. ಆರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಟ್ಟುಗುಮದಂ ನೋಡಿ**

**ಸಂ:** ' ಅರಸ ವೃಷಭಾಂಕನು ಸುಕುಮಾರಸ್ವಾಮಿಯೊಡನೆ ಊಟ ಮಾಡುವಾಗ ಅವನು ಊಟ ಮಾಡುವ ರೀತಿಯನ್ನು ಕಂಡಾಗ

**ಸ್ವಾ :** ಆಹಾರ ಸೇವನೆಯ ಕ್ರ ಮದಲ್ಲಿ ವ್ಯತ್ಯಾಸವನ್ನು ಅರಸನು ಗಮನಿಸಿ ವ್ಯಾಧಿ ಇದೆ ಎಂದುಕೊಂಡಿದ್ದನ್ನು..

10. **34. ಆವಂತಿ ಸುಕುಮಾರನೆಂದು ಪೆಸರನಿಟ್ಟಂ**

**ಸಂ:** ಅರಸನಾದ ತಾನೂ ಸುಕುಮಾರಸ್ವಾಮಿಯಷ್ಟು ವೈಭವದ ಜೀವನವನ್ನು ನಡೆಸಲು ಸಾಧ್ಯವಾಗಿಲ್ಲ ಎಂದುಕೊಳ್ಳುವಾಗ ಈ ಮಾತು ಬಂದಿದೆ **ಸ್ವಾ :** ಸುಕುಮಾರಸ್ವಾಮಿಯ ವೈಭೋಗ ಜೀವನದ ಪರಾಕಾಷ್ಟೆಯನ್ನು....

**ಪದ್ಯಭಾಗದ ಸಂದರ್ಭಗಳು 3*3=9**

**ಜಿ.ಎಸ್.ಶಿವರುದ್ರಪ್ಪ/ ಎದೆತುಂಬಿ ಹಾಡಿದೆನು-ಸಂಕಲ್ಪಗೀತೆ**

1) **ಪ್ರೀತಿಯ ಹಣತೆಯ ಹಚ್ಚೋಣ.**

**ಸಂ:** ನಮ್ಮ ಸುತ್ತಲು ಕತ್ತಲೆ ಎಂಬ ಅಜ್ಞಾನ ಅಸೂಯೆಗಳು ಕವಿದಾಗ ಪ್ರಿ ೀತಿ ಎಂಬ ಹಣತೆಯನ್ನು ಹಚ್ಚಿ ಹೋಗಲಾಡಿಸಬೇಕು ಎನ್ನುವ ಸಂದರ್ಭ **ಸ್ವಾ :** ದ್ವೇಷರಹಿತ ಸಮಾಜ ನಿರ್ಮಾಣ ಮಾಡಬೇಕೆಂಬುದನ್ನು...

**2) ಮುಂಗಾರಿನ ಮಳೆಯಾಗೋಣ.**

**3) ಸಂ:** ಕಲುಷಿತವಾದ ನೀರಿನ ಮೂಲಗಳನ್ನು ಮುಂಗಾರಿನ ಮಳೆ ಸ್ವಚ್ಛ ಮಾಡುವ ರೀತಿಯಲ್ಲಿ ಕಲುಷಿತವಾದ ಮನಸುಗಳಿಗೆ ಮುಂಗಾರಿನ ಮಳೆಯ ರೂಪದಲಿ ನಾವೂ ವರ್ತಿಸಬೇಕು ಎನ್ನುವ ಸಂದರ್ಭ/

**4) ಸ್ವಾ :** ಮುಂಗಾರಿನ ಮಳೆಯ ರೂಪದಲಿ ನಾವೂ ಕಲುಷಿತವಾಗಿರುವ ಸ್ಥಳಗಳನ್ನು /ಮನಸುಗಳನ್ನು ಸ್ವಚ್ಚಗೊಳಿಸಬೇಕು ಎಂಬುದನ್ನು ಸ್ವಾರಸ್ಯಪೂರ್ಣವಾಗಿ...

3) **ಹೊಸ ಭರವಸೆಗಳ ಕಟ್ಟೋಣ.**

**ಸಂ:** ಅನಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಕೆಳಗೆ ಬೀಳುತಿರುವ ಸಮಾಜವನ್ನು ಹೊಸ ಭರವಸೆಗಳೊಂದಿಗೆ ಮೇಲೆತ್ತಬೇಕು ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :** ಸಮಾಜದ ನೈತಿಕ ಅಧಃಪತನ ತಡೆಯಬೇಕು ಎಂಬುದನ್ನು....

**4) ಹೊಸ ಎಚ್ಚರದೊಳು ಬದುಕೋಣ.**

**ಸಂ:** ಲೋಕದ ಎಲ್ಲಾ ಮತ-ಧರ್ಮಗಳು ನಮಗೆ ದಾರಿದೀಪಗಳಾಗಬೇಕು ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :** ಲೋಕದಲ್ಲಿ ಶಾಂತಿ ನೆಲಸಬೇಕಾದರೆ ಎಲ್ಲಾ ಮತ-ಧರ್ಮಗಳ ಒಳ್ಳೆಯ ಅಂಶಗಳನ್ನು ಅನುಸರಿಸಬೇಕು ಎಂಬ ಹೊಸ ಎಚ್ಚರವನ್ನು....

2. **ದ.ರಾ.ಬೇಂದ್ರೆ / ಗರಿ – ಕವನ/ ಹಕ್ಕಿ ಹಾರುತಿದೆ ನೋಡಿದಿರಾ**

**1) ,ರೆಕ್ಕೆಗಳೆರಡೂ ಪಕ್ಕದುಂಟು'**

**ಸಂ:** ಕಾಲದ ಗತಿಯನ್ನು ಹಾರುವ ಹಕ್ಕಿಗೆ, ಪಕ್ಷಿಯ ಭೌತಿಕ ರೂಪಕ್ಕೆ ಸಮೀಕರಿಸಿ ಹೇಳುವಾಗ

**ಸ್ವಾ :** ಕಾಲದ ಚಲನೆಯನ್ನು ಪಕ್ಷಿಯ ಚಲನೆಗೆ ಕಾರಣವಾದ ರೆಕ್ಕೆಗಳಿಗೆ ಹೋಲಿಸಿ ವರ್ಣಿಸಿರುವುದು...

**2) ಸಾರ್ವಭೌಮರಾ ನೆತ್ತಿಯ ಕುಕ್ಕಿ**

**ಸಂ:** ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆದ ಸಾಮ್ರಾ ಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರದೊಡನೆ ಅವರನ್ನೂ ನಾಶಮಾಡಿದೆ ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :** ಕಾಲಪಕ್ಷಿಯು ಬಡವ-ಬಲ್ಲಿದರೆಂದು ನೋಡದೆ ಎಲ್ಲರನ್ನೂ ಸಮಾನವಾಗಿ ಕಾಣುತ್ತದೆ ಎಂಬುದನ್ನು...

3) **ಬಲ್ಲರು ಯಾರಾ ಹಾಕಿದ ಹೊಂಚ**

**ಸಂ:** ಕಾಲಪಕ್ಷಿಯು ಬ್ರ ಹ್ಮಾಂಡದ ಎಲ್ಲಾ ಕಡೆಯೂ ತಾನಿದ್ದು ಯಾವ ಸಮಯದಲ್ಲಿ ಏನು ಮಾಡುತ್ತದೆ ಎಂದು ಯಾರೂ ಅರಿಯರು ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :** ಕಾಲಾಯ ತಸ್ಮೈನಮಃ ಎಂಬ ಮಾತಿನಂತೆ ಎಲ್ಲರೂ ಕಾಲಕ್ಕೆ ಶರಣಾಗಬೇಕು ಅದರ ಮರ್ಮವನ್ನು ಯಾರೂ ಅರಿಯರು ಎಂಬುದು...

**4) ಹೊಸಗಾದ ಹಸುಮಕ್ಕಳ ಹರಸಿ**

**ಸಂ:** ಕಾಲವೇ ಎಲ್ಲವನ್ನೂ ನಾಶಮಾಡುತ್ತದೆ ಮತ್ತೆ ಸೃಷ್ಟಿಸುತ್ತದೆ. ರೆಕ್ಕೆಯ ಬೀಸುತ ಚೇತನವನ್ನೂ ಅದು ಉಂಟುಮಾಡಿ ಮುಂದಿನ ಜನಾಂಗದ ಮಕ್ಕಳನ್ನು ಹರಸುತ್ತದೆ ಎಂದುಹೇಳುವಾಗ

**ಸ್ವಾ :** ಹಳೆಯದನ್ನು ನಾಶಗೊಳಿಸಿ, ಹೊಸದನ್ನು ಸೃಷ್ಟಿಸಿ ತಾನೇ ಶುಭ ಹಾರೈಸುತ್ತದೆ ಎಂಬುದು...

**5) ಮಂಗಳ ಲೋಕದ ಅಂಗಳಕೇರಿ**

**ಸಂ:** ಕಾಲಪಕ್ಷಿಯು ಭೂಮಂಡಲವನ್ನೂ ದಾಟಿ ಶುಕ್ರ , ಚಂದ್ರ , ಮಂಗಳಗ್ರ ಹಕ್ಕೂ ಹೋಗುತ್ತದೆ ಎಂದು ಹೇಳುವಾಗ

**ಸ್ವಾ :** ಮಾನವನ ದಾರ್ಶನಿಕ ಹಾಗೂ ವೈಜ್ಞಾನಿಕ ಪ್ರ ಗತಿಯ ಮುನ್ನೋಟವನ್ನು ಕವಿಯು...

**3. ಡಾ. ಬಿ.ಎಸ್.ಗದ್ದಗಿಮಠ / ಕನ್ನಡ ಜನಪದ ಗೀತೆಗಳು-ಕೃತಿ / ಹಲಗಲಿ ಬೇಡರರು-ಲಾವಣಿ**

**1) ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ**

**ಸಂ:** ಬ್ರಿ ಟಿಷ್ ಸರ್ಕಾರ ನಿಶ್ಯಸ್ತ್ರೀಕರಣ ಕಾನೂನನ್ನು ಜಾರಿಗೆ ತಂದಾಗ

**ಸ್ವಾ :** ಭಾರತೀಯರ ಮೇಲೆ ಬ್ರಿ ಟಿಷರ ದರ್ಪ ಹಾಗೂ ದಬ್ಬಾಳಿಕೆಯನ್ನು ಲಾವಣಿಕಾರನು..

2) **ಜೀವ ಸತ್ತು ಹೋಗುವುದು ಗೊತ್ತ**

**ಸಂ:** ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ಆಯುಧಗಳನ್ನು ಕೊಡಲು ಒಪ್ಪದೆ ಕೊಟ್ಟರೆ ಆಗುವ ಗತಿಯನ್ನು ತಿಳಿಸುವಾಗ

3) **ಸ್ವಾ :** ಹಲಗಲಿಯ ಬೇಡರು ಆಯುಧಗಳು ತಮ್ಮ ಪ್ರಾ ಣಕ್ಕಿಂತ ಮಿಗಿಲು ಎಂಬ ಭಾವನೆಯನ್ನು ಹೊಂದಿದ್ದರು ಎಂಬುದನ್ನು...

4) 3) **'ಹೊಡೆದರೊ ಗುಂಡ ಕರುಣ ಇಲ್ದಂಗ'**

**ಸಂ:** ಬ್ರಿ ಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಕೊಂದು ಹಾಕುವಾಗ

**ಸ್ವಾ :** ಹಲಗಲಿಯ ಬೇಡರ ಮೇಲಿನ ಬ್ರಿ ಟಿಷರ ನಿಷ್ಕರುಣೆ ಹಾಗೂ ಅವರ ಕ್ರೌ ರ್ಯವನ್ನು... ಹೇಳುವಾಗ

**4) ಕೆಟ್ಟು ವಣಿ ೯ಸಿ ಹೇಳಿದೆ ಕಂಡಷ್ಟು**

**5) ಸಂ:** ಬ್ರಿ ಟಿಷ್ ಸೈನಿಕರು ಹಲಗಲಿಯನ್ನು ಲೂಟಿಮಾಡಿ, ಬೆಂಕಿ ಹಚ್ಚಿ ಸುಟ್ಟು ಬೂದಿ ಮಾಡಿದರು ಎಂದು ಹೇಳುವಾಗ

**6) ಸ್ವಾ :** ಹಲಗಲಿ ಬೇಡರ ಮೇಲೆ ಬ್ರಿ ಟಿಷರ ದೌರ್ಜನ್ಯ ಹೇಳಲಾಗದಷ್ಟು ನಡೆದಿದೆ ಎಂಬುದನ್ನು...



agnidivya.blogspot.com

**4. ಕುಮಾರವ್ಯಾಸ/ಕರ್ಣಾಟ ಭಾರತ ಕಥಾಮಂಜರಿ–ಕಾವ್ಯ/ಕೌರವೇಂದ್ರನ ಕೊಂದೆ ನೀನು–ಕಾವ್ಯಭಾಗ**

1) **ರವಿಸುತನ ಕಿವಿಯಲ ಬಿತ್ತಿದನು ಭಯವ.**

2) **ಸಂ:** ಕೃಷ್ಣನು ಕರ್ಣನೊಡನೆ ಮೈದುನತನದ ಸರಸವನ್ನು ಮಾತನಾಡಿಸುವ ಸಂದರ್ಭದಲ್ಲಿ ಈ ಭೂಮಿಗೆ ನೀನೇ ನಿಜವಾದ ಒಡೆಯ ಎಂದು ಹೇಳುವಾಗ ಕವಿಯು

**ಸ್ವಾ :** ಕರ್ಣನನ್ನು ಮಾನಸಿಕವಾಗಿ ಕುಗ್ಗಿಸುವ ಸಲುವಾಗಿ ದ್ವಂದ್ವವನ್ನೂ, ಭಯವನ್ನು ಬಿತ್ತಿದ್ದನ್ನು...

**2) ಬಾಯ್ದಂಬುಕೆ ಕೈಯಾನುವರೆ.**

3) **ಸಂ:** ಶ್ರೀ ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡುತ್ತಾ ಹಸ್ತಿನಾಪುರದ ಘನತೆಯನು ಮಾಡುವೆನು, ಪಾಂಡವ–ಕೌರವ ರಾಜರು ನಿನ್ನ ಸೇವೆಯನ್ನು ಮಾಡುತ್ತಾರೆ ಎಂದು ಹೇಳುವಾಗ

4) **ಸ್ವಾ :** ಕರ್ಣನಿಗೆ ಶ್ರೀ ಕೃಷ್ಣನು ಪಾಂಡವರ ಕಡೆ ಸೆಳೆಯಲು ಅವನ ಒಡೆಯನ ಮೇಲೆಯೇ ಎತ್ತಿಕಟ್ಟುವ ಕೃಷ್ಣನ ಕಪಟತನವನ್ನು, ಅವನ ತಂತ್ರಗಾರಿಕೆಯನ್ನು ಕವಿ...

3) **ಜೀಯ ಹಸಾದವೆಂಬುದು ಕಷ್ಟ**

**ಸಂ:** ಶ್ರೀ ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡುತ್ತಾ ಎಡಗಡೆ ಕೌರವರೂ ಬಲಗಡೆ ಪಾಂಡವರು, ಎದುರಿಗೆ ಮಾದ್ರ, ಮಾಗಧ, ಯಾದವಾದಿಗಳು ನಡುವೆ ಕರ್ಣನು ಸಿಂಹಾಸನದಲಿ ಕುಳಿತುಕೊಳ್ಳುವ ಸೊಬಗನ್ನು, ವಿಲಾಸವನ್ನು ನೆನಪಿಸಿ ಈ ಮೇಲಿನ ಮಾತನ್ನು

**ಸ್ವಾ :** ನಿನಗೆ ರಾಜನಾಗಿರುವವನಿಗೇ ನೀನು ರಾಜನಾಗಬಹುದು ಎಂಬ ಆಮಿಷದ ತಂತ್ರವನ್ನು ಕೃಷ್ಣನು ಕರ್ಣನೆದುರು ಬಳಸಿರುವುದನ್ನು...

**4) ನಿನ್ನಪದೆಸೆಯ ಬಯಸುವನಲ್ಲ**

**ಸಂ:** ತನ್ನ ಜನ್ಮ ರಹಸ್ಯವನ್ನು ತಿಳಿದು ಮೌನಿಯಾದ ಕರ್ಣನನ್ನು ಕುರಿತು ಶ್ರೀ ಕೃಷ್ಣನು ಮೌನವೇತಕೆ ಮಾತನಾಡು ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :**ಕೃಷ್ಣನು ಕರ್ಣನ ಮಾನಸಿಕ ಬಲವನ್ನು ಕುಗ್ಗಿಸುತ್ತಾ ಅವನ ಹಿತಚಿಂತಕನಂತೆ ವರ್ತಿಸುವ ಚಾಣಾಕ್ಷತನ ಹಾಗೂ ತಂತ್ರಗಾರಿಕೆಯನ್ನು ವರ್ಣಿಸಿರುವುದು...

5) **ಮಾರಿಗೌತಣವಾಯ್ತು ನಾಳಿನ ಭಾರತವು.**

**ಸಂ:** ಶ್ರೀ ಕೃಷ್ಣನು ಕರ್ಣನಿಗೆ ಎಷ್ಟೇ ಆಮಿಷಗಳನ್ನು ಒಡ್ಡಿದರೂ ಅದಕ್ಕೆ ಬಲಿಯಾಗದೆ ತನ್ನ ಒಡೆಯನಾದ ದುರ್ಯೋಧನನ ಋಣವನ್ನು ತೀರಿಸುವ ಬಗೆಯನ್ನು ಹೇಳುವಾಗ ಕರ್ಣನು ಕೃಷ್ಣನಿಗೆ ಈಮಾತನ್ನು

**ಸ್ವಾ :** ಕರ್ಣನು ತನ್ನ ಒಡೆಯನ ಅನ್ನದ ಋಣವನ್ನು ತೀರಿಸುವ ಬಗೆ, ಕರ್ಣನ ಶೌರ್ಯ ಹಾಗೂ ಮಹಾಭಾರತ ಯುದ್ಧದ ಭೀಕರತೆಯನ್ನು

**5. ಕುವೆಂಪು/ಪಕ್ಷಿಕಾಶಿ– ಕವನ ಸಂಕಲನ/ಹಸುರು**

**1) ಹಸುರಾದುದು ಕವಿಯಾತ್ಮಂ**

**ಸಂ:** ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಹೊಸಧಾತ್ರಿಯ ಪ್ರಕೃತಿಯ ಹಸುರಿನ ಸೌಂದರ್ಯವನ್ನು ಸವಿದು ವರ್ಣಿಸುವ ಸಂದರ್ಭದಲ್ಲಿ/ಕವಿಯು ಮಲೆನಾಡಿನ ಹಸುರನ್ನು ಹಸುರು ನೋಟದಿಂದ ನೋಡುತ್ತಿದ್ದ ಅವರ ಆತ್ಮವೂ ಹಸುರಾಗಿತ್ತು ಎಂಬುದು...

**2) ಬೇರೆ ಬಣ್ಣವನೆ ಕಾಣೆ**

**ಸಂ:** ಆಶ್ವಯುಜ ಮಾಸದಲ್ಲಿ ಮಲೆನಾಡಿನ ಪರಿಸರವು ಹಸುರಿನ ಜಮಖಾನೆಯನ್ನು ಹಾಸಿದೆ, ಭೂದೇವಿಯೂ ಹಸುರನ್ನೇ ಹೊದ್ದಿರುವಳು ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :** ಕವಿಯ ನೋಡ, ಆತ್ಮ–ಎಲ್ಲವೂ ಹಸುರುಮಯವಾಗಿರುವಿದರಿಂದ ಮತ್ತೊಂದು ಬಣ್ಣವೇ ಇಲ್ಲ ಎಂದು ಹೇಳಿರುವುದು..

**3) ಹಸುರು ಹಸುರಿಳೆಯುಸಿರೂ**

**ಸಂ:** ಆಶ್ವಯುಜ ಮಾಸದ ನವರಾತ್ರಿಯ ಹೊಸ ನೆಲದಲ್ಲಿ ಹೊಸಹೂವಿನ ಕಂಪು, ಬೀಸು ಗಾಳಿಯ ತಂಪು, ಹಕ್ಕಿಯ ಕೊರಳಿನ ಇಂಪು ಎಂದು ಹೇಳುವ ಸಂದರ್ಭದಲ್ಲಿ

**ಸ್ವಾ :** ನಮಗೆ ಆಹಾರ ಹಸಿರಿನಿಂದ ಸಿಗುತ್ತದೆ. ಅದನ್ನು ನೀಡುವ ಭೂತಾಯಿ ಉಸಿರಾಡುವ ಉಸಿರಿನ ಬಣ್ಣ ಹಸಿರು, ಹಸಿರೇ ಉಸಿರು ಎಂದು ಹೇಳಿರುವುದು...

**4) ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್**

**ಸಂ:** ಆಶ್ವಯುಜ ಮಾಸದಲ್ಲಿ ಮಲೆನಾಡಿನ ಪರಿಸರವು ಸಂಪೂರ್ಣ ಹಸಿರಾಗಿದೆ ಎಂದು ತನ್ನ ನೋಟವನ್ನೂ, ಆತ್ಮವನ್ನೂ ಹಸಿರಾಗಿಸಿಕೊಂಡ ಕವಿಯು ಇತ್ತ, ಅತ್ತ, ಎತ್ತ ನೋಡಿದರೂ ಹಸುರೇ ಕಾಣುವುದು ಎನ್ನುವ ಸಂದರ್ಭದಲ್ಲಿ

5) **ಸ್ವಾ :** ಎಲ್ಲೆಲ್ಲೂ ಹಸುರಿನ ಸಾಗರವನ್ನೇ ಕಾಣುತಿರುವ ಕವಿಯ ಮನಸ್ಸು, ಆತ್ಮ, ನೆತ್ತರು ಹಸುರುಗಟ್ಟಿದೆ ಎಂಬ ಆನಂದದ ಪರಾಕಾಷ್ಠೆಯನ್ನು...

**6. ಮಹಾಕವಿ ರನ್ನ/ಸಾಹಸ ಭೀಮ ವಿಜಯಂ–ಮಹಾಕಾವ್ಯ/ಛಲಮನೆ ಮೆಱೆವೆಂ**

**1) ನೆಕಿಟೆವೆನೆಂದು ಬಗೆದಿರೆ ಚಕಿರಿವೆಂ**

**ಸಂ:** ಕುರುಕ್ಷೇತ್ರ ಯುದ್ಧದ ಸಂಧರ್ಭದಲ್ಲಿ ಶರಶಯ್ಯೆಯಲ್ಲಿ ಮಲಗಿರುವ ತಾತ ಭೀಷ್ಮರ ಆಶೀರ್ವಾದವನ್ನು ಬೇಡಲು ಬಂದ ದುರ್ಯೋಧನನು ತನ್ನ ತಾತನಿಗೆ ಈ ಮಾತನ್ನು

**ಸ್ವಾ :** 'ದುರ್ಯೋಧನನು ತನಗೆ ಸುಲಭದಿ ಸಿಗುವ ನೆಲಕ್ಕಿಂತ ಛಲವೇ ಮುಖ್ಯ ಎಂಬ ಛಲದ ಗುಣವನ್ನು....

**2) ಸಮರದೊಳಗಜ್ಜ ಪೇಟೆ ಮಾವುದು ಕಜ್ಜಂ**

**ಸಂ:** ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರ ಬಳಿ ಬಂದ ದುರ್ಯೋಧನನು ತಾನು ಬಂದಿರುವುದು ಆಶೀರ್ವಾದವನ್ನು ಬೇಡಲು, ಸಂಧಿ–ಒಪ್ಪಂದ ತನಗೆ ಏಕೆ ಎಂದು ಪ್ರಶ್ನಿಸುತ್ತಿರುವಾಗ ಈ ಮಾತನ್ನು...

**ಸ್ವಾ :** ತಾನು ಎಲ್ಲವನ್ನೂ ಕಳೆದುಕೊಂಡಿದ್ದೇನೆ, ಎಲ್ಲರನ್ನೂ ಕಳೆದುಕೊಂಡಿದ್ದೇನೆ ಈ ಯುದ್ಧದಲ್ಲಿ ತಾನು ಮಾಡುವ ಯಾವ ಕೆಲಸವೂ ಉಳಿದಿಲ್ಲ ಎಂಬುದನ್ನು ಸೂಚ್ಯವಾಗಿ ಹೇಳುವುದು...

**3) ಪಾಂಡವರೊಳಿಟೆದು ಛಮನೆ ಮೆರೆವೆಂ**

**ಸಂ:** ದುರ್ಯೋಧನನು ಭೀಷ್ಮರನ್ನು ಕುರಿತು ತನ್ನ ಎಲ್ಲಾ ತಮ್ಮಂದಿರೂ ಶತ್ರುಗಳೊನೆ ಹೋರಾಡಿ ಯುದ್ಧದಲ್ಲಿ ಸತ್ತರು. ಅವರು ಮತ್ತೆ ಹುಟ್ಟಿ ಬರುವರೇ ಎಂದು ಪ್ರಶ್ನಿಸುತ್ತಾ ಈ ಮಾತನ್ನು

**ಸ್ವಾ :** ತಾನು ಒಬ್ಬನೇ ಉಳಿದಿದ್ದರೂ ಅಂಜದೆ ತನ್ನ ಶತ್ರುಗಳಾದ ಪಾಂಡವರೊಡನೆ ಯುದ್ಧ ಮಾಡಿ ಛಲವನ್ನೇ ಮೆರೆಯುತ್ತೇನೆ ಎನ್ನುವ ದುರ್ಯೋಧನನ ಛಲದ ಗುಣ ಹಾಗೂ ಅವನ ಶೌರ್ಯವನ್ನು.....

**4) ಮೇಣಾಯ್ತು ಕೌರವಂಗವನಿತಳಂ.**

**ಸಂ:** ಶರಶಯ್ಯೆಯಲ್ಲಿ ಮಲಗಿರುವ ತಾತ ಭೀಷ್ಮರೊಡನೆ ದುರ್ಯೋಧನನು ಕೊನೆಯದಾಗಿ ಮಾತನಾಡುತ್ತ ತಾನು ಪಾಂಡವರೊಡನೆ ಯುದ್ಧವನ್ನು ಮಾಡುತ್ತೇನೆ. ಅವರು ಗೆದ್ದು ಒಡೆಯರಾಗಲಿ ಇಲ್ಲ ತಾನು ರಾಜನಾಗುತ್ತೇನೆ ಎನ್ನುವ ಸಂಧರ್ಭದಲ್ಲಿ

**ಸ್ವಾ :** ಕೊನೆಯವರೆಗೂ ಹೋರಾಡುವುದು ರಾಜನ ಗುಣ ಎಂದು ಹೇಳುವ ಛಲಕ್ಕೆ ಹೆಸರಾದ ದುರ್ಯೋಧನನ ಹೋರಾಡದ ಗುಣವನ್ನು..

**7. ಲಕ್ಷ್ಮೀಶ/ಜೈಮಿನಿ ಭಾರತ–ಕಾವ್ಯ/ವೀರಲವ**

1) **ರಘೂದ್ವಹನ ಸೊಲ್ಗೇಳಿ ನಮಿಸಲ್**

**ಸಂ:** ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ಭೂಮಿಯ ಎಲ್ಲಾ ಕಡೆಯೂ ಸಂಚರಿಸುತ್ತಾ ರಾಜ–ಮಹಾರಾಜರು ಅದಕ್ಕೆ ಸ್ವಾಗತ ಹಾಗೂ ನೀಡಿದ ಗೌರವವನ್ನು ವರ್ಣಿಸುವ ಸಂದರ್ಭದಲ್ಲಿ ಕವಿಯು

**ಸ್ವಾ :** ಶ್ರೀರಾಮನ ಹೆಸರನ್ನು ಕೇಳಿಯೇ ರಾಜ–ಮಹಾರಾಜರೂ ಹೆದರುತ, ನಮಿಸುತ ಶರಣಾದುದನ್ನು ಸ್ವಾರಸ್ಯಪೂರ್ಣವಾಗಿ...

2) ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ

**ಸಂ:** ಲವನು ತನ್ನ ಕಾವಲಿನ ಆಶ್ರ ಮದ ತೋಟವನ್ನು ತುಳಿಯುತ್ತಿದ್ದ ಯಜ್ಞಾಶ್ವವನ್ನು ಕಟ್ಟಿಹಾಕಿ ಅದರ ಹಣೆಯ ಮೇಲೆ ಬರೆದಿದ್ದ ಲೇಖನವನ್ನು ಓದುವಾಗ

**ಸ್ವಾ :** ಬಾಲಕನಾದರೂ ಹೆದರದೆ ತನ್ನ ವೀರತ್ವವನ್ನು ಪ್ರ ದರ್ಶಿಸುತ್ತ ತಾನು ಹೆದರಿದರೆ ತನ್ನ ತಾಯಿಗೇ ಅವಮಾನ ಎಂಬುದನ್ನು ಕವಿಯು..

3) ಅರಸುಗಳ ವಾಜಿಯಂ ಬಿಡು

**ಸಂ:** ಯಜ್ಞದ ಕುದುರೆಯನ್ನು ಲವನು ಕಟ್ಟಿಹಾಕಿದ್ದನ್ನು ಕಂಡ ಮುನಿಗಳ ಮಕ್ಕಳು ಹೆದರಿ ಈ ಮಾತನ್ನು

**ಸ್ವಾ :** ರಾಜನ ಕುದುರೆಯನ್ನು ಕಟ್ಟಿಹಾಕಿದ್ದನ್ನು ಕಂಡು ಹೆದರಿದ ಮುನಿಗಳ ಮಕ್ಕಳ ಸಹಜ ಗುಣವನ್ನು...

4) ಜಾನಕಿಯ ಮಗನಿದಕೆ ಬೆದರುವನೆ

**ಸಂ:** ಯಜ್ಞದ ಕುದುರೆಯನ್ನು ಕಟ್ಟಿಹಾಕಿದ ಲವನನ್ನು ಕಂಡು ಮುನಿಗಳ ಮಕ್ಕಳು ಹೆದರಿ ಕಟ್ಟಿದ ಕುದುರೆಯನ್ನು ಬಿಟ್ಟುಬಿಡಲು ಹೇಳಿದಾಗ ಮುನಿಗಳ ಮಕ್ಕಳು ಹೆದರಿದರೆ ತಾನು ಸೀತೆಯ ಮಗನು ಹೆದರುವುದಿಲ್ಲ ಎಂದು ಹೇಳುವ ಸಂದರ್ಭದಲಿ

**ಸ್ವಾ :** ಬಾಲಕನಾದರೂ ಲವನ ಧೈರ್ಯ, ತನ್ನ ತಾಯಿ ಸೀತೆ ಎನ್ನುವ ಗರಿಮೆ ಹಾಗೂ ಅವನ ಸಹಜ ಕ್ಷತ್ರಿ ಯ ಗುಣವನ್ನು ಕವಿಯು...

## 11. ಮಹಾಕವಿ ಪಂಪ/ವಿಕ್ರಮಾರ್ಜುನ ವಿಜಯಂ–ಮಹಾಕಾವ್ಯ/ಕೆಮ್ಮನೆ ಮೀಸೆವೊತ್ತನೇ–ಪದ್ಯಭಾಗ

1) ಈಗಳೊಂದಡಕೆಯುಮ್ಮಿ ಕೈಯೊಳ್

**ಸಂ:** ದ್ರೊ ಣನು ತನಗೆ ಬಡತನ ಉಂಟಾಗಿ ತನ್ನ ಮಗನಾದ ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದಾಗ ಪರಶುರಾಮರು ಬೇಡಿದವರಿಗೆ ಆಭರಣಗಳನ್ನೂ, ಗುರುಗಳಿಗೆ ಭೂಮಂಡಲಗಳನ್ನೂ ಕೊಟ್ಟೆ ಎಂದು ಮನದಲ್ಲಿ ಅಂದುಕೊಳ್ಳುವಾಗ

**ಸ್ವಾ :**ತನ್ನ ಬಳಿ ಏನೂ ಉಳಿದಿಲ್ಲ ಎಂಬುದರ ಬದಲು ಮೇಲಿನ ನುಡಿಗಟ್ಟನ್ನು ಬಳಸಿರುವುದು

2) ವಿದ್ಯಾಧನಮೆ ಧನಮಪ್ಪುದು

**ಸಂ:** ದ್ರೊ ಣನು ಬಡತನದಿಂದ ತನ್ನ ಮಗನೊಡನೆ ಪರಶುರಾಮರ ಬಳಿ ಬೇಡಲು ಬಂದಾಗ ಪರಶುರಾಮರು ಬಿಲ್ಲು ಹಾಗೂ ದಿವ್ಯಾಸ್ತ್ರದ ಗುಂಪು ಯಾವುದು ಬೇಕು ಎಂದಾಗ ಮೇಲಿನಂತೆ ದ್ರೊ ಣನು

**ಸ್ವಾ :** ಜಗತ್ತಿನಲ್ಲಿ ಶ್ರೆ ೀಷ್ಠವಾದುದು ವಿದ್ಯೆ, ಅದೇ ದೊಡ್ಡ ಸಂಪತ್ತೆಂದು ವಿದ್ಯೆಯ ಮಹತ್ವವನ್ನು ಹೇಳಿರುವುದು...

3) ಎಂತು ನಾಣಿ ್ಲಳಪ್ಪರೆ ಮಾನಸರ್

**ಸಂ:** ದ್ರೊ ಣನು ಬಡತನದಿಂದ ತನ್ನ ಮಗನೊಡನೆ ಗೆಳೆಯನಾದ ದ್ರು ಪದನ ಬಳಿ ಬೇಡಲು ಬಂದಾಗ ದ್ರು ಪದನು ದ್ರೊ ಣನನು ಕುರಿತು

**ಸ್ವಾ :** ಅಧಿಕಾರ ದೊರೆತಾಗ ಸಾಮಾನ್ಯ ಜನರಿಂದ ರಾಜನವರೆಗೂ ಹೇಗೆ ಬದಲಾಗುತ್ತಾರೆ ಎಂಬ ಅಧಿಕಾರ ಮದದ ವಾಸ್ತವತೆಯನ್ನು

4)ಜಲಕ್ಕನೀಗಳರಿದೆಂ ಸಿರಿಕಳ್ಗೊಡವುಟ್ಟಿತೆಂಬುದಂ

**ಸಂ:** ಸಹಾಯ ಬೇಡಲು ಬಂದ ದ್ರೊ ಣನನ್ನು ದ್ರು ಪದನು ಅವಮಾನಿಸಿದಾಗ ದ್ರೊ ಣನು ದ್ರು ಪದನನ್ನು ಕುರಿತು ಐಶ್ವರ್ಯದ ಮದ ಬಂದಾಗ ಮಾತು ತೊದಲುತ್ತವೆ, ಮುಖದಲ್ಲಿ ವಕ್ರ ಚೇಷ್ಟೆ ಉಂಟಾಗುತ್ತದೆ, ಸಂಬಂಧ ಮರೆಯುವಂತೆ ಮಾಡುತ್ತದೆ ಎಂದು ಹೇಳುವಾಗ

**ಸ್ವಾ :** ಐಶ್ವರ್ಯ–ಮದ್ಯ ಒಂದೇಕಡೆ ಹುಟ್ಟಿದ್ದರಿಂದ ಐಶ್ವರ್ಯ ಬಂದವನಿಗೆ ಮದವೂ ಬರುತ್ತೆ ಎಂಬುದು.

5) ನೊಳವಿಂಗೆ ಕುಪ್ಪೆ ವರಂ

**ಸಂ:** ಸಹಾಯ ಬೇಡಲು ಬಂದ ದ್ರೊ ಣನನ್ನು ದ್ರು ಪದನು ಅವಮಾನಿಸಿದಾಗ ದ್ರೊ ಣನು ದ್ರು ಪದನನ್ನು ಐಶ್ವರ್ಯವು ಹೆಂಡದೊಡನೆ ಹುಟ್ಟಿತು ಎಂದು ಈಗ ತಟ್ಟನೆ ತಿಳಿದೆನು ಎಂದು ಹೇಳುತ್ತಾ ಅವಮಾನಗೊಂಡು ದ್ರು ಪದನ ಯೋಗ್ಯತೆಯನ್ನು ಕಸದ ತಿಪ್ಪೆಯ ಮೇಲೆ ಕೂರುವ ನೊಣಕ್ಕೆ ಹೋಲಿಸಿ ಹೇಳುವಾಗ

**ಸ್ವಾ :** ದೋಣನು ಅವಮಾನಗೊಂಡು ಪ್ರತಿಜ್ಞೆ ಮಾಡುವಾಗ ಸಂದರ್ಭೋಚಿತವಾದ ಗಾದೆಯಬಳಕೆ

ಪದ್ಯ 4 ಅಂಕದ ಪದ್ಯ 1 ಪದ್ಯ 1*4=4

### 1. ಸಂಕಲ್ಪಗೀತೆ

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

---

**2. ಹಕ್ಕಿ ಹಾರುತಿದೆ ನೋಡಿದಿರಾ**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

---

**3.ಹಲಗಲಿ ಬೇಡರು**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣೆ ಅರಿಶಿಣ ಜೀರಿಗೆ ಅಕ್ಕಿ ಸಕ್ಕಾರಿ ಬೆಲ್ಲಾ
ಗಂಗಳ ಚೆರಿಗೆ ಮಂಗಳಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

---

**4.ಕೌರವೇಂದ್ರನ ಕೊಂದೆ ನೀನು**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

---

**5.ಹಸುರು**

ಹಸುರಾಗಸ;ಹಸುರು ಮುಗಿಲು;
ಹಸುರುಗದ್ದೆಯಾ ಬಯಲು;
ಹಸುರಿನ ಮಲೆ;ಹಸುರು ಕಣಿವೆ
ಹಸುರು ಸಂಜೆಯೀ ಬಿಸಿಲೂ

---

**6.ಛಲಮನೇ ಮೆರೆವೆಂ**

ನೆಲಕಿಜಿವೆನೆಂದು ಬಗೆದಿರೆ
ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ
ಟ್ಸಿಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವೆನೇ

7. ವೀರಲವ

8. ಉರ್ವಿಯೊಳ್ ಕೌಸಲ್ಯ ಪಡೆದ ಕುವರಂ ರಾಮ
**ನೋರ್ವನೇ ವೀರನಾತನ ಯಜ್ಞತುರಗವಿದು**

ನಿರ್ವಹಿಸಲಾರ್ಪರಾರಾದೊಡಂ ತಡೆಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

---

9. ಕೆಮ್ಮನೇ ಮೀಸೆವೊತ್ತೆನೇ?
ಅಂತೆಂಬನಾರ್ಗೆ ಪಿರಿದಂ
ಬಾಂತು ದಲೇಂ ದ್ರೊ ಣನೆಂಬನೇಂ ಪಾರ್ವನೆ ಪೇ
ಳೆಂತೆನಗೆ ಕೆಳೆಯನೇ ನೂಂ
ಕಂತಪ್ಪನನಜ಼ಯೆನೆಂದು ಸಭೆಯೊಳ್ ನುಡಿದಂ

---

4 ಅಂಕಕ್ಕೆ ಪದ್ಯದ ಭಾವಾರ್ಥ 1*4=4

## ಪದ್ಯ 01. ಸಂಕಲ್ಪಗೀತೆ ಪದ್ಯದ ಸಾರಾಂಶ

ಸಂಕಲ್ಪಗೀತೆ ಪದ್ಯವನ್ನು ಜಿ.ಎಸ್.ಶಿವರುದ್ರಪ್ಪನವರ 'ಎದೆತುಂಬಿ ಹಾಡಿದೆನು' ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ. ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂಬುದನ್ನು ಭಾವಗೀತೆಯ ಮೂಲಕ ವ್ಯಕ್ತಗೊಳಿಸುವುದೇ ಈ ಕವನದ ಆಶಯವಾಗಿದೆ.

*******

1) ನಮ್ಮ ಸುತ್ತಲೂ ಹಬ್ಬಿರುವ ದ್ವೇಷ ಮತ್ತು ಅಂಧಕಾರದ ಕತ್ತಲೆಯನ್ನು ಕಳೆಯಲು, ಪ್ರೀತಿ ಮತ್ತು ಜ್ಞಾನದ ದೀಪವನ್ನುಹಚ್ಚುವ ಮೂಲಕ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನಾದರೂ ಧೈರ್ಯವಾಗಿ ಎದುರಿಸಬಹುದು – ಎಂಬುದು ಕವಿಯ ಆಶಯವಾಗಿದೆ.

---

2) ಮಾನವನ ದುರಾಸೆಗೆ ಸಿಲುಕಿ ಕಲುಷಿತವಾಗಿರುವ ನದೀಜಲಗಳನ್ನು ಶುದ್ಧೀಕರಿಸಲು ನಾವು ಮುಂಗಾರಿನ ಮಳೆಯಾಗಬೇಕು. ಅಂದರೆ ಪರಿಸರ ರಕ್ಷಿಸುವ ಪರಿಸರ ಪ್ರೇಮಿಯಾಗಬೇಕು. ಕಾಡುಮೇಡುಗಳು ಬರಡಾಗಿದ್ದು ಅವುಗಳನ್ನು ಉಳಿಸಿ ಬಳೆಸಬೇಕು. ಅದಕ್ಕಾಗಿ ನಾವು ಹಚ್ಚಹಸಿರಿನಿಂದ ಕಂಗೊಳಿಸುವ, ಸಮೃದ್ಧವಾದ ವಸಂತಕಾಲವಾಗಬೇಕು. ಒಟ್ಟಾರೆ ನಾವೆಲ್ಲಾ ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡಬೇಕು. ಎಂಬುದು ಕವಿಯ ಆಶಯವಾಗಿದೆ.

---

ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತಬೇಕು. ಭಾಷೆ, ಜಾತಿ, ಮತ, ಧರ್ಮಗಳ ಭೇದಭಾವದಿಂದ ಮನುಷ್ಯರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ, ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗಬೇಕು. ಒಟ್ಟಾರೆ ಸಮಾಜವನ್ನು ಉದ್ಧರಿಸುತ್ತಾ ಭಾವೈಕ್ಯತೆಯನ್ನು ಬೆಳೆಸಬೇಕೆಂಬುದು ಕವಿಯ ಆಶಯವಾಗಿದೆ.

---

4) ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮಸುಕಾದವರ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಭರವಸೆಯನ್ನು ತುಂಬುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು. ಎಂದು ಕವಿ ಶ್ರೀ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಅಭಿಪ್ರಾಯವನ್ನುವ್ಯಕ್ತಪಡಿಸುತ್ತಾರೆ.

---

2.

## ಹಕ್ಕಿ ಹಾರುತಿದೆ ನೋಡಿದಿರಾ? ಭಾವಾರ್ಥ

'ಹಕ್ಕಿಹಾರುತಿದೆ ನೋಡಿದಿರಾ' ಕವನ ಬೇಂದ್ರೆಯವರ 'ಗರಿ' ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.
ಜಗತ್ತನ್ನು, ಜೀವಜೀವನಗಳನ್ನು, ಮಾತ್ರವಲ್ಲ, ಅಖಿಲ ಬ್ರಹ್ಮಾಂಡವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿರುವ 'ಕಾಲ'ವನ್ನು ಹಕ್ಕಿಗೆ ಹೋಲಿಸಿ ವರಕವಿ ರಚಿಸಿರುವ ರೂಪಕ 'ಹಕ್ಕಿ ಹಾರುತಿದೆ ನೋಡಿದಿರಾ?' ಇದು ಕನ್ನಡ ಸಾರಸ್ವತ ಲೋಕದ ಶ್ರೇಷ್ಠ ಕವಿತೆಗಳಲ್ಲೊಂದು. ಕಾಲದ ಗತಿಯನ್ನು ಮತ್ತು ಆಯಾಮವನ್ನು ಹಕ್ಕಿಯ ಹಾರಾಟಕ್ಕೆ ಹೋಲಿಸಿ ಕವಿಯಿಲ್ಲಿ ಹಕ್ಕಿಯ ರೂಪ(ಕ)ದಲ್ಲಿ ಕಾಲಕೋಶದಲ್ಲಿ ಪಯಣಿಸಿದ್ದಾರೆ. ಅಮೂರ್ತ ಸ್ವರೂಪದ ಕಾಲವನ್ನು ಮೂರ್ತ ರೂಪದ ಹಕ್ಕಿಗೆ ಸಮೀಕರಿಸಿ ದೃಶ್ಯ ರೂಪ ನೀಡಿದ್ದಾರೆ.

***********

1.ಭಾವಾರ್ಥ: ಈ ಚರಣದಲ್ಲಿ ಕವಿ ಕಾಲದ ಗತಿಯನ್ನು ವೇಗವನ್ನು ಚಿತ್ರಿಸಿದ್ದಾರೆ. ಕಾಲದ ಹಕ್ಕಿಯು ಅಗಣಿತ ಇರುಳುಗಳನ್ನು ಕಳೆದು, ಅಪರಿಮಿತದಿನಗಳನ್ನುಬೆಳಗುತ್ತಾಸುತ್ತಮುತ್ತ, ಮೇಲೆಕೆಳಗೆ, ಹೀಗೆ ವಿಶ್ವವ್ಯಾಪಿಯೂ ಅನಂತವೂ ಆಗಿ (ಗಾವುದ ಗಾವುದ) ಮುಂದೆ ಮುಂದೆ ಸಾಗುತ್ತಿರುತ್ತದೆ. ಯಾರ, ಯಾವ ನಿಯಂತ್ರಣಕ್ಕೂಸಿಕ್ಕದೆ ಕಣ್ಣುರೆಪ್ಪೆ ಮಿಟುಕಿಸುವಷ್ಟರಲ್ಲಿ ಕಾಲ ಸಾಗಿರುತ್ತದೆ. ಹೀಗೆಯೇ ದಿನರಾತ್ರಿಗಳು ಕಳೆಯುತ್ತವೆ. ಕಾಲದ ಹಕ್ಕಿ ನಿರಂತರವಾಗಿ ಹಾರುತ್ತಿರುತ್ತದೆ.

---

2 .ಭಾವಾರ್ಥ: ಈ ಚರಣದಲ್ಲಿ ಕವಿ ಹಕ್ಕಿಯ ಕತ್ತಲು (ಕರಿ) ಬೆಳಕು(ನೆರೆ) ಎಂಬ ಪುಚ್ಛ(ಹಕ್ಕಿಯ ಹಿಂಬದಿಯಲ್ಲಿರುವ ಬಾಲದಂತ ಗರಿಗಳಗುಚ್ಛ)ವನ್ನುಹೊಂದಿದೆ. ವರ್ತಮಾನವೆಂಬ ಬಿಳಿಬಣ್ಣದ, ಹೊಳಪಿನ ಗರಿಯು ಕಾಲದ ಹಕ್ಕಿಯಲ್ಲಿ ಗರಿಗರಿಯಾಗಿ ಕಂಗೊಳಿಸುತ್ತಿದೆ! ವರ್ತಮಾನವಾದ್ದರಿಂದ ಅದು ಬೆಳಕಿನಲ್ಲಿದೆ. ಎಂದೇ ಬಿಳಿ–ಹೊಳೆ ಬಣ್ಣ. ವರ್ತಮಾನಕ್ಕೆ 'ಹೊಳೆ'ವ ಬಣ್ಣ. ವರ್ತಮಾನವು,

ಹರಿಯುತ್ತಿರುವ (ಕಾಲದ) ಹೊಳೆಯೂ ಹೌದು. ಕೆನ್ನನಬಣ್ಣದ ಸೂರ್ಯಾಸ್ತ ಮತ್ತು ಹೊನ್ನಿನ ಬಣ್ಣದ ಸೂರ್ಯೋದಯ ಅದರ ಎರಡು ರೆಕ್ಕೆಗಳಾಗಿವೆ. ಇಲ್ಲಿ ಕಾಲದ ಹಕ್ಕಿಯ ಅನಂತ-ವಿಶಾಲ ರೂಪದ ಭವ್ಯತೆ ವ್ಯಕ್ತವಾಗಿದೆ.

---

3.ಭಾವಾರ್ಥ: ಕಾಲದ ಹಕ್ಕಿಯ ಬಣ್ಣ ನೀಲಮೇಘಮಂಡಲಸದೃಶವಾದುದು. ನೀಲಿ ಅಂದರೆ ವೈಶಾಲ್ಯ. ನೀಲಮೇಘಮಂಡಲದಂತೆ ಸಮಬಣ್ಣವೂ ಹೌದು. ಕಾಲದ ದೃಷ್ಟಿ ತರತಮರಹಿತ. ಕಾಲದ ಹಕ್ಕಿಯು ನೀಲಮೇಘಮಂಡಲದಂತೆ ಅಗಾಧ-ವ್ಯಾಪ ವಿಶಾಲ. ಎಷ್ಟೆಂದರೆ, ಆಕಾಶಕ್ಕೆ ರೆಕ್ಕೆಗಳು ಮೂಡಿ ಅಕಾಶವೇ ಹಾರುತ್ತ ಸಾಗಿದಂತೆ! ಕಾಲದ ಹಕ್ಕಿಯ 'ಹಾರಾಟ' (ಶ್ಲೇಷೆ ಗಮನಿಸಿರಿ) ಅಂಥದು! ಅನಾದಿಯೆಂಬ ಮುಗಿಲಿಗೆ ಮೂಡಿದ ರೆಕ್ಕೆಗಳೊಡನೆ, ಅನಂತವೆಂಬ ನೀಲಮೇಘಮಂಡಲದಲ್ಲಿ,ದಿನ-ಮಾಸ-ವರ್ಷ....ಯುಗ....ಮನ್ವಂತರ....ಕಲ್ಪ....ಗಳೆಂಬ ನಕ್ಷತ್ರಗಳ ಮಾಲೆ ಧರಿಸಿ, ದಿನ-ರಾತ್ರಿಗಳೆಂಬ ಸೂರ್ಯ-ಚಂದ್ರರನ್ನು ಕಣ್ಣುಗಳಾಗಿ ಹೊಂದಿ, ನೋಡುತ್ತ, ತೋರುತ್ತ, ತೋರಿಸುತ್ತ ಕಾಲದ ಹಕ್ಕಿಯು ಹಾರುತ್ತಿದೆ.

---

4.ಭಾವಾರ್ಥ: ಇಲ್ಲಿ ಕಾಲದ ಶಕ್ತಿ ಸಾಮರ್ಥ್ಯಗಳು, ಅದರ ಮುಂದೆ ಎಲ್ಲವೂ ನಶ್ವರ-ನಗಣ್ಯ ಎಂಬ ಭಾವ ವ್ಯಕ್ತವಾಗಿದೆ. ರಾಜ್ಯ-ಸಾಮ್ರಾಜ್ಯಗಳಭರ್ಜರಿ ತೆನೆಗಳನ್ನೆಲ್ಲ ಒಕ್ಕಿ-ಬಡಿದು-ಗಾಳಿಗೆ ತೂರಿತ್ತಾ, ಚಿಕ್ಕಪುಟ್ಟ ಮಂಡಲ-ಗಿಂಡಲಗಳ ಕೋಟೆಕೊತ್ತಲಗಳನ್ನೆಲ್ಲಮುಕ್ಕಿಮುಗಿಸುತ್ತಾ,ಖಂಡ-ಖಂಡಗಳನ್ನೇ (ಒಂದೆಡೆ ಪ್ರಾಕೃತಿಕ ಬದಲಾವಣೆ-ಪ್ರಗತಿ-ವಿಜ್ಞಾನ; ಇನ್ನೊಂದೆಡೆ ಯುದ್ಧ-ಪ್ರಕೃತಿವಿಕೋಪ-ವಿನಾಶಈರೀತಿ)ತೇಲಿಸಿ-ಮುಳುಗಿಸಿ,'ಸಾರ್ವಭೌಮ' ರೆಲ್ಲರ ನೆತ್ತಿಯ ಕುಕ್ಕಿಅಂದರೆಮಹಾನ್ಮಹಾನ್ ಸಾರ್ವಭೌಮ-ಸಾಮ್ರಾಟ-ಚಕ್ರವರ್ತಿ ಎಂದು ಮೆರೆದವರೂ ಇದರ ಮುಂದೆ ಸೋಲಲೇ ಬೇಕಾಯಿತು. ಅಂಥವರನ್ನೆಲ್ಲಾ ಕಾಲದ ಹಕ್ಕಿ ಹೊಸಕಿಹಾಕುತ್ತಾ ಇತಿಹಾಸ ಮಾಡಿ ನಿರಂತರ ಬದಲಾವಣೆಗಳನ್ನು ಮಾಡುತ್ತಾ ಇಲ್ಲಿ ಯಾವುದೂ ಯಾರೂ ಶಾಶ್ವತವಲ್ಲ ಎಂಬುದನ್ನು ಸಾರುತ್ತಾ ಹಾರುತ್ತಿದೆ.

---

5.ಭಾವಾರ್ಥ: ಇಲ್ಲಿ ಕಾಲದ ಪರಿವರ್ತನಾಶಿಲತೆ, ನವೀನಶಿಲತೆಯನ್ನು ಚಿತ್ರಿಸಲಾಗಿದೆ. ಕಾಲದ ಹಕ್ಕಿಯು ಯುಗಯುಗಗಳ ಆಗು ಹೋಗು ಗಳನ್ನು ತಿಕ್ಕಿ-ತೀಡಿ, ಚರಿತ್ರೆಯನ್ನು ಹಿಂದೆಬಿಟ್ಟು (ಅಳಿಸಿ ಒರಸಿ), ಮನ್ವಂತರಗಳ (ಅಂದರೆ ದೀರ್ಘ ಕಾಲಾವಧಿಯ) (ಅಂದರೆ ಪ್ರಗತಿಗೆ) ಹೇತುವಾಗಿ-ಸಾಕ್ಷಿಯಾಗಿ , ಮನ್ವಂತರಗಳ (ಅಂದರೆ ಪರಿವರ್ತನೆಯ ಸಮಯದ) ಭಾಗ್ಯಕ್ಕೆ ಅಂದರೆ ಇತ್ಯಾತ್ಮಕ ಬದಲಾವಣೆಗಳಿಗೆ) ಹೇತುವಾಗಿ-ಸಾಕ್ಷಿಯಾಗಿ, ರೆಕ್ಕೆಯ ಬೀಸುತ್ತ (ಅಂದರೆ ಕಾಲಕ್ರಮದಲ್ಲಿ) ಚೇತನಗೊಳಿಸಿ (ಅಂದರೆ ಪ್ರಗತಿಯ ಕಸುವು ನೀಡಿ), ಹೊಸಗಾಲದ ಹಸುಮಕ್ಕಳ ಹರಸಿ (ಅಂದರೆ ಬದಲಾದ ಲೋಕಕ್ಕೆ ಕಣ್ಣುತೆರೆದ ಅಂದಂದಿನ ಜನರನ್ನು-ಜೀವಿಗಳನ್ನು ಮುನ್ನಡೆಸಿ ಮತ್ತು ಇಂದಿನ ಲೋಕಕ್ಕೆ ಕಣ್ಣುತೆರೆದಿರುವವರನ್ನು ಮುನ್ನಡೆಸುತ್ತ) ಕಾಲದ ಹಕ್ಕಿಯು ಹಾರುತ್ತಿದೆ (ಕಾಲ ಸಾಗುತ್ತಿದೆ).

---

6. .ಭಾವಾರ್ಥ ಕಾಲಗತಿಯಲ್ಲಿ ಮಾನವನು ವೈಜ್ಞಾನಿಕವಾಗಿ ಆಕಾಶದೆತ್ತರಕ್ಕೆ ಬೆಳೆದಿದ್ದಾನೆ. ಅವನ ಅನ್ವೇಷಣೆ ಕೇವಲ ಭೂಮಂಡಲಕ್ಕೆ ಮಾತ್ರ ಸೀಮಿತವಾಗಿಲ್ಲ. ಬೆಳ್ಳಿಯ ಅಂದರೆ ಶುಕ್ರಗ್ರಹದ ವಾಯುಮಂಡಲವನ್ನು ಪ್ರವೇಶಿಸಿದ ಮಾನವ ತಿಂಗಳಿನೂರಿನ ಅಂದರೆ ತಿಂಗಳಬೆಳಕಿನ ಚಂದ್ರನ 'ತಂಪು'ನೆಲ ತುಳಿದು ಇದೀಗ ಮಂಗಳಗ್ರಹದ ಅಂಗಳವನ್ನೂ ತಲುಪಿದ್ದಾನೆ. ಕಾಲಾಂತರದಲ್ಲಿ ವೈಜ್ಞಾನಿಕವಾಗಿ ಮಾನವನ ಸಾಧನೆಯನ್ನು ಕವಿ ಸಾಂಕೇತಿಕವಾಗಿ ಇಲ್ಲಿ ವರ್ಣಿಸಿದ್ದಾರೆ.

---

7) .ಭಾವಾರ್ಥ ಕಾಲಗತಿಯಲ್ಲಿ ಮಾನವನು ತನ್ನ ಪ್ರಗತಿಶೀಲತೆಯನ್ನು ದಿಕ್ಕುದಿಕ್ಕುಗಳೆಡೆ ಹರಿಸಿದ್ದಾನೆ. ಗತಿಶೀಲನಾಗಿದ್ದಾನೆ. ನಾವು ವಿಶ್ವ(ದ) ರೂಪವನ್ನ ರಿಯಲೆತ್ನಿಸುತ್ತಿದ್ದೇವೆ. ಬ್ರಹ್ಮಾಂಡದಾಚೆಗೂ ನಮ್ಮ ಗಮನವನ್ನು ಹರಿಯಬಿಟ್ಟಿದ್ದೇವೆ. ಈ ನಮ್ಮ ಗತಿಯು ಕಾಲಕ್ರಮದಲ್ಲಿ ಬ್ರಹ್ಮಾಂಡದ ರಹಸ್ಯ ವನ್ನು ಒಡೆಯುತ್ತದೆಯೇ ಅಥವಾ ಈ ವಿಶ್ವವನ್ನೇ ಹೋಳುಮಾಡುತ್ತದೆಯೇ ಬಲ್ಲವರು ಯಾರು? ಇಂಥ ಯಾವುದೋ ಘಟನೆಗೆ ಆ ಸೃಷ್ಟಿಕರ್ತ ಹಾಕಿರುವ ಹೊಂಚೇ ಇದೆಲ್ಲ? ಸೃಷ್ಟಿಕರ್ತನೋ, ಈ ವಿಶ್ವದ ಇನ್ನಾವುದೋ ಶಕ್ತಿಯೋ? ಇದೆಲ್ಲ ಉದ್ದೇಶಿತವೋ ಅನುದ್ದೇಶಿತವೋ? ಯಾರು ಬಲ್ಲರು? ಈ ನಿಗೂಢಗಳನ್ನೊಳಗೊಂಡಿರುವ 'ಕಾಲ'ವೆಂಬ ಹಕ್ಕಿಯು ಹಾರುತ್ತಿದೆ. ನಿರಂತರವಾಗಿ ಮುಂದೆ ಮುಂದೆ ಸಾಗುತ್ತಿದೆ. ಎಂದು ಕವಿ ವರ್ಣಿಸಿದ್ದಾರೆ.

## 3. ಹಲಗಲಿ ಬೇಡರು (10 ನೇ ತರಗತಿ ಪ್ರಥಮ ಭಾಷೆ ಕನ್ನಡ ಪದ್ಯಪಾಠ) ಲಾವಣಿ ಸಾರಾಂಶ

ಪ್ರಸ್ತುತ ಲಾವಣಿಯಲ್ಲಿ ಹಲಗಲಿಯ ಬೇಡರು ನಡೆಸಿದ ಬಂಡಾಯದ ಪ್ರಸ್ತಾಪವೇ ಪ್ರಮುಖ ಅಂಶವಾಗಿರುವುದು. ಲಾವಣಿಕಾರ ಬೇಡರನ್ನು ಕತ್ತಿ ಹಿಡಿಯುವ ಜನ ಎಂದು ಕರೆಯಲು ಕಾರಣ ಅವರಲ್ಲಿನ ಶೂರತೆ ಮತ್ತು ಕತ್ತಿ ಹಿಡಿಯುವ ಕಾಯಕ ಅವರಿಗೆ ಅನಿವಾರ್ಯ ಎಂಬುದನ್ನು ಪ್ರತಿ ಬಿಂಬಿಸುತ್ತದೆ. ಕತ್ತಿ ಶೂರರಾದ ಹಲಗಲಿ ಬೇಡರಿಗೆ ಕತ್ತಿ ಹಿಡಿಯುವ ಸಮಯ ಸನ್ನಿಹಿತವಾಯಿತು. ಆದರೆ ಬೇಡರ ಬಂಡಾಯವು ನಿರೀಕ್ಷಿತ ಯಶಸ್ಸು ಪಡೆಯಲು ವಿಫಲವಾಯಿತು (ಮುಟ್ಟಲಿಲ್ಲ ದಡಕ).

---

1. ಬ್ರಿಟಿಷ್ ಸರಕಾರವು ೧೮೫೭ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆಯ ನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದಿತು. ಅದರಂತೆ ಎಲ್ಲ ಭಾರತೀಯರನ್ನು ಒಪ್ಪಿಸಿ ಅಥವಾ ಬೆದರಿಸಿಯಾದರೂ ಅವರ ಬಳಿಯಿರುವ ಆಯುಧ (ಹತಾರ)ಗಳನ್ನು ಕಸಿದು ಕೊಳ್ಳಬೇಕೆಂದು ಕಂಪನಿಯ ಸರ್ಕಾರ ಮುಂದಾದಾಗ ಹಲಗಲಿ ಬೇಡರು ಮುಧೋಳದ ಬಳಿ ಸೇರಿದರು. ಪೂಜೇರಿ ಹನುಮ, ಬೇಡರ ಬಾಲ, ಜಡಗ , ರಾಮ ಮೊದಲಾದವರು ಸೇರಿ ನಾವು ನಾಲ್ವರೂ ಜೊತೆಗಿರೋಣ ಯಾವುದೇ

ಕಾರಣಕ್ಕೂ ನಮ್ಮ ಬಳಿಯಿರುವ ಆಯುಧಗಳನ್ನು ಕೊಡಬಾರದು ಹತಾರಗಳು (ಆಯುಧಗಳು) ಹೋದರೆ ನಮ್ಮ ಜೀವವೇ ಹೋದಂತೆ ಎಂದು ತೀರ್ಮಾನಿಸಿದರು. ಬೇಡರೆಲ್ಲರೂ ಕಲೆತು ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ನೀವು ಮುಂದಾಗಿ ಯುದ್ಧ ಮಾಡಿರಿ; ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಎಂದು ತಮ್ಮ ಮುಖಂಡರಿಗೆ ವಚನ ನೀಡಿದರು. ಕಾಯಿದೆಯನ್ನು ಜಾರಿಗೊಳಿಸಲು ಅಂದರೆ ಆಯುಧ ಕೇಳಲು ಬ್ರಿಟಿಷ್ ಅಧಿಕಾರಿ (ಸೆಟನ್ ಕರ್) ಪರವಾಗಿ ಬಂದ ಕಾರಭಾರಿಯ ಕೆನ್ನೆಗೆ ಹೊಡೆದರು. ಇದರಿಂದ ದುಃಖಿತನಾದ ಕಾರಬಾರಿ(ಕಾರಕೂನ) ಈ ವಿಷಯವನ್ನು ತನ್ನ ಸಾಹೇಬನಿಗೆ ತಿಳಿಸಿದನು.

---

ಸಾಹೇಬ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ತನ್ನ ಕೆಲವು ಜನರನ್ನು (ಅಶ್ವದಳ) ಹಲಗಲಿಗೆ ಕಳಿಸಿದಾಗ ಮುಂಗಾರಿನ ಸಿಡಿಲು ಸಿಡಿದ ಹಾಗೆ ಊರೊಳಗೆಲ್ಲ ಗುಂಡಿನ ಮಳೆಗರೆಯುತ್ತಾರೆ. (ಬೇಡರು ಆಯುಧ ಕಸಿಯಲು ಬಂದವರ ಮೇಲೆ ಗುಂಡಿನ ಮಳೆ ಸುರಿಸಿದರು) ಬಂದವರು ಬೇಡರ ಧಾಳಿಗೆ ತುತ್ತಾಗಿ ಗಾಯಗೊಂಡು ದಂಗಾಗಿ ಹಿಮ್ಮೆಟ್ಟುತ್ತಾರೆ.ಸಾಹೇಬ ವಿಧಿಯಿಲ್ಲದೆ ತನ್ನ ಮೇಲಧಿಕಾರಿಗೆ ಕಾಗದ ಬರೆದು ದಂಡನ್ನು ಕಳಿಸುವಂತೆ ಕೋರಿದಾಗ ತರಾತುರಿಯಿಂದ ಹಲಗಲಿಗೆ ದಂಡು ಆಗಮಿಸಿತು.

---

3. ಬೇಡರನ್ನು ಕಂಡ ಕಂಡಲ್ಲಿ ಹತ್ಯೆಗೈಯ್ಯ ಲಾಯಿತು ಸಿಕ್ಕಸಿಕ್ಕಲ್ಲಿ ಗುಂಡು ಹೊಡೆದು ಸಾಯಿಸಲಾಯಿತು ಚಟಕಾರ 'ಜಾಯಿತ ಸಾಹೇಬ' (ಜಿ.ಬಿ.ಸೆಟನ್ ಕರ್, ದಕ್ಷಿಣ ಮಹಾರಾಷ್ಟ್ರದ ರಾಜಕೀಯ ಪ್ರತಿನಿಧಿ ಲೆಫ್ಟಿನೆಂಟ್ ಕರ್ನಲ್) ಕಾವಲು ಕಾಯುತ್ತ ಬೇಡರ ಬಿಡಾರಗಳಿಗೆ ನುಗ್ಗಿ ಬೇಡರಿಗೆ ತೊಂದರೆ ನೀಡಿದನು. ಊರಿನ ಮುಖ್ಯ ದ್ವಾರಕ್ಕೆ ಬಂದು ಹೆಬಲಕ್ ಸಾಹೇಬ (ವಿಲಿಯಂ ಹೆನ್ರಿ ಹೆವಲಾಕ್) ಬೇಡರಿಗೆ ಅನ್ಯಥಾ ಸಾಯದೇ ಆಯುಧಗಳನ್ನು ಮರಳಿಸುವಂತೆ ಕೇಳಿಕೊಳ್ಳುತ್ತಾನೆ. ಆದರೆ ಬೇಡರ ಹನುಮನಿಗೆ ಹೆಬಲಕ್ ಸಾಹೇಬನ ಮಾತಿನಲ್ಲಿ ನಂಬಿಕೆ ಮೂಡುವುದಿಲ್ಲ.

---

4. ಬ್ರಿಟಿಷರು ಘಾತಕರು, ವಿಶ್ವಾಸಘಾತ ಮಾಡಿರುವರು ಇವರ ಮೇಲೆ ನಮಗೆ ನಂಬಿಗೆ ಇಲ್ಲ. ಇವರು ಪಿತೂರಿ ಮಾಡಿ ಮೋಸದಿಂದ ನಮ್ಮ ದೇಶ ಗೆಲ್ಲುವವರು, ಮುಂದೆ ನಮಗೆ ಘೋರ ವಿಪತ್ತು ಇವರಿಂದ ಕಾದಿದೆ ಎಂದು ಬಗೆದ ಜಡಗ ಬುದ್ಧಿವಾದ ಹೇಳಲು ಬಂದ ಅಧಿಕಾರಿ(ಹೆಬಲಕ್) ಯ ಮೇಲೆ ಗುಂಡು ಹಾರಿಸಿ ಕಳುಹಿಸಿದನು. ಇದರಿಂದ ಸಿಟ್ಟಾದ ಬ್ರಿಟಿಷರ ಇನ್ನೊಬ್ಬ ಅಧಿಕಾರಿ ಬೇಡರ ಊರನ್ನೇ ಲೂಟಿ ಮಾಡುವಂತೆ ತನ್ನ ಜನರಿಗೆ ಆದೇಶ ನೀಡಿದನು. ಸಿಟ್ಟಿನಿಂದ ಬ್ರಿಟಿಷರು ಒಂದೇ ಸಮನೆ ಗುಂಡಿನ ಮಳೆ ಸುರಿಸಿದರು. ಹನುಮ, ಬಾಲ, ಜಡಗ, ರಾಮರ ಹೋರಾಟ ವ್ಯರ್ಥವಾಯಿತು. ಎಲ್ಲೆಡೆಯೂ ರಕ್ತದ ಕಾಲುವೆ ಹರಿಯಿತು. ಆದರೆ ಬೇಡರ ಹೋರಾಟ ಫಲಕಾರಿಯಾಗದೆ ನಾಲ್ಕು ಮಂದಿ ಬೇಡರ ಮುಖಂಡರು ವೀರ ಮರಣವನ್ನು ಹೊಂದಿದರು.

---

5. ಬೇಡರ ಕೃಷಿ ಉಪಕರಣಗಳು ಆಹಾರ ಪದಾರ್ಥಗಳು ಮನೆಯಲ್ಲಿ ದಿನನಿತ್ಯ ಬಳಸುತ್ತಿದ್ದ ವಸ್ತುಗಳು, ಸ್ತ್ರೀಯರ ಮಂಗಳಸೂತ್ರ, ಬೀಸುವ ಕಲ್ಲು ಅಂದರೆ ಹಲಗಲಿ ಬೇಡರ ಊರಿನಲ್ಲಿ ಮನೆಗಳಲ್ಲಿ ಸಿಕ್ಕ ಸಿಕ್ಕ ವಸ್ತುಗಳೆಲ್ಲವನ್ನು ಬ್ರಿಟಿಷರು ದೋಚಿದರು. ಕೊನೆಗೆ ಇಡೀ ಊರಿಗೆ ಬೆಂಕಿ ಇಟ್ಟರು. ಹಲಗಲಿ ಊರು ಸುಟ್ಟು ಬೂದಿಯಾಯಿತು. ಗುರುತೇ ಸಿಗದಂತೆ ನಾಶವಾಯಿತು. ಕುರ್ತಕೋಟಿ ಕಲ್ಲೇಶನ ದಯದಿಂದ ಲಾವಣಿಕಾರ ಈ ಎಲ್ಲ ವಿಷಯಗಳನ್ನು ತಾನು ಕಂಡಷ್ಟು ವರ್ಣಿಸಿರುವುದಾಗಿ ಹೇಳಿದ್ದಾನೆ. (ಈ ಸಾರಂಶವನ್ನು ಮಮತಾ ಭಾಗ್ವತ ಅವರ ಪ್ರತೀಕ್ಷಾ ದಿಂದ ತೆಗೆದುಕೊಳ್ಳಲಾಗಿದೆ.

---

## ಪದ್ಯ . 4 ಕೌರವೇಂದ್ರನ ಕೊಂದೆ ನೀನು.

**ಈ ಪದ್ಯವನ್ನು ಕುಮಾರವ್ಯಾಸನು ರಚಿಸಿದ ಕರ್ಣಾಟ ಭಾರತ ಕಥಾಮಂಜರಿ ಕಾವ್ಯದಿಂದ ಆರಿಸಿಕೊಳ್ಳಲಾಗಿದೆ. ಕರ್ಣನ ಸ್ವಾಮಿನಿಷ್ಠೆ, ಧೃಢ ನಿರ್ಧಾರ ಅಚಲವಾದ ನಿಲುವು, ಸಂಕಲ್ಪ, ಪ್ರತಿಜ್ಞೆ, ಇಲ್ಲಿ ವಿಶೇಷವಾಗಿ ಬಂದಿದೆ.**

**1.** ರಾಕ್ಷಸ ಸಂಹಾರಕನಾದ (ದನುಜ ರಿಪು) ಕೃಷ್ಣನು ಸೂರ್ಯನ ಮಗ(ಇನತನೂಜ) ನಾದ ಕರ್ಣನೊಡನೆ ಮೈದುನತನದ ಸರಸದಿಂದ (ಪ್ರೀತಿಯಿಂದ) ಬರಸೆಳೆದು ರಥದ ಪೀಠದಲ್ಲಿ ಕುಳ್ಳಿರಿಸಿದನು. ಆಗ ಅದನ್ನು ನಿರೀಕ್ಷಿಸದ ಕರ್ಣನು "ನಿಮ್ಮೊಡನೆ ನಾನು ಸರಿಸಮಾನನಾಗಿ ಕುಳಿತುಕೊಳ್ಳಬಹುದೇ? ದೇವ ಮುರಾರಿ, ನನಗೇಕೋ ಭಯವಾಗುತ್ತಿದೆ" ಎಂದು ಹೇಳಲು, ಶ್ರೀಕೃಷ್ಣನು(ಶೌರಿ) ಅವನ ಪಕ್ಕಕ್ಕೆ ತೊಡೆ ಸೋಕುವಂತೆ ಕುಳಿತು ಹೀಗೆಂದನು.

---

**2.** ಕರ್ಣ, ಕೌರವರು ಯಾದವರಿಗೆ ಭೇದವಿಲ್ಲ. ವಿಚಾರ ಮಾಡಿ ನೋಡಿದರೆ ಇಬ್ಬರೂ ಒಂದೇ ವಂಶದವರು. (ಯಯಾತಿಯ ಮಕ್ಕಳು ಪುರು, ಯದು, ಪುರುವಿನ ವಂಶದವರು ಕೌರವರು. ಯದುವಿನ ವಂಶದವರು ಯಾದವರು) ನಿನ್ನಾಣೆಯಾಗಿಯೂ ನೀನೇ ರಾಜ (ಮೇದಿನಿಪತಿ) ಆದರೆ ನಿನಗೆ ಅದರ ಅರಿವಿಲ್ಲ ಎಂದು ಹೇಳುವ ಮೂಲಕ ದಾನವರ ವೈರಿಯಾದ ಶ್ರೀಕೃಷ್ಣನು ರವಿಸುತ (ಕರ್ಣ)ನ ಕಿವಿಯಲ್ಲಿ ಭಯವನ್ನು ಬಿತ್ತಿದನು.

---

**3.** ಪಾಂಡವರ ತಾಯಿಯಾದ ಕುಂತಿಯು ದೂರ್ವಾಸ ಮುನಿಗಳಿಂದ ಪಡೆದ ಐದು ಮಂತ್ರಗಳಲ್ಲಿ ನೀನು ಮೊದಲನೆಯವನು, ನಿನ್ನ ನಂತರದಲ್ಲಿ ಜನಿಸಿದವನು ಯುಧಿಷ್ಠಿರ(ಧರ್ಮತರಾಯ), ಮೂರನೆಯವನು ಶೂರನಾದ ಭೀಮನು, ಅರ್ಜುನನು(ಫಲುಗುಣ) ನಾಲ್ಕನೆಯವನು ಆನಂತರದಲ್ಲಿ ಮಾದ್ರಿಯಲ್ಲಿ (ಪಾಂಡುವಿನ ಎರಡನೇ ಪತ್ನಿಗೆ ಮೊದಲ ಪತ್ನಿಯಾದ ಕುಂತಿಯು ದಯಪಾಲಿಸಿದ ಒಂದು ಮಂತ್ರದ ಕೃಪೆಯಿಂದ) ಒಂದು ಮಂತ್ರದಿಂದ ನಕುಲ ಸಹದೇವರು ಜನಿಸಿದರು ಎಂದು ಶ್ರೀ ಕೃಷ್ಣನು ಕರ್ಣನಿಗೆ ಅವನ ಜನ್ಮ ವೃತ್ತಾಂತವನ್ನು ಹೇಳಿದನು .

---

**4.** ನಿನಗೆ ಹಸ್ತಿನಾಪುರದ(ಹಸ್ತನಾವತಿ) ರಾಜನ ಹಿರಿಮೆಯನ್ನುಕೊಡಿಸುವೆನು. ಪಾಂಡವ ಕೌರವ ರಾಜರೆಲ್ಲರೂ ನಿನ್ನನ್ನು ಓಲೈಸುವರು. ಈ ಎರಡೂ ಸಂತತಿಯವರೂ ನಿನಗೆ ಸೇವಕರೆನಿಸಿಕೊಳ್ಳುವ ಹಿರಿಮೆಯನ್ನು ತಿರಸ್ಕರಿಸಿ ನೀನು ದುರ್ಯೋಧನನ

ಬಾಯ್ದಂಬುಲಕೆ(ಬಾಯಿಯಲ್ಲಿ ಅಗಿದು ಉಗುಳುವ ತಾಂಬೂಲ) ಕೈಯೊಡ್ಡುವುದು ಸರಿಯೇ ? ಹೇಳು ಎಂದು ಶ್ರೀಕೃಷ್ಣನು ಕರ್ಣನನ್ನು ಪ್ರಶ್ನಿಸುತ್ತಾನೆ.

---

**5.** ನಿನ್ನ ಎಡ ಭಾಗದಲ್ಲಿ ಕೌರವನ ಸಮೂಹದವರು, ಬಲ ಭಾಗದಲ್ಲಿ ಪಾಂಡವರ ಸಮೂಹ (ಪಾಂಡು ರಾಜನ ಮಕ್ಕಳು), ಇದಿರಿನಲ್ಲಿ ಮಾದ್ರಿ, ಮಾಗಧ, ಯಾದವಾದಿಗಳು ಇವರೆಲ್ಲರ ನಡುವೆ ನೀನು ಓಲಗದಲ್ಲಿ ಶೋಭಿಸುವ ನೀನು ಇಂತಹ ಮಹಾಸೌಭಾಗ್ಯವನ್ನು ಅತ್ತ ಎಸೆದು ಕುರುಪತಿ (ಕೌರವ/ದುರ್ಯೋಧನ) ನಿನಗೇನಾದರೂ ಹೇಳಿದರೆ 'ಜೀಯಾ, ಮಹಾಪ್ರಸಾದ' ಎಂದು ಒಪ್ಪಿಕೊಳ್ಳುವುದು ನಿನಗೆ ಕಷ್ಟವಾಗುವುದು ಎಂದು ಶ್ರೀಕೃಷ್ಣನು ಕರ್ಣನಿಗೆ ಹೇಳಿದನು.

---

**6.**ಕರ್ಣನ ಕೊರಳ ನರಗಳು ಹಿಗ್ಗಿದವು (ಗದ್ಗದ) ಕಣ್ಣೀರು ಧಾರೆಯಾಗಿ ಸುರಿಯಿತು. ಅವನು ಬಹಳವಾಗಿ ನೊಂದು "ಅಯ್ಯೋ! ಕುರುಪತಿಗೆ ಕೇಡಾಯಿತು" ಎಂದು ತನ್ನ ಮನದೊಳಗೆ ಅಂದುಕೊಂಡು "ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ? ಬರಿದೆ ನನ್ನ ಜನ್ಮವೃತ್ತಾಂತವನ್ನು ಹೇಳಿ ಕೊಂದನು. ಹೆಚ್ಚು ಮಾತೇನು?" ಎಂದು ಚಿಂತಿಸಿದನು .

---

**7.** (ಕರ್ಣನು ಮನಸ್ಸಿನಲ್ಲಿ ಚಿಂತಿಸುತ್ತಿರುವುದನ್ನು ನೋಡಿ) ಏನು ಹೇಳು ಕರ್ಣ? ನಿನ್ನ ಮನಸ್ಸಿನ ಜಡತ್ವಕ್ಕೆ, ವ್ಯಾಕುಲತೆಗೆ ಕಾರಣವೇನು? ಕುಂತಿಪುತ್ರರಿಂದ ಸೇವೆ ಮಾಡಿಸಿಕೊಳ್ಳುವುದು ನಿನಗೆ ಇಷ್ಟವಾಗುವುದಿಲ್ಲವೇ? ನನ್ನಾಣೆ, ಏನೂ ಹಾನಿ ಇಲ್ಲ, ಮಾತನಾಡು. ಮೌನವೇಕೆ? ಈ ದಡ್ಡತನ ಬೇಡ, ನಿನ್ನ ಹಾನಿಯನ್ನು(ಅಪದೆಸೆ, ಕೇಡು) ನಾನು ಬಯಸುವವನಲ್ಲ; ಕೇಳು." ಎಂದು ಕೃಷ್ಣನು ಕರ್ಣನಿಗೆ ಸಾಂತ್ವನ ಹೇಳುತ್ತಾನೆ.

---

**8.** "ಅಯ್ಯೋ ಮರುಳು ಕೃಷ್ಣನೇ, ಈ ಭೂಮಿ ರಾಜ್ಯದ ಸಂಪತ್ತಿಗೆ ನಾನು ಸೋಲುವವನಲ್ಲ. ಕೌಂತೇಯರು(ಪಾಂಡವರು), ಕೌರವರು ನನಗೆ ಸೇವೆ ಮಾಡಬೇಕೆನ್ನುವುದರಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲ(ಇಚ್ಛೆಯಿಲ್ಲ). ನನ್ನನ್ನು ಸಲಹಿದ ನನ್ನ ಒಡೆಯನಿಗೆ (ದಾತಾರ-ದಾತೃ) 'ಶತ್ರುಗಳ ತಲೆಯನ್ನು ಕಡಿದು ಒಪ್ಪಿಸುವೆನು' ಎನ್ನು ಆತುರದಲ್ಲಿದ್ದೆನು. ಆದರೆ ನೀನು ಕೌರವೇಂದ್ರನನ್ನು ಕೊಂದುಹಾಕಿದೆ" ಎಂದು ಕರ್ಣನು ನೋವಿನಿಂದ ಶ್ರೀಕೃಷ್ಣನಿಗೆ ಹೇಳಿದನು.

---

**9.** ವೀರ ಕೌರವರಾಯನೇ(ದುರ್ಯೋಧನನೇ) ನನಗೆ ಒಡೆಯನು, ಆತನ ಶತ್ರುಗಳೇ ನನ್ನ ಶತ್ರುಗಳು, ಅವನ ಅಭಿಮಾನವೇ (ಹೊಗಳಿಕೆಯೇ) ನನಗೆ ಅಭಿಮಾನ. ಅವನಿಗೆ ಆಗುವುದೇ ನನಗೆ ಆಗಲಿ, ಕೃಷ್ಣನೇ ಕೇಳು, ನಾಳೆ ಯುದ್ಧಭೂಮಿಯಲ್ಲಿ ನನ್ನ ಭುಜಬಲಶೌರ್ಯದ ಪರಾಕ್ರಮವನ್ನು ಪಾಂಡುತನಯ(ಪಾಂಡವರು)ರ ಮೇಲೆ ತೋರುವೆನು ಎಂದು ಕರ್ಣನು ಹೇಳಿದನು.

---

**10.** ನಾಳೆ ಬರಲಿರುವ ಭಾರತ(ಮಹಾಭಾರತ)ಯುದ್ಧವು ಮಾರಿಗೆ ಔತಣವಾಗುವುದು. ಆ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ, ನನ್ನ ಒಡೆಯ ದುರ್ಯೋಧನನಿಗಾಗಿ (ಅವಸರಕ್ಕಾಗಿ=ಸಮಯಕ್ಕಾಗಿ) ನನ್ನ ದೇಹವನ್ನು ಅರ್ಪಿಸುವೆನು(ಪ್ರಾಣಬಿಡುವೆನು) ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

---

## ಪದ್ಯ 5. ಹಸುರು ಪದ್ಯ ಭಾಗದ ಸಾರಾಂಶ

ಕುವೆಂಪು ವಿರಚಿತ ಪಕ್ಷಿಕಾಶಿ ಎಂಬ ಕವನ ಸಂಕಲನದಿಂದ ಹಸುರು ಪದ್ಯವನ್ನು ಆಯ್ದುಕೊಳ್ಳಲಾಗಿದೆ.

`ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪಸಂಬಂಧವನ್ನುತೋರಿಸುತ್ತದೆ.

---

ಕವಿಯಾತ್ಮವು ಹಸುರುಟ್ಟಲು ಆಶ್ವಯುಜ ಮಾಸದ ನವರಾತ್ರಿಯ ದಿನದಲ್ಲಿ ಹೊಸ ಚಿಗುರಿನಿಂದ ಕೂಡಿದ ಭೂಮಿಯಲ್ಲಿ ವಿಶಾಲವಾದ ಶಾಮಲ ಕಡಲು ಹಸುರಾಗಿರುವುದನ್ನು ನೋಡಿ ಕವಿಯ ಆತ್ಮವನ್ನು ರಸಪಾನದಲ್ಲಿ ಮಿಂದಿತು. ಆಗಸದಲ್ಲಿ; ಮುಗಿಲಿನಲ್ಲಿ; ಗದ್ದೆಯ ಬಯಲಿನಲ್ಲಿ; ಬೆಟ್ಟಗುಡ್ಡಗಳಲ್ಲಿ; ಕಣಿವೆಯಲ್ಲಿ; ಸಂಜೆಯ ಬಿಸಿಲಿನಲ್ಲಿ ಎಲ್ಲೆಲ್ಲೂ ಹಸುರು ಹರಡಿತ್ತು.

---

ಅಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈ ಮುಚ್ಚಿರಲು ಕವಿಗೆ ಬೇರೆ ಬಣ್ಣಗಳೇ ಕಾಣದಾದವು.

---

ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಕಡಲು; ಅತ್ತ-ಇತ್ತ-ಎತ್ತ ನೋಡಿದರೂ ಹಸುರು.. ಹಸುರು.. ಹಸರು.. ಇದನ್ನು ನೋಡಿದ ಕವಿಯಾತ್ಮವು ಹಸುರುಗಟ್ಟಿತು. ಕವಿಯ ದೇಹದಲ್ಲೂ ಹಸುರು ರಕ್ತವೇ ಹರಿದಾಡಿತು. ಎಂದು ಹಸುರು ವ್ಯಾಪಿಸಿದ ಬಗೆಯನ್ನು ಕವಿ ಕುವೆಂಪು ಅವರು ವರ್ಣಿಸಿದ್ದಾರೆ.

---

## ಪದ್ಯ 6. 'ಛಲಮನೆ ಮೆಱೆವೆಂ' ಪದ್ಯಭಾಗದ ಸಾರಾಂಶ

ರನ್ನ ವಿರಚಿತ ಸಾಹಸಭೀಮ ವಿಜಯ ವಿಜಯ ( ಗದಾಯುದ್ಧ ) ಎಂಬ ಕೃತಿಯಿಂದ ಈ ಪದ್ಯಭಾಗವನ್ನು ಆಯ್ದುಕೊಳ್ಳಲಾಗಿದೆ.

ಪೀಠಿಕೆ: ಮಹಾಭರತ ಯುದ್ಧದಲ್ಲಿ ತನ್ನೆಲ್ಲ ಸಹೋದರರನ್ನೂ ಆಪ್ತಮಿತ್ರನಾದ ಕರ್ಣನನ್ನೂ ಕಳೆದುಕೊಂಡ ದುರ್ಯೋಧನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕಒಳ್ಳುವುದು ಸೂಕ್ತವೆಂದು ದುರ್ಯೋಧನನಿಗೆ ಸಲಹೆ ನೀಡುತಾರೆ. ಆದರೆ ಸಂಧಿಮಾಡಿಕೊಳ್ಳು ಒಪ್ಪದ ದುರ್ಯೋಧನನು ತಾನು ಯುದ್ಧಮಾಡುವುದಾಗಿ ಹೇಳುತ್ತಾನೆ.

ಈ ಸಂದರ್ಭದಲ್ಲಿ ದುರ್ಯೋಧನನು ಭೀಷ್ಮರೊಂದಿಗೆ ಮಾತನಾಡುವಾಗ ಆತನಲ್ಲಿ ಛಲ, ಅವನ ದೃಢನಿರ್ಧಾರ ಮತ್ತು ಅವನ ಅಭಿಮಾನದ ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

********************

ಸಾರಾಂಶ: ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಹಿಂದಿನಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು. ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು

______________________________________________ ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ? ಅಜ್ಜಾ, ಯುದ್ಧದಲ್ಲಿ ಇನ್ನು ನನ್ನ ಕಾರ್ಯವೇನೆಂಬುದನ್ನು ಹೇಳಿರಿ.

*ನಾನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ದಿನಪಸುತನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಬಾಳುವೆನೆ?

*ನನ್ನ ಪ್ರೀತಿಯ ಗೆಳೆಯನನ್ನು(ಕರ್ಣನನ್ನು) ನನ್ನ ಪ್ರೀತಿಯ ತಮ್ಮನನ್ನು(ದುಶ್ಯಾಸನ) ಕೊಂದ ಅರ್ಜುನ-ಭೀಮರು ಬದುಕಿರುವವರೆಗೆ ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ಅಜ್ಜಾ, ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನೂ ಕೊಲ್ಲುವೆನು.ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿಮಾಡಿಕೊಳ್ಳುತ್ತೇನೆ. ನನ್ನ ದುಃಖ ಆರಿದ ನಂತರ ಸಂಧಿ ಆಗುವುದಿಲ್ಲ ಎನ್ನುವೆನೇ?

---

*ಹುಟ್ಟಿದ ನೂರು ಜನರೂ, ನನ್ನ ಒಡ ಹುಟ್ಟಿದ ನೂರುಮಂದಿ ಸಹೋದರರು (ಯುದ್ಧದಲ್ಲಿ) ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆಯಿತು(ಪೊದಟ್ಟುದು). ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ.

---

*ಅಜ್ಜ, ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಆದ್ದರಿಂದಈ ಭೂಮಿ ಪಾಂಡವರದಾಗಬೇಕು ಇಲ್ಲವೇ ಕೌರವನದಾಗಬೇಕು ಎಂದು ದುರ್ಯೋಧನನು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳಿದನು.

---

## ಪದ್ಯ 7 ವೀರಲವ ಪದ್ಯದ ಸಾರಾಂಶ

**ವೀರಲವ ಪದ್ಯವನ್ನು ಲಕ್ಷ್ಮೀಶ ಕವಿಯ 'ಜೈಮಿನಿ ಭಾರತ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ**

ರಾಮನ ಆಜ್ಞೆಯನ್ನು ಕೇಳಿ ಭುಜಬಲ ಪರಾಕ್ರ ಮಿಗಳಾದ ರಾಜರು ಹೆದರಿ, ತಡೆಯದೆ, ನಮಸ್ಕರಿಸಲು, ಭೂಮಿಯಲ್ಲಿ ಸಂಚರಿಸುತ್ತ ಯಜ್ಞದ ಉತ್ತಮ ವಾದ ಕುದುರೆ ಬಂದು ವಾಲ್ಮೀಕಿಯ ನಿಜಾಶ್ರ ಮದ ಉಪಯೋಗದ ತೋಟದಲ್ಲಿ ಹುಲ್ಲುಗಳ ಹಸುರಿಗೆ ಬಯಸಿ,ಹೊಕ್ಕಾಗ , ವೀರಲವನು ಆ ತೋಟದ ಕಾವಲಿಗೆ ತನ್ನ ಜೊತೆಗಾರರ ಕೂಡಿ ಆನಂದದಿಂದ ಆಟವಾಡುತ್ತಾಅತಿಶಯವಾದ ಬಾಣವನ್ನು ತೆಗೆದುಕೊಂಡು ಬಂದವನು,ಪೂಜಿಸಲ್ಪಟ್ಟ ಉತ್ತಮ ಕುದುರೆಯನ್ನು ಕಂಡನು.

---

1.ಇದು ಯವ ಕಡೆಯ ಕುದುರೆಯು ,ಹೊಕ್ಕು,ಹೂದೋಟವನ್ನು ನುಗ್ಗು ನುರಿಯಾಗುವಂತೆ ತುಳಿದುದು/ಸೊಪ್ಪಾಗುವಂತೆ ತುಳಿದುದು. ವಾಲ್ಮೀಕಿ ಮುನಿನಾಥನೇ ಒಣಗದಂತೆ ಕಾಪಾಡುವುದು ಎಂದು ನನಗೆ ನೇಮಿಸಿ , ವರುಣನು ಕರೆಸಲಾಗಿ ಹೋದನು.ಮತ್ತೆ ವರುಣನ ಲೋಕದಿಂದ ಬಂದು ಕೋಪಗೊಳ್ಳದಿರುವನೇ ಎಂದು ಲವನು ಕುದುರೆಯ ಕಡೆಗೆ ನಡೆದು ಬಂದು ನೋಡಿದನು. ಅಲ್ಲದೆ ಅದರ ನೆತ್ತಿಯಲ್ಲಿ /ಹಣೆಯಲ್ಲಿ ಎದ್ದು ಕಾಣುವ ಚಿನ್ನದ ಪಟ್ಟಿಕೆಯ ಬರೆಹವನ್ನು ಓದಿಕೊಳ್ಳುತ್ತಿದ್ದನು.

---

2."ಭೂಮಂಡಲದಲ್ಲಿ ಕೈಸಲ್ಯೆಯು ಪಡೆದ ಕುಮಾರನು ರಾಮನು ಒಬ್ಬನೇ ವೇರನು. ಅವನ ಯಜ್ಞದ ಕುದುರೆಯು ಇದು. ನಿಭಾಯಿಸಲು ಸಾಮುರ್ಥ್ಯ ವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಇದ್ದ ಬರೆಹವನ್ನು ಓದಿ," ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆ ಎನ್ನದಿರುವರೇ, ತನಗೆ ಇರುವ ತೋಳುಗಳು ಇವು ಏತಕೆ"? ಎಂದು ನಿಜ ಪ್ರ ತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು.

---

3.ಮೇಲು ಹೊದಿಕೆಯನ್ನು ತೆಗೆದು ಹುರಿಮಾಡಿ ಕುದುರೆಯ ಕೊರಳಿಕೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಲು ಮುನಿಗಳ ಮಕ್ಕಳು
ಅಧಿಕವಾಗಿ ನಡುಗಿ "ಬೇಡಬೇಡ ಅರಸುಗಳ ಕುದುರೆಯನ್ನು ಬಿಡಿ, ನಮ್ಮನ್ನು ಹೊಡೆಯುವರು" ಎಂದಾಗ ನಗುತ "ಬ್ರಾ ಹ್ಮಣರ ಮಕ್ಕಳು ಹೆದರಿದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಲವನು ಶೌರ್ಯದಿಂದ ಹೆದೆಯನ್ನು ಬಿಗಿದು, ಸವರಿ ಧನುಷ್ಟಂಕಾರ ಮಾಡಿ ನಿಂತಿದ್ದನು.

## ಪದ್ಯ 8 ಕೆಮ್ಮನೆ ಮೀಸೆವೊತ್ತೆನೇ [ ಗದ್ಯಾನುವಾದ ]

ಈ ಪದ್ಯವನ್ನು ಪಂಪ ಕವಿಯ 'ಪಂಪ ಭಾರತ'( ವಿಕ್ರಮಾರ್ಜುನ ವಿಜಯ) ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ

ಸಾರಾಂಶ: ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶದೇಶಗಳಲ್ಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದನು. ಈಗ ನಾರುಮಡಿಯಿಂದ ಕೂಡಿದ ನಡುವನ್ನುಳ್ಳವನೂ ಜಟಾಸಮೂಹದಿಂದ ಕೂಡಿದವನೂ ಆದ ಆಪರಶುರಾಮನು ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

---

1.ಸಾರಾಂಶ: ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದಡಕೆಯೂ ಇಲ್ಲ. ಬೇಡುವವನಾದರೋ ವೇದಪಾರಂಗತ. ಹೇಗೆ ಅವನನ್ನುಸಂತೋಷಪಡಿಸಲಿ?'ಎಲೈ ದ್ರೋಣನೆ ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು.

ಸಾರಾಂಶ: ಎಂಬುದಾಗಿ ಹೇಳಲು ದ್ರೋಣನು ನನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು ಎನ್ನಲು ವಾರುಣ, ವಾಯುವ್ಯ, ಆಗ್ನೇಯ, ಐಂದ್ರಾದಿ ಅಸ್ತ್ರಗಳನ್ನು ಕೊಡಲು ಅದನ್ನು ತೆಗೆದುಕೊಂಡು ಪರಶುರಾಮನಿಂದ ಅಪ್ಪಣೆ ಪಡೆದು ತನ್ನ ಒಡನಾಡಿಯೂ ಸ್ನೇಹಿತನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆಂದು ಕೇಳಿ ಆ ಪಟ್ಟಣಕ್ಕೆ ಬಂದು ದ್ರುಪದನರಮನೆಯ ಬಾಗಿಲಲ್ಲಿ ನಿಂತು ಬಾಗಿಲು ಕಾಯುವವನನ್ನು ಕರೆದು ನಿಮ್ಮ ಜೊತೆಯಲ್ಲಾಟವಾಡಿದ ಸ್ನೇಹಿತನಾದ ದ್ರೋಣನೆಂಬ ಬ್ರಾಹ್ಮಣನು ಬಂದಿದ್ದಾನೆಂದು ನಿಮ್ಮ ರಾಜನಿಗೆ ತಿಳಿಯಪಡಿಸು ಎಂದನು. ಅವನು ಆ ರೀತಿಯಲ್ಲಿಯೇ ಬಂದು ತಿಳಿಸಲಾಗಿ ದ್ರುಪದನು ರಾಜ್ಯವೆಂಬ ಮದ್ಯದಿಂದ ಸೊಕ್ಕಿದವನೂ ಅಹಂಕಾರವೆಂಬ ಗ್ರಹದಿಂದ ಪೀಡಿತನಾದ ಮನಸ್ಸುಳ್ಳವನೂ ಆಗಿ ಒಳ್ಳೆಯ ನಡತೆಯಿಲ್ಲದೆ

---

2.ಸಾರಾಂಶ: 'ಹಾಗೆನ್ನುವವನು ಯಾರ ಸಂಬಂ? ಇದು ವಿಶೇಷ ಭ್ರಮೆಯಲ್ಲವೆ? ದ್ರೋಣನೆಂಬುವವನು ಬ್ರಾಹ್ಮಣನೇ ಹೇಗೆ? ನನಗೆ ಸ್ನೇಹಿತನೇ ಹೇಳು? ಅಂತಹವನನ್ನು ನಾನು ತಿಳಿದಿಲ್ಲ ; ಅವನನ್ನು ಹೊರಕ್ಕೆ ತಳುಫಿ'ಈಆ' ಎಂದು ಸಭಾಮಧ್ಯದಲ್ಲಿ ಕೆಟ್ಟಮಾತನಾಡಿದನು.

ವ॥ ಹಾಗೆ ಹೇಳಿದುದನ್ನು ದ್ವಾರಪಾಲಕನು ಬಂದು ಆ ರೀತಿಯಲ್ಲಿ ತಿಳಿಸಲಾಗಿ ದ್ರೋಣನು ಬಲಾತ್ಕಾರದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ

---

3.ಸಾರಾಂಶ: 'ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ' ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ (ನೀನು ನನಗೆ ಅಪರಿಚಿತನು) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮಭೇದಕ ವಾಗುವಂತೆ ಹೀಯ್ಯಾಳಿಸಿದನು.

ವ॥ ಹಾಗೆ ಮಾಡಿದುದೂ ಅಲ್ಲದೆ ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ನೂಕು ಎನ್ನಲು ದ್ರೋಣನು ಹೀಗೆಂದನು–

---

4.ಸಾರಾಂಶ: ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು; ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಸಂಬಂಧವನ್ನು ಮರೆಯುವಂತೆ ಮಾಡುವುದು; ಆದುದರಿಂದ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ಈಗ ವಿಶದವಾಗಿ ತಿಳಿದೆನು' ವ॥ ಎಂದು ಹೇಳಿ ಸಹಿಸಲಾರದೆ.

---

5.ಸಾರಾಂಶ: 'ಎಲೋ ಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?

---

**ಗದ್ಯಭಾಗ 4 ಅಂಕದ ಪ್ರಶ್ನೆಗಳು ಗದ್ಯ 1 ಪದ್ಯ 1 2*4== 08**

---

## 1. ಸಂಕಲ್ಪಗೀತೆ

1. ನಾವು ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?

ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು ಪ್ರೀತಿಯ ದೀಪವನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕು ಎಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು. ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದಿಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಾಗಬೇಕು.ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಮೃದ್ಧ ವಾಗುವಂತಹ ವಸಂತಕಾಲ ವಾಗಬೇಕು. ಅತ್ಯಾಚಾರ,–ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅದಃಪತನ ಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವಂತಾಗಬೇಕು ಜಾತಿ,ಮತ ,–ಧರ್ಮಗಳ ಹಾಗೂ ಭಾಷೆಗಳ ಭೇದಭಾವದಿಂದ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ. ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗಬೇಕು. ಎಲ್ಲಾ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವಂತಾಗಬೇಕು.ಭಯ ಹಾಗೂ ಸಂಶಯಗಳಿಂದ ಮಸುಕಾದ

**ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಆಗಬೇಕು .ಇವೆಲ್ಲವೂ ಆಗುವಂತೆ ಧೃಢ ಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು. ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ**

2. ಹಕ್ಕಿ ಹಾರುತಿದೆ ನೋಡಿದಿರಾ? 2.

ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು? ದ ರಾ ಬೇಂದ್ರೆ ಅವರು ಹಕ್ಕಿಹಾರುತಿದೆ ನೋಡಿದಿರಾ ಕವನದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ." ರಾತ್ರಿಗಳು ಕಳೆದ ಹಗಲುಗಳು ದಶ ದಿಕ್ಕುಗಳಿಗೂ ಕಣ್ಣು ರೆಪ್ಪೆ ಬಿಡಿಸುವಷ್ಟು ಸಮಯದಲ್ಲಿ ಕಾಲಪಕ್ಷಿಯ ಗಾವುದ ಗಾವುದ ವೇಗದಲ್ಲಿ ಮುಂದೆ ಸಾಗುತ್ತಿರುತ್ತದೆ. ಕಾಲ ಪಕ್ಷಿಗೆ ಗಲಕಾಲ ಸೂಚಿತ ಕಪ್ಪು–ಬಿಳುಪಿನ ಬಣ್ಣದ ಪುಚ್ಚ ಗಳು, ವರ್ತಮಾನ ಕಾಲ ಸೂಚಿತ ಬಿಳಿ ಹೊಳೆ ಬಣ್ಣದ ಗರಿಗಳು, ಭವಿಷ್ಯತ್ಕಾಲ ಸೂಚಿತ ಸಂಜೆಯ ಕಾಲದಲ್ಲಿ ಕಾಣುವ ಕೆಂಪು ಹೊಂಬಣ್ಣದ ರೆಕ್ಕೆಗಳಿವೆ ಸಮದೃಷ್ಟಿ ಪೂರಿತ ಬಣ್ಣಗಳಿಂದ ಕೂಡಿದ ನೀಲಮೇಘ ಮಂಡಲದ ಮುಗಿಲಿಗೆ ರೆಕ್ಕೆಗಳನ್ನು ಚಾಚಿ ನಕ್ಷತ್ರ ಮಾಲೆಯನ್ನು ಧರಿಸಿ, ಸೂರ್ಯ–ಚಂದ್ರರನ್ನು ಕಣ್ಣಾಗಿಸಿಕೊಂಡು ಕಾಲಪಕ್ಷಿಯು ಹಾರುತ್ತಿದೆ. ಕಾಲಪಕ್ಷಿಯು ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿಸಿ, ಫಲ ಪಡೆದು ಭೂಮಂಡಲದ ಮೇಲಿರುವ ಖಂಡಗಳ ಪ್ರಗತಿ ಮತ್ತು ವಿನಾಶಕ್ಕೂ ಕಾರಣವಾಗಿದೆ. ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ನಿಂತಿದೆ ಈಗ ಯುಗಯುಗಗಳ ಹಿಂದಕ್ಕೆ ಹೊಸ ಪರಿವರ್ತನೆಗೆ ಕಾರಣವಾಗಿದೆ ಹಗಲು–ರಾತ್ರಿಗಳೆಂಬ ತನ್ನ ರೆಕ್ಕೆಗಳ ಬಿಸಿ ಜೀವಿಗಳಿಗೆ ಚೈತನ್ಯ ನೀಡಿ ನವ ಪೀಳಿಗೆಯ ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತದೆ ಕಾಲಪಕ್ಷಿಯ ಹಾಡುತ್ತಾ ಹಾಡುತ್ತಾ ಹಾಡುತ್ತಾ ಶುಕ್ರಗ್ರಹ ಎಂಬ ಹಳ್ಳಿಯ ಮೇರೆಯ ಮೀರಿ ಚಂದ್ರಲೋಕದ ನೀರನ್ನು ಮಂಗಳಗ್ರಹದ ಅಂಗಳವನ್ನು ಸಹ ಎಂಬ ದಾರ್ಶನಿಕ ಮುನ್ನೋಟ ನುಡಿಯಲ್ಲಿ ವ್ಯಕ್ತವಾಗಿದೆ ಈ ಕಾಲಪಕ್ಷಿಯ ದಿಗ್ಮಂಡಲಗಳ ಹಾಗೂ ವೈಜ್ಞಾನಿಕ ಪ್ರಗತಿಯ ಅಂಚನ್ನು ಮುಟ್ಟಿ ಅನಂತತೆಯ ಆಚೆಗೂ ತನ್ನ ಕುಂಚವನ್ನು ಚಾಚಿದೆ ಜಗತ್ತನ್ನೇ ಈ ಕಾಲಪಕ್ಷಿ ಹೊಡೆಯಲೆಂದು ಹೊಂಚುಹಾಕಿ ಹಾರುತಿದೆ ಬಲ್ಲವರಾರು ಇಂತಹ ಹಕ್ಕಿ ಹಾರುವುದನ್ನು ನೋಡಿದಿರಾ ಎಂದು ಕವಿ ಪ್ರ ಶ್ನಿಸುತ್ತಿದ್ದಾರೆ.

3. ಹಲಗಲಿ ಬೇಡರು

3. ಹಲಗಲಿ ದಂಗೆಗೆ ಕಾರಣವೇನು? ಸರ್ಕಾರ ಅದನ್ನು ಹೇಗೆ ನಿಯಂತ್ರಿಸಿತು?

ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ತಮ್ಮಲ್ಲಿ ಇರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು". ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೇ ಇದ್ದದ್ದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟೀಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿ ಬೇಡರನ್ನು ಬ್ರಿಟೀಷರ ದಂಡಿನ ಸಿಪಾಯಿಗಳು ಕರುಣೆ ಇಲ್ಲದೇ ಗುಂಡು ಹೊಡೆದು ಸಾಯಿಸಿದರು. ಆಗ ಹಲಗಲಿಯ ವೀರರೆಲ್ಲರೂ ಬ್ರಿಟೀಷ್ ಸಿಪಾಯಿಗಳ ವಿರುದ್ಧ ಹೋರಾಡಿ ವೀರ ಮರಣವನ್ನು ಅಪ್ಪಿದರು. ಸಿಪಾಯಿಗಳು ಹಲಗಲಿಯನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಹಚ್ಚಿದ್ದರಿಂದ ಹಲಗಲಿ ಗುರುತು ಸಿಕ್ಕದಂತೆ ಸುಟ್ಟು ಹೋಯಿತು ..

2.ಹಲಗಲಿ ದಂಗೆಯ ಪರಿಣಾಮವೇನು ?

ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿದ್ದು ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜಾರಿ ಹನುಮ ಬ್ಯಾಡರ ಬಾಲ ಜಡಗ ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೇ ಇದ್ದದ್ದು ಹಲಗಲಿಯ ಬೇಡರು ದಂಗೆ ಹೇಳಲು ಪ್ರಮುಖ ಕಾರಣವಾಯಿತು. ನಿಶಸ್ತ್ರಿಕರಣದ ಆದೇಶವನ್ನು ವಿರೋಧಿಸಿ ಬ್ರಿಟೀಷ್ ಸರ್ಕಾರದ ವಿರುದ್ಧ ದಂಗೆಯೆದ್ದರು.ಬ್ರಿಟೀಷರ ದಂಡುಹಲಗಲಿಗೆ ಬಂದಿತು. ಹಲಗಲಿಯ ಬೇಡರನ್ನು ಬ್ರಿಟಿಷರ ದಂಡಿನ ಸಿಪಾಯಿಗಳು ಜನರನ್ನು ಬೆಂಬತ್ತಿ ಕಡಿದು ಹಾಕಿದ ಮೇಲೆ ಕರುಣೆ ಇಲ್ಲದೆ ಗುಂಡುಹಾರಿಸಿದರು. ಹಲಗಲಿಯ ಪೂಜೇರಿ ಹನುಮ ಬ್ಯಾಡರ ಬಾಲ ಜಡಗ ರಾಮ ಮೊದಲಾದ ವೀರರು ಹೋರಾಡಿ ವೀರ ಮರಣವನ್ನು ಹೊಂದಿದರು ಬ್ರಿಟೀಷ್ ಸೈನಿಕರು ಕೊಡಲಿ, ಕೋರೆ,ಕುಡ, ಕಬ್ಬಿಣ, ಮೊಸರು, ಬೆಣ್ಣೆ ಹಾಲು, ಸಕ್ಕರೆ, ಬೆಲ್ಲ, ಮಂಗಳಸೂತ್ರ ಎಲ್ಲವನ್ನೂ ಲೂಟಿ ಮಾಡಿ, ಊರಿಗೆ ಬೆಂಕಿ ಇಟ್ಟು ,ಬೂದಿ ಮಾಡಿದರು. ಹಲಗಲಿಯು ಗುರುತಿಸಲಾಗದಷ್ಟು ಸಂಪೂರ್ಣ ನಾಶವಾಯಿತು.

4. ಕೌರವೇಂದ್ರನ ಕೊಂದೆ

4. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?



agnidivya.blogspot.com

"ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ .ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ". ಎಂದು ಹೇಳುತ್ತಾ ಕರ್ಣನ ಜನ್ಮ ವೃತ್ತಾಂತವನ್ನು ಹೇಳಿದ ಕೃಷ್ಣನು ಕುಂತಿಯು ಪಡೆದ 5 ಮಂತ್ರಗಳಲ್ಲಿ ಮೊದಲಿಗ ನೀನು ನಿನ್ನಯ ನಂತರ ಧರ್ಮರಾಯ,ಕಲಿಭೀಮ, ಅರ್ಜುನರು ಜನಿಸಿದರು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು.ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು.ನಿನಗೆ ಎರಡು ವಂಶವು ಮರು ಮಾತನಾಡದೆ ಸೇವೆಯನ್ನು ಮಾಡವರು.ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ? ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ ಮಾಗಧ ಯಾದವಾದಿಗಳು , ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆಯುವುದು ಸರಿಯೇ ? ದುರ್ಯೋಧನನು ಹೇಳಿದ ಮಾತಿಗೆ ಅನುಗ್ರಹವಿರಲಿ ಎಂಬುದು ನಿನಗೆ ಕಷ್ಟ ಆಗುವುದಿಲ್ಲವೇ? ಎಂದು ಆಮಿಷ ಒಡ್ಡಿದನು.

5.ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕರ್ಣನು ದುಃಖಗೊಂಡು ಮನದೊಳಗೆ " ಅಯ್ಯೋ ದುರ್ಯೋಧನನಿಗೆ ಕೇಡಾದುದು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ; ಸುಮ್ಮನೆ ಹೋಗುವುದೇ " ಎಂದುಕೊಂಡನು. ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ. ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ, ವೀರ ದುರ್ಯೋಧನನೇ ಒಡೆಯನು ,ಆತಗ ಹಗೆಯೇ ಹಗೆ, ಆತನ ಅಭಿಮಾನವೇ ಅಭಿಮಾನವು, ,ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ". ಎಂದನು." ಕೃಷ್ಣ ಕೇಳು ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವರಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಂದು ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು ಎಂದನು

6. ಕರ್ಣನ ನಿರ್ಧಾರ ಸರಿ ಎನ್ನುವಿರಾ?

ಕೃಷ್ಣನು ಕರ್ಣನ ಜನ್ಮ ರಹಸ್ಯವನ್ನು ತಿಳಿಸಿ ಆತನನ್ನು ಸಕಲ ಸಾಮ್ರಾಜ್ಯಕ್ಕೆ ಚಕ್ರವರ್ತಿ ಯನ್ನಾಗಿ ಮಾಡುವುದಾಗಿ ತಿಳಿಸುತ್ತಾನೆ ಸೂರ್ಯನ ಅನುಗ್ರಹದಿಂದ ಜನಿಸಿದ ಕರ್ಣನನ್ನು ಮಗುವಾಗಿದ್ದಾಗ ಕುಂತಿಯು ನೀರಿನಲ್ಲಿ ತೇಲಿ ಬಿಟ್ಟಿದ್ದರಿಂದ ಅಂಬಿಗರ ಮನೆಯಲ್ಲಿ ಮಾತೃವಾತ್ಸಲ್ಯದಿಂದ ಸುಪುತ್ರನಾಗಿ ಬೆಳೆಯಬೇಕಾಯಿತು ಸೂತಪುತ್ರನೆಂದು ಸಮಾಜದಲ್ಲಿ ಆತನ ಶಕ್ತಿ ಸಾಮರ್ಥ್ಯಕ್ಕೆ ಸೂಕ್ತವಾದ ಸ್ಥಾನಮಾನ ದೊರೆಯಲಿಲ್ಲ ಅಂತಹ ಸಂದರ್ಭದಲ್ಲಿ ದುರ್ಯೋಧನ ಕರ್ಣನನ್ನು ಗೆಳೆಯನೆಂದು ಸ್ವೀಕರಿಸಿ ಅಂಗರಾಜ್ಯದ ಅಧಿಪತಿಯಾಗಿರುತ್ತಾನೆ ಆತನಿಗೆ ಒಂದು ಸ್ಥಾನ ಗೌರವಗಳನ್ನು ದೊರಕಿಸಿಕೊಡುತ್ತಾನೆ ಈ ಕಾರಣಗಳಿಂದ ಕರ್ಣ ದುರ್ಯೋಧನ ಹಗೆಗಳು ನನಗೆ ಅಭಿಮಾನ ಅಭಿಮಾನಿ ಹರಿಸುತ್ತೇನೆ ಪರಾಕ್ರಮದ ಕಲೆಯನ್ನು ತೋರಿಸುತ್ತೇನೆ ಎನ್ನುವುದು ಕರ್ಣನ ಜಾಯಮಾನಕ್ಕೆ ಸರಿಯಾಗಿಯೇ ಇದೆ ಗೌರವವನ್ನು ತನಗೆ ಮಾಡಿದ ಉಪಕಾರವನ್ನು ಯುದ್ಧರಂಗದಲ್ಲಿ ತೀರಿಸುತ್ತೇನೆ ತಮ್ಮಂದಿರನ್ನು ನೋಯಿಸದೆ ಸೈನ್ಯವನ್ನು ಮಾರಿಗೌತಣ ವನ್ನಾಗಿ ನೀಡಿ ಅನ್ನದಾತನ ಋಣವನ್ನು ಮುಗಿಸಿ ಶರೀರವನ್ನು ತಿಳಿಸುತ್ತೇನೆ ಎಂಬ ಕರ್ಣನ ಮಾತು ಆತನ ಸ್ವಾಮಿ ಭಕ್ತಿ ಸಾಕ್ಷಿಯಾಗಿದೆ ಸ್ಥಾನ ಗೌರವ ಹಾಗೂ ಕೀರ್ತಿ ದೊರಕಿಸಿಕೊಟ್ಟ ಒಡೆಯನಿಗೆ ತನ್ನ ಪ್ರಾಣವನ್ನು ಸಮರ್ಪಿಸುವುದು ಧರ್ಮವೇ ಆಗಿದೆ ಎಂಬ ಕರ್ಣ ನಿರ್ಧಾರ ಚೆನ್ನಾಗಿದೆ ಸರಿಯಾಗಿದೆ.

5.ಹಸುರು

7. ಹಸುರು ಕವನದ ರೀತಿಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ

ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರಿನಿಂದ ಕವಿಗೆ ಆಗಸವು ಹಾಗೂ ಆಗಸದಲ್ಲಿನ ಮುಗಿಲ ಬಣ್ಣವು ಹಸುರಾಗಿ ಕಾಣುತ್ತದೆ.ಗದ್ದೆಯ ಬಯಲಿನಲ್ಲಿಸೊಂಪಾದ ಬೆಳೆದ ಬತ್ತದ ಪೈರುಗಳು ಹಸುರಾಗಿ ಕಾಣುತ್ತದೆ. ಮಲೆಯಲ್ಲಿ ಹಾಗೂ ಕಣಿವೆಯಲ್ಲಿ ದಟ್ಟವಾಗಿ ಬೆಳೆದ ಗಿಡಮರಗಳು ಹಸುರಾಗಿ ಕಾಣುತ್ತದೆ. ಪ್ರಕೃತಿಯೇ ಹಚ್ಚ ಹಸುರಿನಿಂದ ಕೂಡಿರುವುದರಿಂದ ಸಂಜೆಯ ಬಿಸಿಲೂ ಸಹ ಕವಿಗೆ ಹಸುರಾಗಿ ಕಾಣುತ್ತದೆ. ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನಿಂದ ಕವಿಗೆ ಸಕಲೇಂದ್ರಿಯಗಳಲ್ಲೂ ಹಸುರಿನ ಭಾವ ಕಾಣುತ್ತದೆ.ಪ್ರಕೃತಿಯಲ್ಲಿ ಅರಳಿದ ಹೊಸಹೂವಿನ ಕಂಪನ್ನು ಹಸುರಿನ ಭಾವದಿಂದ ಮೂಗು ಆಘ್ರಾಣಿಸುತ್ತದೆ. ಎಲೆಗಳ ತಂಪು ಮೈಗೆ ಹಸುರು ಸ್ಪರ್ಷದ ಆನಂದವನ್ನು ನೀಡುತ್ತದೆ. ಮರಗಿಡಗಳ ಪೊದರಿನಿಂದ ಬರುವ ಹಕ್ಕಿಯ ಕೊರಲಿನ ಇಂಪು ಕಿವಿಗೆ ಹಸುರಿನ ಆನಂದವನ್ನು ನೀಡುತ್ತದೆ.ಹಸುರು ಇಳೆಯ ಉಸಿರಾಗಿದೆ. ಹೀಗೆ ಹಸುರಿನ ಶಾಂತತೆಯ ಭಾವ ಆನಂದದ ಅನುಭವವನ್ನು ನೀಡುತ್ತದೆ ಹೀಗೆ ಹಸುರು ಎಲ್ಲೆಲ್ಲೂ ವ್ಯಾಪಿಸಿದೆ.

6. ಚಲಮನೆ ಮೆರೆವೆಂ

agnidivya.blogspot.com

8. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ & ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ

ದುರ್ಯೋಧನನು ಭೀಷ್ಮರನ್ನು ಕುರಿತು " ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವಿರೇ? ಚಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳು ಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ಮತ್ತೆ ಹೊಸ ಬಾಳು ಬಾಳುವೆನೇ? ಅಜ್ಜ, ನನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಶಾಸನನನ್ನು ಕೊಂದ ಅರ್ಜುನ ಭೀಮರು ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವ ತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂದಿ ಮಾಡಿಕೊಳ್ಳುವೆನು.ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ? ನನ್ನ ನೂರುಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧಮಾಡಿ ಸತ್ತರು. ಆಗ ನನಗೆ ಕೋಪವು ಹುಟ್ಟಿ ಹೊರಹೊಮ್ಮಿತು. ಸತ್ತವರು ಮತ್ತೆ ಹುಟ್ಟುವುದಿಲ್ಲವೇ ? ಆದ್ದರಿಂದ ಪಾಂಡವರೊಡನೆ ಯುದ್ಧಮಾಡಿ ಚಲವನೆ ಮೆರೆಯುವೆನು. ಅಜ್ಜಾ ನಾನು ಪಾಂಡವರೊಡನೆ ಯುದ್ಧ ಮಾಡದೆ ಇರುವುದಿಲ್ಲ ಇಂದಿನ ಯುದ್ಧದಲ್ಲಿ ಒಂದೋ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭೂಮಿಗೆ ಒಡೆಯನಾಗುವೆನು" ಆದ್ದರಿಂದ ನಾನು ಯುದ್ಧವನ್ನು ಮಾಡುವೆನು ಎಂದು ಹೇಳಿದನು.

## 7. ವೀರಲವ

9. ಲವನು ಯಜ್ಞಾಶ್ವ ವನ್ನು ಕಟ್ಟಲು ಕಾರಣವೇನು?

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು.ರಾಮನ ಆಜ್ಞೆಯಂತೆ . ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯನ್ನೆಲ್ಲಾ ಸಂಚರಿಸುತ್ತಾ ವಾಲ್ಮೀಕಿ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲುಒಳ ಹೊಕ್ಕಿತು. ಆಗ ಇದನ್ನು ಕಂಡ ಲವನು " ಇದು ಯಾವ ಕಡೆಯ ಕುದುರೆಯು ,ಹೊಕ್ಕು ಹೂತೋಟವನ್ನು ನುಗ್ಗು ನುರಿಯಾಗುವಂತೆ ತುಳಿದುದು." ಎಂದು ಕುದುರೆಯ ಕಡೆಗೆ ನಡೆದು ಬಂದು ನೋಡಿದನು. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ " ಭೂಮಂಡಲದೊಳಗೆ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞದ ಕುದುರೆ ಇದನ್ನು ತಡೆಯುವ ಸಾಮರ್ಥ್ಯ ಉಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು. ಇದನ್ನು ಓದಿದ ಲವನು ಕೋಪಗೊಂಡು " ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲಾ ಜನರು ಬಂಜೆ ಎನ್ನದಿರುವರೇ, ನನಗೆ ಇರುವ ತೋಳುಗಳು ಏತಕ್ಕೆ"? ಎಂದು ಪ್ರತಿಜ್ಞೆಯನ್ನು ಕೈಗೊಂಡು ಯಜ್ಞಾಶ್ವವನ್ನು ತನ್ನ ಉತ್ತರದಿಂದ ಕಟ್ಟಿ ಹಾಕಿದನು.

10. ಲವನ ನಡವಳಿಕೆ ಮೆಚ್ಚುಗೆಯಾಯಿತು ಏಕೆ?

ಲವನು ಬಾಲಕನಾಗಿದ್ದ ರೂ ಸ್ವಾಭಿಮಾನಿ ಅವನ ಮಾತುಗಳು ವಿರೋಚಿತ ಅವನ ಮಾತೃಪ್ರೇಮ ಅನನ್ಯ ವಾಲ್ಮೀಕಿ ಮಹರ್ಷಿಗಳು ಆಶ್ರಮದಿಂದ ಹೊರಗೆ ಹೋಗುವಾಗ ಅವನಿಗೆ ಆಶ್ರಮದ ಜವಾಬ್ದಾರಿಯನ್ನು ವಹಿಸಿರುತ್ತಾರೆ ಇಂತಹ ಸಮಯದಲ್ಲಿ ರಾಮನ ಯಜ್ಞಾಶ್ವವು ಆಶ್ರಮವನ್ನು ಪ್ರವೇಶಿಸಿ ತೋಟವನ್ನು ಹಾಳುಮಾಡುತ್ತದೆ. ಇದನ್ನು ಕಂಡು ಅವನು ಕುದುರೆಯ ಬಳಿಬಂದು ಕುದುರೆಯ ಮೇಲೆ ಮೆರೆಯುತ್ತಿದ್ದ ಪಟ್ಟದ ಲಿಖಿತವನ್ನು ಓದಿ, ' ರಾಮನೊಬ್ಬನೇ ಜಗತ್ತಿನ ವೀರ' ಎಂಬ ವಾಕ್ಯವನ್ನು ಕಂಡು ಕೆರಳಿ ,ಇವನ ಗರ್ವವನ್ನು ಬಿಡಿಸುತ್ತೇನೆ,ಇಲ್ಲದಿದ್ದರೆ ನನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ದೂರಿಬಿಡುತ್ತಾರೆ. ಎಂದು ಚಿಂತಿಸಿ, ತನ್ನ ತೋಳ್ಬಲ ವನ್ನು ತೋರಿಸಿ ಬಿಡುತ್ತೇನೆ ಎಂದು ಕುದುರೆಯನ್ನು ಕಟ್ಟಿ ಹಾಕುತ್ತಾನೆ. ಋಷಿಮುನಿಗಳ ಮಕ್ಕಳು ಹೆದರಿಕೆಯಿಂದ ಬೇಡವೆಂದಾಗ "ಬ್ರಾಹ್ಮಣರ ಮಕ್ಕಳು ಯುದ್ಧಕ್ಕೆ ಹೆದರಿದರೆ; ಜಾನಕಿಯ ಸುತನು ಹೆದರುವನೇ? ಎಂದು ವೀರನಂತೆ ಬಿಲ್ಲಿನ ಹೆದೆಯೇರಿಸಿ ಠೇಂಕಾರವನ್ನು ಮಾಡಿ ನಿಂತನು. ಇಂತಹ ವೀರಬಾಲಕ ಶೌರ್ಯ ತಾಯಿಯ ಮೇಲಿನ ಮಮತೆ, ದುರಹಂಕಾರವನ್ನು ಮೆಟ್ಟುವ ಸಾಹಸ ಎಂಥವರಿಗೂ ಮೆಚ್ಚಿಗೆಯಾಗುತ್ತದೆ.

## 8.ಕೆಮ್ಮನೆಮೀಸೆಹೊತ್ತೇನೆ

11. ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

ದ್ರೋಣನು ತನ್ನ ಗೆಳೆಯನಾದ ದ್ರುಪದನು ಛತ್ರಾವತಿಯಲ್ಲಿ ರಾಜನಾಗಿದ್ದಾನೆಂದು ತಿಳಿದು, ದ್ರುಪದನ ಅರಮನೆಯ ಬಾಗಿಲಿನಲ್ಲಿ ಬಂದು ನಿಂತಾಗ ದ್ರುಪದನು ದ್ವಾರಪಾಲಕ ನೊಡನೆ " ಏನು ದ್ರೋಣ ಎಂಬುವವನು ಬ್ರಾಹ್ಮಣನೇ? ಜಗೆ ಹೇಗೆಗೆಳೆಯನು ? ಅಂತವನನ್ನು ನಾನು ತಿಳಿಯೆನು. ಅವನನ್ನುಹೊರಗೆ ತಳ್ಳು" ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ದ್ರೋಣನು ಬಲತ್ಕಾರದಿಂದ ಒಳಗೆ ಪ್ರವೇಶಿಸಿ ದ್ರುಪದನನ್ನು ನೋಡಿ, " ಅಣ್ಣಾ ನೀವು ನಾವು ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ"? ಎನ್ನುತ್ತಾನೆ. ಆಗ ದ್ರುಪದನು " ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದೀಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟ ವರಾಗುತ್ತಾರೆ"? ಎನ್ನುತ್ತಾನೆ ಈ ಮರ್ಮ ಭೇದಕ ಮಾತುಗಳು ದ್ರೋಣನಿಗೆ



agnidivya.blogspot.com

ತೀವ್ರವಾದ ನಾಚಿಕೆಯನ್ನು ಉಂಟುಮಾಡುತ್ತದೆ. ಆಗ ದ್ರೋಣನುಎಲೈ ನೀಚನೇ ' ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು ' ಎಂಬ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ನಾನು ಕೊಲ್ಲಲಾರೆನು.ಈ ಸಭಾ ಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಬಂಧಿಸದೇ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ"? ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

ಗದ್ಯ ಭಾಗದ 4 ಅಂಕದ ಪ್ರ ಶ್ನೋತ್ತರಗಳು

**1. ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯರ ನೀವು ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ**

ರಾಹಿಲನು ಮುದುಕಿ ಮನೆಗೆ ಬಂದ ಸಂದರ್ಭದಲ್ಲಿ ಮುದುಕಿಯ ಸೊಸೆಯು ಸಂಜೆಯಿಂದಲೇ ಹೆರಿಗೆ ನೋವಿನಿಂದ ನರಳುತ್ತಿದ್ದಳು. ಡಾಕ್ಟರ್ ಅಥವಾ ಸೂಲಗಿತ್ತಿ ಯನ್ನು ಕರೆಸಲು ರಾತ್ರಿಯ ಸಮಯ ಹಾಗೂ ಯುದ್ಧದ ಬ್ಲಾಕ್ಔಟ್ ನಿಯಮದಿಂದಾಗಿ ಎಲ್ಲೂ ಹೊರಗೆ ಹೋಗುವಂತೆ ಇರಲಿಲ್ಲ. ಅಂತಹ ಸಮಯದಲ್ಲಿ ಡಾಕ್ಟರ್ ಆಗಿದ್ದ ರಾಹಿಲನು ಮುದುಕಿಯ ಸೊಸೆಯನ್ನು ಪರೀಕ್ಷೆ ಮಾಡಿದನು. ಆಕೆಗೆ ಸುಲಭವಾಗಿ ಹೆರಿಗೆ ಆಗುವುದಿಲ್ಲ ಎಂದು ಅವನಿಗೆ ತಿಳಿಯಿತು. ತಕ್ಷಣ ಅವನು ಬಹಳ ಹೊತ್ತಿನ ಪ್ರಯತ್ನದ ನಂತರ ಮಗುವನ್ನು ಹೊರತೆಗೆದು ಸೊಸೆಯ ಪ್ರಾಣವನ್ನು ಉಳಿಸಿದನು ಮಗು ನಿರ್ಜೀವವಾಗಿತ್ತು. ಇದೆ ಸಮಯಕ್ಕೆ ಮುದುಕಿಗೆ ರಾಹಿಲನು ಶತ್ರು ದೇಶದ ಸೈನಿಕ ಎಂದು ತಿಳಿಯುತ್ತದೆ. ಅವನನ್ನು ಹಿಡಿಯಲು ಬಂದ ತನ್ನ ದೇಶದ ಸೈನಿಕರು ಬಾಗಿಲು ಬಡಿದಾಗ ಅವನನ್ನು ರಕ್ಷಿಸಲು ಸೊಸೆಯು ಮಲಗಿದ್ದ ಕೋಣೆಯ ಮಂಚದಡಿಗೆ ಕಳುಹಿಸಿ ಬಟ್ಟೆ ಸುತ್ತಿದ ನಿರ್ಜೀವ ಶಿಶುವನ್ನು ಬಾಗಿಲ ಬಳಿ ಮಲಗಿಸಿ ಬಂದು ಬಾಗಿಲು ತೆರೆದರು ಕೋಣೆಯಲ್ಲಿ ಹರಡಿದ್ದ ನೆತ್ತರಿನ ವಾಸನೆಯನ್ನು ಗಮನಿಸಿ ಇಲ್ಲಿ ಯಾರೂ ಇಲ್ಲವೆಂದು ಭಾವಿಸಿ ಹೊರಟುಹೋದರು ಅನಂತರ ಮುದುಕಿಯು ರಾಹುಲನಿಗೆ ತನ್ನ ಮನೆಯಲ್ಲಿಯೇ ಆಶ್ರಯವನ್ನು ನೀಡಿದಳು. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹುಲನಿಗೆ ಪರಸ್ಪರ ಸಹಾಯವನ್ನು ಮಾಡಿದರು

**1. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ**

**2. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?**

ಶಬರಿ ಮಾತಂಗ ಮುನಿಗಳ ಆಶ್ರ ಮದಲ್ಲಿರುತ್ತಾಳೆ.ಮಾತಂಗ ಮುನಿಗಳು ಶಬರಿಗೆ * " ರಾಮ ಲಕ್ಷ್ಮಣರು ಆಶ್ರ ಮಕ್ಕೆ ಬಂದೇ ಬರುತ್ತಾರೆ. ನಿನ್ನ ಇಷ್ಟಾರ್ಥ ನೆರವೇರುತ್ತದೆ ಎಂದು ಹೇಳಿದ್ದರು. * ಅಂದಿನಿಂದ ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಹಣ್ಣುಗಳನ್ನು, ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಹೂವುಗಳನ್ನು ಸಂಗ್ರ ಹಿಸಿ ಸಿದ್ಧಮಾಡಿಕೊಂಡಿದ್ದಳು. * ಮುನಿಗಳ ಮಾತಿನಂತೆ ರಾಮ ಲಕ್ಷ್ಮಣರು ಆಶ್ರ ಮಕ್ಕೆ ಬೇಟಿ ನೀಡುತ್ತಾರೆ. * ಆಗ ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. * ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು.
*"ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ್ತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.
* ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ "ನಾವು ನಿನ್ನ ಪ್ರಿ ೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. * ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. * ನಾವು ನಿನಗೆ ಎಂದೆಂದಿಗೂ ಋಣಿಗಳು" ಎಂದು ಹೇಳಿದರು. * ಹೀಗೆ ಶಬರಿಯ ಚಿಂತೆ ಹಿಂಗಿ ಹೋಯಿತು ಜೊತೆಗೆ ಗುರುಗಳ ಮಾತು ( ನಂಬಿ ಕೆಟ್ಟವರಿಲ್ಲ ) ನಿಜವಾಯಿತು.

**3. ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ**

* ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಜಾರಿಗೊಳಿಸಿದರು.
* ಕಚೇರಿಯ ಕೆಲಸ ಕಾರ್ಯಗಳಲ್ಲಿ ಹಾಗೂ ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾ ಮಾಣಿಕತೆಗೆ ಒತ್ತು ನೀಡಿದರು. * ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರಿ ೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರ ತ್ಯೇಕಗೊಳಿಸಿದರು. * ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು * ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು *
ತಾಂತ್ರಿ ಕ ವೃತ್ತಿಪರ ಶಿಕ್ಷಣಕ್ಕೆ ಮತ್ತು ಕೈಗಾರಿಕೆಗಳಿಗೆ ಪ್ರೊ ೀತ್ಸಾಹ ನೀಡಿದರು
* ಭಾಷೆ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೊ ೀತ್ಸಾಹ ನೀಡಿದರು
* ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

**4. ಶಾನುಭೋಗರನ್ನು ರಕ್ಷಿಸಿದ್ದು ಖಿರ್ಧಿಪುಸ್ತಕವೇ ಹುಲಿಯ ಧರ್ಮವೇ ಸಮರ್ಥನೆಯೊಂದಿಗೆ ವಿವರಿಸಿ**

ಶಾನುಭೋಗರು ಖಿರ್ದಿ ಪುಸ್ತಕ ಹುಲಿಗೆ ಎಸೆದು ಓಡುವಾಗ ಎಡವಿ ಬಿದ್ದು ಮೂರ್ಛೆ ಹೋದರು ಮೂರ್ಛೆ ಯಿಂದ ಎದ್ದಾಗ ಅವರ ಸುತ್ತ ನಾಲ್ಕೈದು ಜನ ರೈತರು ಇದ್ದರು ಅವರು ನೀರು ಚಿಮುಕಿಸಿ ಅವರ ನ್ನು ಎಚ್ಚರಿಸಿದರು. ಮನೆಗೆ ಬಂದ ಶಾನುಭೋಗರು ಪುಸ್ತಕವನ್ನು ಜೋಪಾನವಾಗಿ ತೊ ಲೆಯ ಮೇಲೆ ಶಾನುಭೋಗರು ಪುಸ್ತಕವನ್ನು ಅನಂತ ವಾತ್ಸಲ್ಯದಿಂದ ಕೃತಜ್ಞತೆಯಿಂದ ನೋಡಿದರು ತನ್ನ ಪ್ರಾಣವನ್ನು ಖಿರ್ದಿ ಪುಸ್ತಕವೇ ಉಳಿಸಿತು ಎಂಬ ಕೃತಜ್ಞತೆ ಯಿಂದ ನೋಡಿದರು ತನ್ನ ಪ್ರಾಣವನ್ನು ಖಿರ್ದಿ ಪುಸ್ತಕವೇ ಉಳಿಸಿತು ಎಂಬ ಕ್ರುತಜ್ಞತೆ ಶಾನುಬೋಗರಲ್ಲಿ ಇದೆ. ಹುಲಿಯಿಂದ ತಪ್ಪಿಸಿಕೊಳ್ಳಲು ಖಿರ್ದಿ ಪುಸ್ತಕ ಆಕ್ಷಣಕ್ಕೆ ಒಂದು ಸಾಧನವಾದರೂ ಅವರು ಎಡವಿ ಬಿದ್ದಾಗ ಬೆನ್ನುಮೇಲಾಗಿ ಬಿದ್ದು ಮೂರ್ಛೆ ಹೋಗಿರುತ್ತಾರೆ ಹುಲಿಯ ಧರ್ಮಶ್ರದ್ಧೆ ಬೆನ್ನ ಕಡೆಯಿಂದ ಬೇಟೆಯಾಡುವುದಿಲ್ಲ ಆದ್ದರಿಂದ ಅದು ಶಾನುಭೋಗರನ್ನು ಕೊಲ್ಲದೆ ಬಿಟ್ಟಿದೆ ಖಿರ್ದಿ ಪುಸ್ತಕಕ್ಕಿಂತ ಹುಲಿಯ ಧರ್ಮಶ್ರದ್ಧೆಯೇ ಶಾನುಭೋಗರ ಪ್ರಾಣ ಉಳಿಯಲು ಕಾರಣವೆಂಬುದು ಲೇಖಕರ ಅಭಿಪ್ರಾಯವಾಗಿದೆ

**5. ಧರ್ಮ ಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನುತಿಳಿಸಿ**

ದುಷ್ಟಬುದ್ಧಿಯು ಧರ್ಮಬುದ್ಧಿ ಯೊಡನೆ ಸೇರಿ ವ್ಯಾಪಾರ ಮಾಡಿ ಲಾಭ ಗಳಿಸಿದ್ದ ಚಿನ್ನದ ನಾಣ್ಯಗಳನ್ನು ತಾನೇ ದೋಚಿ ಕಳ್ಳತನವನ್ನು ಧರ್ಮ ಬುದ್ಧಿಯ ಮೇಲೆ ಹೊರಿಸಿ ಇದಕ್ಕೆ ವೃಕ್ಷವೇ ಸಾಕ್ಷಿ ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ ಮರದಿಂದ ಸಾಕ್ಷಿ ಹೇಳಿಸಲು ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ ಅವನಿಂದ ಧರ್ಮಬುದ್ಧಿ ಚಿನ್ನದ ನಾಣ್ಯಗಳನ್ನು ಕದ್ದನೆಂದು ಸುಳ್ಳನ್ನು ಬಲವಂತದಿಂದ ಹೇಳಿಸುತ್ತಾನೆ ಆಗ ದರ್ಮಬುದ್ಧಿ ಇಲ್ಲೇನೋ ಮೋಸವಿದೆ ಎಂದು ಅನುಮಾನಗೊಂಡುಮರದ ಬಳಿ ಪರೀಕ್ಷಿಸಿ ಪೊಟರೆಯ ಒಳಗೆ ಮನುಷ್ಯ ಸಂಚಾರ ವಾಗಿರುವುದನ್ನು ಕಂಡುಕೊಳ್ಳುತ್ತಾನೆ ಧರ್ಮಾಧಿಕಾರಿಗಳಿಗೆ ವ್ಯಾಪಾರಿ ಮನೋಭಾದಂತೆ ಸುಳ್ಳು ಹೇಳಿದ್ದಾಗಿ ಚಿನ್ನದ ನಾಣ್ಯಗಳನ್ನು ತಾನೇ ತೆಗೆದುಕೊಂಡಿದ್ದಾಗಿ ತಿಳಿಸಿ ಈಗ ಆ ಚಿನ್ನದ ನಾಣ್ಯಗಳಿಗೆ ಹಾವು ಕೊಂಡಿದೆ ಎಂದು ಹೇಳಿ ಚಿನ್ನದ ನಾಣ್ಯಗಳನ್ನು ತೆಗೆಯಲು ಮರದ ಪೊಟರೆ ಹುಲ್ಲುಕಡ್ಡಿಯಿಟ್ಟು ಬೆಂಕಿ

ಇಡುತ್ತಾನೆ.ಪೊಟರೆಗೆ ಹೊಗೆತುಂಬಿ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಉಸಿರುಕಟ್ಟಿ ಕೂಗಾಡುತ್ತ ಪೊಟರೆಯಿಂದ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದಗಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ.ಹೀಗೆದುಷ್ಟಬುಧ್ಧಿಯತಂತ್ರ ಅವನಿಗೆ ತಿರುಗು ಬಾಣವಾಯಿತು.

6. ಸುಕುಮಾರ ಎಂಬ ಹೆಸರು ಸುಕುಮಾರಸ್ವಾಮಿ ಗೆ ಹೇಗೆ ಅನ್ವೋ ಅರ್ಥವಾಗುತ್ತದೆ ವಿವರಿಸಿ

ಸುಕುಮಾರ ಎಂಬುದಕ್ಕೆ ಕೋಮಲವಾದ ಶರೀರ ಉಳ್ಳವನು ಒಳ್ಳೆಯ ಮಗ ಸದಾ ಸುಖಭೋಗಗಳನ್ನು ಅನುಭವಿಸುವವನು ಎಂಬ ಅನ್ವರ್ಥ ಗಳು ಇವೆ ಈ ಕಥೆಯ ನಾಯಕನಾದ ಸುಕುಮಾರಸ್ವಾಮಿಯೂ ಸಹ ಈ ಅನ್ವರ್ಥನಾಮ ಗಳಿಗೆ ಪೂರಕವಾದ ಜೀವನವನ್ನು ನಡೆಸಿದವನು. ಇವನು ತಂದೆತಾಯಿಗಳಿಗೆ ಒಳ್ಳೆಯವನಾಗಿದ್ದ ಇವನ ಸುಖಭೋಗಗಳು ಹೇಗಿತ್ತು ಎಂದರೆ ಇವನು 32 ಸ್ತ್ರೀಯರೊಡನೆ 32 ಕೋಟಿ ಚಿನ್ನದ ನಾಣ್ಯಗಳು ಪಂಚರತ್ನಗಳೊಡನೆ ಸುಖಜೀವನವನ್ನು ನಡೆಸುತ್ತಿದ್ದನು ಇವರ ತಾಯಿ ಲಕ್ಷ ದಿನಾರಗಳನ್ನು ಕೊಟ್ಟು ರತ್ನಗಂಬಳಿಗಳನ್ನು ಕೊಂಡು 32 ಜನ ಸೊಸೆಯಂದಿರಿಗ ಕೊಟ್ಟರೆ ಅದನ್ನು ಅವರು ತಮ್ಮ ಪಾದರಕ್ಷೆಗಳಿಗೆ ಹಾಕಿಕೊಂಡರು ಈ ಸುದ್ದಿಯನ್ನು ಕೇಳಿದ ಉಜ್ಜಯಿನಿ ಅರಸ ವೃಷಭಾಂಕನು ಇವನ ವೈಭವವನ್ನು ನೋಡಲು ಅವನ ಮನೆಗೆ ಬಂದನು. ಇವನ ಶರೀರ ಎಷ್ಟು ಕೋಮಲವಾಗಿತ್ತು ಎಂದರೆ ಅರಸನು ಬಂದಾಗ ಹಾಕಿದ ಮಂತ್ರಾಕ್ಷತೆಯ ಬಿಳಿಯ ಸಾಸುವೆಯ ಕಾಳು ಮೈಯಿಗೆ ಒತ್ತಲು ನೋವನ್ನು ಸಹಿಸಲಾರದೆ ಸೊಂಟವನ್ನು ಅಲುಗಾಡಿಸುತ್ತಿದ್ದನು ಮಾಣಿಕ್ಯದ ಬೆಳಕಿನಲ್ಲಿ ಇದ್ದ ಇವನು ದೀಪದ ಬೆಳಕನ್ನು ಕಂಡು ಕಣ್ಣೀರು ಸುರಿಸುತ್ತಿದ್ದನು ಇವನ ಸ್ನಾನದ ಮನೆಯಲ್ಲಿ ಮುತ್ತುರತ್ನಗಳ ಆಭರಣಗಳಭಂಡಾರವೇ ನೀರು ಹೋಗುವ ರಂಧ್ರದಲ್ಲಿ ಬಿದ್ದಿದ್ದವು. ಇವನು ಊಟಮಾಡುವಾಗ ಸುವಾಸಿತ ಅಕ್ಕಿಯ ಅನ್ನವನ್ನು ಮಾತ್ರನುಂಗಿ ಬೇರೆ ಅಕ್ಕಿಯ ಅನ್ನವನ್ನು ಉಗುಳುತ್ತಿದ್ದನು. ಇವುಗಳನ್ನು ಕಂಡು ಬೆರಗಾದ ಅರಸನು ಸುಕುಮಾರಸ್ವಾಮಿಯ ಕ್ಷಣಮಾತ್ರದ ಸುಖಭೋಗಗಳಿಗೆ ನಮ್ಮ ಎಲ್ಲಾ ಕಾಲದ ಸುಖಭೋಗಗಳು ಸಮವಲ್ಲ ಎಂದು ಹೇಳಿ ಅವನಿಗೆ ಆವಂತಿ ಸುಕುಮಾರ ಎಂದು ಹೆಸರಿಟ್ಟನು.

**7. ಬುದ್ಧನ ಕಾರುಣ್ಯ ದೇವನೂರು ಮಹದೇವ ಅವರ ಮನದೊಳಗೆ ಕೂತ ಬಗೆಯನ್ನು ಉದಾಹರಣೆಯೊಂದಿಗೆ ವಿವರಿಸಿ**

ಬುದ್ಧ ಬುದ್ಧನ ಕಾರುಣ್ಯ ತನ್ನ ಮನದೊಳಗೆ ಕೂತ ಬಗೆಯನ್ನು ದೇವನೂರು ಮಹದೇವ ಅವರು ಒಂದು ಉದಾಹರಣೆಯೊಂದಿಗೆ ವಿವರಿಸುತ್ತಾರೆ ಒಮ್ಮೆ ಡಾಕ್ಟರ್ ಅಶೋಕ್ ಪೈ ಮನೋವೈದ್ಯರು ಮೈಸೂರಿಗೆ ಬಂದಾಗ ಮನಸ್ಸಿನ ಬಗ್ಗೆ ನಡೆಸಿದ ಒಂದು ಸಂಶೋಧನಾ ಸತ್ಯವನ್ನು ಹೇಳಿದರು ಅದೇನೆಂದರೆ ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಜನ್ ನೋಡುತ್ತಿದ್ದಾರೆ ಎಂದಿಟ್ಟುಕೊಳ್ಳೋಣ ಇನ್ನೊಂದಿಷ್ಟು ಜನ ಅದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆಯಾಡುತ್ತ ತಮ್ಮಷ್ಟಕ್ಕೆ ತಾವು ತಾವಿರುವರು ಎಂದಿಟ್ಟುಕೊಳ್ಳೋಣ ಆಗ ಟೆಲಿವಿಷನ್ ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡ ಗೊಳ್ಳುತ್ತದಂತೆ ಅದೇ ಟೆಲಿವಿಷನ್ ನಲ್ಲಿ ಯಾವುದಾದರೂ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿಯ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಮಾಡಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದಂತೆ ಈ ನಿಜ ಏನು ಹೇಳುತ್ತದೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಹೇಳುತ್ತದೆ. ಯಾವುದೋ ಒಂದು ಜೀವಿಗೆ ಆಗುವ ದುಃಖ–ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆ ಈ ಅನುಕಂಪನ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ. ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿದೆ ಎಂದು ತಿಳಿಸುತ್ತಾರೆ

**8. ಕವಿ ಸಿದ್ದಲಿಂಗಯ್ಯ ಹೇಳಿದ ಕಥೆಯನ್ನು ಬರೆಯಿರಿ**

ಒಂದ್ಸಲ ಒಂದು ಗ್ರಾಮದ ಜನರೆಲ್ಲ ಸೇರಿ ತಮ್ಮ ದೇವತೆಗೆ ಗುಡಿ ಕಟ್ಟಲು ಆರಂಭಿಸುತ್ತಾರೆ ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಬಂದಾಗ ಒಬ್ಬನ ಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು ನಿಲ್ಸಿ ನನ್ನ ಮಕ್ಕಳ ಎಂದು ಅಬ್ಬರ ಮಾಡುತ್ತಾಳೆ ಅಬ್ಬರಕ್ಕೆ ಜನ ತಮ್ಮ ಕೆಲಸ ನಿಲ್ಲಿಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲುಆಗ ದೇವತೆ ಹಾಗೂ ಜನರ ನಡುವೆ ಮಾತುಕತೆ ನಡೆಯುತ್ತದೆ ಏನ್ ಮಾಡ್ತಾ ಇದ್ದೀರಿ ಎಂದು ಗ್ರಾಮ ದೇವತೆ ಕೇಳುವಳು ಅದಕ್ಕೆ ಗ್ರಾಮಸ್ಥರು ನಿನಗೊಂದು ಗುಡಿ ಮನೆ ಕಟ್ತಾ ಇದೀವಿ ತಾಯಿ ಎನ್ನುವರು ಆಗ ತಾಯಿ ನನಗೆ ಗುಡಿ ಮನೆ ಕಟ್ತಾ ಇದ್ದೀರಾ ಹಾಗಾದರೆ ನಿಮಗೆಲ್ಲ ಮನೆ ಉಂಟಾ ಮಕ್ಕಳ ಎಂದು ಕೇಳುತ್ತಾಳೆ ಆಗ ಅವರಲ್ಲಿ ಒಬ್ಬ ನನಗಿಲ್ಲ ಎಂದು ಹೇಳುತ್ತಾನೆ ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎಂದು ಹೇಳುತ್ತಾಳೆ. ಹೀಗೆ ಮಂಚಮ್ಮ ದೇವಿ ಮನೆಮಂಚಮ್ಮ ಆಗುತ್ತಾಳೆ.

ಚಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆ ಮಂಚಮ್ಮ ಇಂದಿಗೂ ಪೂಜಿತಳಾಗುತ್ತಿದ್ದಾಳೆ.ಈ ರೀತಿ ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ ಎಂಬುದನ್ನು ಮಹದೇವ ಅವರು ಹೇಳುತ್ತಾರೆ ಈ ಕಥೆಯನ್ನು ಸಿದ್ದಲಿಂಗಯ್ಯನವರು ದೇವನೂರು ಮಹದೇವ ಅವರಿಗೆ ಹೇಳಿದರು

ಅಪಠಿತ ಗದ್ಯ ಪಠ್ಯಪುಸ್ತಕದಲ್ಲಿ ಇರದ ವಿಷಯ ನೀಡಿ 2 ಅಂಕದ 2 ಪ್ರ ಶ್ನೆಗಳನು ಕೇಳಲಾಗುತ್ತದೆ. 2*2=4

ಭಾಗ–2 ವ್ಯಾಕರಣ

ವಸ್ತುನಿಷ್ಟ–06, ಸಂಬಂಧೀಕರಿಸಿ–4 = 10

ಅಲಂಕಾರ–3,ಛಂದಸ್ಸು–3=06 ಒಟ್ಟು= 16 ಅಂಕಗಳು

ವ್ಯಾಕರಣ 1 ಅಂಕದ ಪ್ರ ಶ್ನೆಗಳು 6+4=10

**1. ಕನ್ನಡ ವರ್ಣಮಾಲೆ**

**ಸ್ವರಗಳು(13)**

**ಹ್ರಸ್ವಸ್ವರ: 06 ಅ,ಇ,ಉ,ಋ,ಎ,ಒ**

**ಧೀರ್ಘಸ್ವರ 07 ಆ,ಈ,ಊ,ಏ,ಐ,ಓ,ಔ**

**ವ್ಯಂಜನಗಳು (34)**

**ವರ್ಗೀಯ (25)**

**ಅಲ್ಪಪ್ರಾಣ(10) ಕ್,ಚ್,ಟ್,ತ್,ಪ್, ಗ್,ಜ್,ಡ್,ದ್,ಬ್,**

**ಮಹಾಪ್ರಾಣ(10)ಖ್,ಛ್,ಠ್,ಥ್,ಫ್,ಘ್,ಝ್,ಢ್,ಧ್,ಭ್**

**ಅನುನಾಸಿಕ: (05)ಙ್,ಞ್,ಣ್,ನ್,ಮ್**



agnidivya.blogspot.com

**ಅವರ್ಗೀಯ ವ್ಯಂಜನಗಳು (9) ಯ್,ರ್,ಲ್,ವ,ಶ,ಷ್,ಸ,ಹ್,ಳ್ ಯೋಗವಾಹಗಳು(02) ಅನುಸ್ವಾರ(0) ವಿಸರ್ಗ(ಃ)**

**ಸಜಾತಿಯ ಸಂಯುಕ್ತಾಕ್ಷರ: ಅಪ್ಪ,ಅಕ್ಕ,ಅಜ್ಜ,ಕಜ್ಜ,ಹಣ್ಣು,ಮೆಚ್ಚು ವಿಜಾತಿಯ ಸಂಯುಕ್ತಾಕ್ಷರ: ಉಷ್ಣ,ಅಸ್ತ್ರ,ಅಕ್ಷರ,ಪುತ್ರ,ಸದ್ಗುಣ,ಮೃದು**

## 2. ನಾಮಪದ

**ರೂಢನಾಮಗಳು**
ನದಿ ಪರ್ವತ ಊರು ದೇಶ ಮನುಷ್ಯ
**ಅಂಕಿತನಾಮಗಳು**
ಸಹದೇವ ಧರ್ಮರಾಯ ರಾಹುಲ ಕಮಲಾಕ್ಷ
**ಅನ್ವರ್ಥನಾಮಗಳು**
ವ್ಯಾಪಾರಿ ವಿದ್ವಾಂಸ ವಿಜ್ಞಾನಿ ಪೂಜಾರಿ
**ಗುಣವಾಚಕಗಳು**
ಒಳ್ಳೆಯ ಕೆಟ್ಟದೊಡ್ಡದು ಹಳತು
**ಸಂಖ್ಯಾವಾಚಕಗಳು**
ಹನ್ನೆರಡು ಐವತ್ತು ಎಂಬತ್ತು
**ಸಂಖ್ಯೇಯವಾಚಕಗಳು**
ಮೂವರು ಹನ್ನೆರಡನೆಯ ಎಂಬತ್ತನೆಯ ನಾಲ್ವರು
**ಭಾವನಾಮಗಳು**
ಕೆಂಪು ಹಿರಿಮೆ ನೋಟ ಮಾಟಆಟ
**ಪರಿಮಾಣವಾಚಕಗಳು**
ಅಷ್ಟು ಎಷ್ಟು ಹಲವು ಇನಿತು ಅನಿತು
**ದಿಗ್ವಾಚಕಗಳು**
ಮೂಡಣ ತೆಂಕಣ ಪಡುವಣ ಈಶಾನ್ಯ ಆಗ್ನೇಯ

## 3. ಸರ್ವನಾಮಗಳು

**ಉತ್ತಮ ಪುರುಷ** ನಾನು ನಾವು
**ಮಧ್ಯಮ ಪುರುಷ** ನೀನು ನೀವು
**ಪ್ರಥಮ ಪುರುಷ** ಅವನು/ಇವನು ಅವಳು/ಇವಳು ಅದು/ಇದು
ಅವರು/ಇವರು ಅವರು/ಇವರು ಅವು/ಇವು
**ಆತ್ಮಾರ್ಥಕ ಸರ್ವನಾಮಗಳು**
ತಾನು ತಾವು ತನ್ನ ತಮ್ಮ
**ಪ್ರಶ್ನಾರ್ಥಕ ಸರ್ವನಾಮಗಳು**
ಯಾರು? ಏನು?ಯಾವುದು?

## 4. ದ್ವಿರುಕ್ತಿಗಳು

ಹೌದುಹೌದು ನಿಲ್ಲುನಿಲ್ಲು ಬಂದೆಬಂದೆ
ದೊಡ್ಡದೊಡ್ಡ. ಹೆಚ್ಚುಹೆಚ್ಚು ಮನೆಮನೆ ಕೇರಿಕೇರಿ
ಊರೂರು ನಿಲ್ಲುನಿಲ್ಲು. ಎಲೇಎಲೇ
ಬನ್ನಿಬನ್ನಿ ಹತ್ತಿರಹತ್ತಿರ ಅಗೋಅಗೋ ಅಬ್ಬಬ್ಬಾ!
ಆಹಾಹಾ ಬೇಡಬೇಡ ಕೊಡುಕೊಡು ನಡೆನಡೆ
ಅಮ್ಮಾಅಮ್ಮಾ ಆಗಲಿಆಗಲಿ ಬೇಗಬೇಗ ನಡೆನಡೆ
ಓಡುಓಡು ಅಯ್ಯೋಅಯ್ಯೋ, ದೇವರೇದೇವರೇ
ನೋಡಿನೋಡಿ ಹಾವುಹಾವು, ಕೆಟ್ಟೆಕೆಟ್ಟೆ,
ಬೆಂಕಿಬೆಂಕಿ. ದುರುಳಾದುರುಳಾ ಸಾಕುಸಾಕು ಈಗೀಗ
ತಿರುತಿರುಗಿ ಒಬ್ಬೊಬ್ಬ ಇರಲಿ ಇರಲಿ
ಇರುಳಿರುಳು

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು.**
ಮೊದಲು + ಮೊದಲು = ಮೊತ್ತಮೊದಲು / ಮೊಟ್ಟಮೊದಲು
ಕಡೆಗೆ + ಕಡೆಗೆ = ಕಟ್ಟಕಡೆಗೆ / ಕಡೆಕಡೆಗೆ
ನಡುವೆ + ನಡುವೆ = ನಟ್ಟನಡುವೆ / ನಡುನಡುವೆ
ಬಯಲು +ಬಯಲು = ಬಟ್ಟಬಯಲು
ತುದಿ + ತುದಿ = ತುತ್ತತುದಿ
ಕೊನೆಗೆ + ಕೊನೆಗೆ = ಕೊನೆಕೊನೆಗೆ
ಮೆಲ್ಲನೆ + ಮೆಲ್ಲನೆ = ಮೆಲ್ಲಮೆಲ್ಲನೆ

## 5. ಜೋಡುನುಡಿಗಳು

ಸತಿಪತಿ ಕೆನೆಮೊಸರು ಹಾಲ್ಜೇನು ಮಕ್ಕಳುಮರಿ
ಹುಳಹುಪ್ಪಡಿ ಸೊಪ್ಪುಸೆದೆ ಬಟ್ಟೆಬರೆ

## 6. ಗ್ರಾ ಂಥಿಕ ರೂಪ

ಹೀಂಗ–ಹೀಗೆ, ಮ್ಯಾಗ–ಮೇಲೆ ಕಳುವ್ಯಾರೆ–ಕಳುಹಿಸಿದ್ದಾರೆ
ಇಲ್ಲದ್ಹಂಗ–ಇಲ್ಲದ ಹಾಗೆ ಇಸವಾಸ–ವಿಶ್ವಾಸ ಸಕ್ಕಾರಿ–ಸಕ್ಕರೆ

## 7. ತತ್ಸಮ ತದ್ಭವಗಳು

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ದೃಷ್ಟಿ | **ದಿಟ್ಟಿ** | ತಪಸ್ವಿ | **ತವಸಿ** |
| ಗ್ರ ಹ | **ಗರ** | ವಿಜ್ಞಾನ | **ಬಿನ್ನಣ** |
| ಮುಖಶಾಲೆ | **ಮೊಗಸಾಲೆ** | ದಾತೃ | **ದಾತಾರ** |
| ವಿಜ್ಞಾಪನೆ | **ಬಿನ್ನಹ / ಬಿನ್ನಪ** | ಸಾಮಂತ | **ಸಾವಂತ** |
| ಸುಧಾ / ಸುಧೆ | **ಸೊದೆ** | ತಟ | **ತಡಿ** |
| ವರ್ಷ | **ವರುಷ / ಬರಿಸ** | ಶ್ರೀ ೀ | **ಸಿರಿ** |
| ರಾಜ | **ರಾಯ** | ಭಕ್ತ | **ಬಕುತ** |
| ದಿಶಾ | **ದೆಸೆ / ದಿಸೆ /** | ಚಂದ್ರ | **ಚಂದಿರ** |
| ವೀರ | **ಬೀರ** | ವಂಶ | **ಬಂಚ** |
| ಸ್ಥಾನ | **ತಾಣ** | ಯಶ | **ಜಸ** |
| ಪಟ್ಟಣ | **ಪತ್ತನ** | ಕಾರ್ಯ | **ಕಜ್ಜ** |
| ವ್ಯಯ | **ಬೀಯ** | ಕೋಕಿಲಾ | **ಕೋಗಿಲೆ** |
| ವ್ಯಾಪಾರಿ | **ಬೇಹಾರಿ** | ಸಂದೇಹ | **ಸಂದೆಯ** |
| ಅಮೃತ | **ಅಮರ್ದು** | ದೀಪಿಕಾ | **ದೀವಿಗೆ** |
| ಪುಣ್ಯ | **ಹೂನ್ಯ** | ಕಣಿ | **ಗಣಿ** |
| ಪಕ್ಷಿ | **ಹಕ್ಕಿ** | ಬ್ರ ಹ್ಮ | **ಬೊಮ್ಮ** |
| ಶಶಿ | **ಸಸಿ** | ಶಿರ | **ಸಿರ** |
| ಕಲಶ | **ಕಲಸ** | ಅಂಕುಶ | **ಅಂಕುಸ** |
| ದ್ಯೂತ | **ಜೂಜು** | ವಂಧ್ಯಾ | **ಬಂಜೆ** |
| ವಿದ್ಯಾಧರ | **ಬಿಜ್ಜೋದರ** | ವೈಶಾಖ | **ಬೇಸಗೆ** |
| ಕುಠಾರ | **ಕೊಡಲಿ** | ಪಾದುಕಾ | **ಹಾವುಗೆ** |
| ಅರ್ಕ | **ಎಕ್ಕ** | ಶುನಕ | **ಸೊಣಗ** |
| ಅಟವಿ | **ಅಡವಿ** | ಪ್ರ ಸಾದ | **ಹಸಾದ** |
| ಯಜ್ಞ | **ಜನ್ನ** | ಕಾವ್ಯ | **ಕಬ್ಬ** |

## 8. ವಿಭಕ್ತಿ ಪ್ರತ್ಯಯಗಳು

**ವಿಭಕ್ತಿಯ ಪ್ರತ್ಯಯ ಹಳಗನ್ನಡದ ಕಾರಕಾರ್ಥ**
**ಪ್ರಥಮಾ ಉ ಮ್ ಕರ್ತ್ರರ್ಥ**
**ದ್ವಿತೀಯಾ ಅನ್ನು ಅಮ್ ಕರ್ಮಾರ್ಥ**
**ತೃತೀಯಾ ಇಂದ ಇಮ್ / ಇಂದಂ / ಇಂದ ಕರಣಾರ್ಥ**
**ಚತುರ್ಥೀ ಗೆ/ಇಗೆ/ಕೆ/ಕ್ಕೆ ಗೆ/ಇಗೆ/ಕೆ/ಕ್ಕೆ ಸಂಪ್ರದಾನ**
**ಪಂಚಮೀ ದೆಸೆಯಿಂದ ಅತ್ತಣಿ ೦ / ಅತ್ತಣಿ ೦ದಂ ಅಪಾದಾನ**
**ಷಷ್ಠೀ ಅ ಅ ಸಂಬಂಧ**
**ಸಪ್ತಮೀ ಅಲ್ಲಿ ಒಳ್ ಅಧಿಕರಣ**

## 9. ಸಂಧಿಗಳು

**ಕನ್ನಡ ಸಂಧಿಗಳು**
**'ಲೋಪ ಸಂಧಿ' (ಸ್ವರ ಸಂಧಿ)**
ಊರೂರು ಬಲ್ಲೆನೆಂದು ಮಾತಂತು

agnidivya.blogspot.com

ಸಂಪನ್ನರಾದಕಾಣಲಾಗದು ತಪ್ಪಲೀಯದೆ
ಬಂದಲ್ಲದೆ ತಕ್ಕನಿತು ಪೊಳ್ದಿಡೆ
ಇರುಳಳಿದು ತೆರೆದಿಕ್ಕುವ ಮನದೊಳಗೆ
ಚರಿಸುತದ್ವರದ ಲೇಖನವನೋದಿ ನಿಂತಿರ್ದನು
ಕಾದಾಟದಾಟ ಆದನೆಂಬ ನೆತ್ತರೊಂದೆ
ತೆಗೆದುತ್ತರೀಯಮಂಬೇಡಬೇಡರಸುಗಳ

**‘ಆಗಮ ಸಂಧಿ’ (ಸ್ವರ ಸಂಧಿ)**

ಕೈಯನ್ನು ಮಳೆಯಿಂದ ಶಾಲೆಯಲ್ಲಿ
ಮರವನ್ನು ಮಗುವಿಗೆ ಭೇದವಿಲ್ಲ
ವೃದ್ಧಿಯಾಗಿ ಭೇದವಾಗಿ ಮನೆಯೊಳಗೆ
ಶವವಾದವು

**‘ಆದೇಶ ಸಂಧಿ’ (ವ್ಯಂಜನ ಸಂಧಿ)**

ಮಳೆಗಾಲ ಮೈದೋರು ಬೆಂಬತ್ತು
ಕೈವಿಡಿದು ಧೃತಿಗೆಟ್ಟು ಪೋಗಲ್ವೇಳ್ಕುಂ
ಹೊಸಗಾಲ

## 10. ಸಂಸ್ಕೃತ ಸಂಧಿಗಳು

**‘ಸವರ್ಣ ದೀರ್ಘ ಸಂಧಿ’ (ಸ್ವರ ಸಂಧಿ)**

ಮಹಾತ್ಮ ಗಿರೀಶಸುರಾಸುರ ವಧೂಪೇತ
ಸಕಳಾಚಾರ್ಯ ಜಿನಾಲಯ ಚಂದ್ರಾ ರ್ಕ ನಿಜಾಶ್ರ ಮ

**‘ಗುಣ ಸಂಧಿ’ (ಸ್ವರ ಸಂಧಿ)**

ದೇವೇಂದ್ರ ಜ್ಞಾನೇಶ್ವರ ಸೂರ್ಯೋದಯ ಮಹರ್ಷಿ
ಮಹೇಶ ಮಂಡಳೇಶ್ವರ ಕಲೋಪಾಸಕ

**‘ವೃದ್ಧಿ ಸಂಧಿ’**

ಏಕೈಕ ಜನೈಕ್ಯವನೌಷಧಿ ಅಷ್ಟೈಶ್ವರ್ಯ

**‘ಯಣ್ ಸಂಧಿ’ (ಸ್ವರ ಸಂಧಿ)**

ಅತ್ಯವಸರ ಕೋಟ್ಯಧೀಶ್ವರ ಕೋಟ್ಯನುಕೋಟಿ ಜಾತ್ಯತೀತ

**‘ಜಶ್ತ್ವ ಸಂಧಿ’ (ವ್ಯಂಜನ ಸಂಧಿ)**

ವಾಗ್ದೇವಿ ಅಜಂತ ಷಡಾನನ ದಿಗಂತ ಅಬ್ಧಿ

**‘ಶ್ಚುತ್ವ ಸಂಧಿ’ (ವ್ಯಂಜನ ಸಂಧಿ)**

ಪಯಶ್ಶಯನಶರಚ್ಚಂದ್ರ ಜಗಜ್ಜ್ಯೋತಿ ಬೃಹಚ್ಛತ್ರ

**‘ಅನುನಾಸಿಕ ಸಂಧಿ’ (ವ್ಯಂಜನ ಸಂಧಿ)**

ಷಣ್ಮುಖ ಸನ್ಮಾನ ವಾಙ್ಮಯ ಉನ್ಮಾದ ತನ್ಮಯ ಶ್ರೀ ೀಮನ್ಮಹಾ

## 11. ಸಮಾಸಗಳು

**ತತ್ಪುರುಷ ಸಮಾಸ**

ಬೆಟ್ಟದಾವರೆ ತಲೆನೋವು ದೈವಭಕ್ತಿ
ಸ್ವಾಮಿದ್ರೋ ೀಹ ಪರಧನ ಪೂದೋಟ
ಕಾಲುಬಳೆ ಧನದಹರಣ

**ಕರ್ಮಧಾರಯ ಸಮಾಸ**

ಇಮ್ಮಾವು ಮೆಲ್ವಾತು ಹೊಸಗನ್ನಡ
ಅತಿಕುಟಿಲ ಕಟ್ಟೇಕಾಂತ ಪೆರ್ಮಗ
ಪೆರ್ಮರ ನಲ್ಗುದುರೆ ಹೆದ್ದೊರೆ

**ದ್ವಿಗು ಸಮಾಸ**

ಮೂಗಾವುದ ಮುಕ್ಕಣ್ಣು ಸಪ್ತಸ್ವರಗಳು

**ಬಹುವ್ರೀಹಿ ಸಮಾಸ**

ಹಣೆಗಣ್ಣ ಮುಕ್ಕಣ್ಣ ಚಕ್ರ ಪಾಣಿ ಅಬ್ಜೋದರ
ಘಟಸಂಭೂತ ಗಾಂಡೀವಿ ಪವನನಂದನ ಮದಾಂಧ
ಇನತನೂಜ ದನುಜರಿಪು ಮುರಾರಿ ಮೇದಿನೀಪತಿ
ರಾಜೀವಸಖ

**ಅಂಶಿ ಸಮಾಸ**

ಅಂಗೈ ಹಿಂದಲೆ ಕಡೆಗಣ್ಣು ಮುಂಗೈ ನಡುರಾತ್ರಿ ನಟ್ಟಡವಿ

**ದ್ವಂದ್ವ ಸಮಾಸ**

ಗಿರಿವನದುರ್ಗಗಳು ಕರಿತುರಗರಥಗಳು ಹನುಮಭೀಮರಾಮರು
ಸೂರ್ಯಚಂದ್ರ ರು ಮಾದ್ರ ಮಾಗಧಯಾದವರು ಕೆರೆಕಟ್ಟೆಬಾವಿಗಳು

**ಕ್ರಿಯಾ ಸಮಾಸ**

ಮೈಮುಚ್ಚು ಕಣ್ದೆರೆ ಕಂಗೆಡು ಕೈಕೊಳ್ವುದು
ಸಾಕ್ಷಿಮಾಡಿ ಬಲವಂದು ಮೋಸಮಾಡು
ಕೈಯಾನು ಹೊಗೆದೋರು ಸೊಲ್ಗೇಳಿ
ಬಿಲ್ಗೊಂಡು ಬಿಲ್ದಿರುವನೇರಿಸಿ

**ಗಮಕ ಸಮಾಸ**

ಆ ಕಲ್ಲು ಈ ಬೆಕ್ಕು ನೆಯ್ದುವಸ್ತ್ರ

## 12. ತದ್ಧಿತಾಂತಗಳು

| ತದ್ಧಿತಾಂತ ನಾಮ | | ತದ್ಧಿತಾಂತ ಭಾವನಾಮ | ತದ್ಧಿತಾಂತ ಅವ್ಯಯ | |
|---|---|---|---|---|
| ಪುಲ್ಲಿಂಗ | ಸ್ತ್ರೀಲಿಂಗ | | | |
| | | ಬಡತನ | ಚಂದ್ರ ನಂತೆ | ಅವನಂತೆ |
| ಮೋಸಗಾರ | ಮೋಸಗಾರ್ತಿ | ಸಿರಿತನ | ಚಂದ್ರ ನವೊಲ್ | ಅವನವೊಲ್ |
| ಕನ್ನಡಿಗ | ಕನ್ನಡತಿ | ಹಿರಿಮೆ | ಮನೆಯವೋಲು | ಇದರವೋಲು |
| ಬಳೆಗಾರ | ಬಳೆಗಾರ್ತಿ | ಜಾಣತನ | ಕರಡಿಯವೋಲ್ | ನದಿಯವೋಲ್ |
| ಕೋಲುಕಾರ | ಕೋಲುಕಾರ್ತಿ | ಚೆಲುವಿಕೆ | ಮನೆಯತನಕ | ಹಿಮಾಲಯದತನಕ |
| ಸಿರಿವಂತ | ಸಿರಿವಂತೆ | ಕಪ್ಪು | ಶಾಲೆಯವರೆಗೆ | ಪಟ್ಟಣದವರೆಗೆ |
| | | ಪೆರ್ಮೆ | ಇವಳಮಟ್ಟಿಗೆ | ಸುಂದರನಮಟ್ಟಿಗೆ |
| | | | ನನಗೋಸ್ಕರ | ಬೆಕ್ಕಿಗೋಸ್ಕರ |
| | | | ರಾಮನ ಸಲುವಾಗಿ | ಕಟ್ಟಡದ ಸಲುವಾಗಿ |
| | | | ಸೀತೆಗಿಂತ | ಅದಕ್ಕಿಂತ |
| | | | ನಿನಗಾಗಿ | ಇದಕ್ಕಾಗಿ |
| | | | ಮದುವೆಗೋಸುಗ | ಕಾಗೆಗೋಸುಗ |

*****

## 13. ಕೃದಂತಗಳು

| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |
| ಓಡಿದ | ಓಟ | ಓಡಿ |
| ಓಡುವ | ನೋಟ | ಉಣ್ಣದೆ |
| ಬಾಳುವ | ಬಾಳುವಿಕೆ | ಮಾಡದೆ |
| ಬರೆಯುವ | ಬರೆಯುವಿಕೆ | ಬರುತ್ತ |
| ಓಡಿದ | ಅಂಜಿಕೆ | ಮಾಡುತ್ತ |
| ಬಾಳಿದ | ನಂಬಿಕೆ | ಬರೆದು |
| ಬರೆದ | ಉಡುಗೆ | ಹೋಗಲಿಕ್ಕೆ |
| ಓಡದ | ತೊಡುಗೆ | ಮಾಡಲಿಕ್ಕೆ |
| ಬಾಳದ | ನಗುವುದು | ಮಾಡಲು |
| ಬರೆಯದ | ತಿನ್ನುವುದು | ಮಾಡ |

## 14. ಅವ್ಯಯಗಳು

**ಅವ್ಯಯಗಳು :–** ನಾಮಪದ, ಕ್ರಿ ಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು **‘ಅವ್ಯಯಗಳು’** ಎನ್ನುವರು.

**ಸಾಮಾನ್ಯಾವ್ಯಯಗಳು :–** ಯಾವುದಾರೊಂದು ಕ್ರಿ ಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳೇ **‘ಸಾಮಾನ್ಯಾವ್ಯಯಗಳು’** ಎನ್ನುವರು. ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

ಉದಾ:– ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ ತಟ್ಟನೆ, ತರುವಾಯ, ಹಾಗೆ, ಅಂತು ಬೇರೆ, ಬಳಿಕ, ಕೂಡಲೆ, ಚೆನ್ನಾಗಿ

**ಅನುಕರಣಾವ್ಯಯಗಳು :–** ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು **‘ಅನುಕರಣಾವ್ಯಯಗಳು’** ಎಂದು ಕರೆಯುತ್ತಾರೆ.

ಉದಾ:– ಚಟಚಟ, ಕರಕರ, ಚುರುಚುರು, ಧಗಧಗ ರೊಯ್ಯನೆ ಸುಯ್ಯನೆ ಘುಳುಘುಳು ದಡದಡ

**ಭಾವಸೂಚಕಾವ್ಯಯಗಳು :–** ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು **'ಭಾವಸೂಚಕಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಅಹಾ! ಭಳಿರೆ! ಓಹೋ! ಹೋ! ಅಃ! ಆಃ! ಓ!

**ಕ್ರಿಯಾರ್ಥಕಾವ್ಯಯಗಳು :–** ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು **'ಕ್ರಿಯಾರ್ಥಕ ಅವ್ಯಯಗಳು'** ಎಂದು ಕರೆಯಲಾಗಿದೆ.

ಉದಾ :– ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.

**ಸಂಬಂಧಾರ್ಥಕಾವ್ಯಯಗಳು :–** ಎರಡು ಪದಗಳನ್ನಾಗಲೀ, ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ **'ಸಂಬಂಧಾರ್ಥಕಾವ್ಯಯಗಳು'**

**ಉದಾ:– ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿ.**

**ಪದಗಳ ಜೋಡಣೆ :–** ರಾಮ**ನೂ** ಲಕ್ಷ್ಮಣ**ನೂ** ಸೀತೆ**ಯೂ** ಕಾಡಿಗೆ ಹೊರಟರು.

**ಪದ ಸಮುಚ್ಚಯ ಜೋಡಣೆ :–**ಅವನು ಬರುವು**ದೂ** ಬೇಡ; ಆ ಕೆಲಸ ಆಗುವು**ದೂ** ಬೇಡ.

**ವಾಕ್ಯಗಳ ಜೋಡಣೆ :–**ಅವನು ಬರಲಿಲ್ಲ **ಆದ್ದರಿಂದ** ನಾನೂ ಬರಲಿಲ್ಲ.

**ಅವಧಾರಣಾರ್ಥಕಾವ್ಯಯಗಳು**

ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು **'ಅವಧಾರಾಣಾರ್ಥಕಾವ್ಯಯ'** ಎಂದು ಕರೆಯುತ್ತಾರೆ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.

**ಉದಾ:–** ಅವನೇ, ಅದುವೇ, ಅವಳೇ, ನೀನೇ ಅವರೇ

**ಪದಗಳ ಕೊನೆಯಲ್ಲಿರುವ 'ಏ' ಎಂಬ ಅಕ್ಷರವೇ ಅವಧಾರಾಣಾರ್ಥಕಾವ್ಯಯ.**

*****

## 15. ಲೇಖನ ಚಿಹ್ನೆಗಳು

**ಪೂರ್ಣವಿರಾಮ : –** ( . ) ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಅರ್ಧವಿರಾಮ ಚಿಹ್ನೆ :–** ( ; )ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ 'ಅರ್ಧವಿರಾಮ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ ಚಿಹ್ನೆ :–** ( , )ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ 'ಅಲ್ಪವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಉದಾಹರಣೆ :** ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ ಚಿಹ್ನೆ :–** ( ? ) ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ 'ಪ್ರಶ್ನಾರ್ಥಕ ಚಿಹ್ನೆ'ಯನ್ನು ಬಳಸಲಾಗುವುದು.

**ಭಾವಸೂಚಕ ಚಿಹ್ನೆ :–** ( ! ) ಹರ್ಷ, ಅಶ್ಚರ್ಯ, ಸಂತೋಷ', ವಿಷಾದ, ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ 'ಭಾವಸೂಚಕ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !

**ಉದ್ಧರಣ ಚಿಹ್ನೆ :–** ( " " ) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ. ಬರೆಯುವಾಗ 'ಉದ್ಧರಣ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** "ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು" ಎಂದು ಸರ್. ಎಂ.ವಿಶ್ವೇಶ್ವರಯ್ಯ ಅವರು ಹೇಳಿದರು.

**ವಾಕ್ಯವೇಷ್ಟನ ಚಿಹ್ನೆ :–** ( ' ' ) ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ 'ವಾಕ್ಯವೇಷ್ಟನ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಕನ್ನಡದಲ್ಲಿ 'ಇಂಗ್ಲೀಷ್', 'ಪರ್ಷಿಯನ್', 'ಪೋರ್ಚುಗೀಸ್ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ :–** ( ) ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆ'ಯನ್ನು ಬಳಸಲಾಗುತ್ತದೆ.

**ಉದಾಹರಣೆ** :ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ 'ವಿವರಣಾತ್ಮಕ'ಚಿಹ್ನೆಯನ್ನು ಬಳಸಲಾಗುತ್ತದೆ.

*****

## 16. ವಾಕ್ಯ ಪ್ರಕಾರಗಳು

1. ಸಾಮಾನ್ಯ ವಾಕ್ಯ 2. ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ) 3. ಮಿಶ್ರ ವಾಕ್ಯ.

**ಸಾಮಾನ್ಯ ವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು **'ಸಾಮಾನ್ಯ ವಾಕ್ಯ'** ಎಂದು ಕರೆಯುತ್ತಾರೆ.

**ಉದಾ:–**
1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

**ಉದಾ :–** ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

**ಸಂಯೋಜಿತ ವಾಕ್ಯ :–** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

**ಉದಾ:–**ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

**ಮಿಶ್ರವಾಕ್ಯ :–** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು **'ಮಿಶ್ರವಾಕ್ಯ'** ಎನ್ನುತ್ತೇವೆ.

**ಉದಾ:–**ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

## 17. ಕ್ರಿಯಾಪದ/ರೂಪಗಳು

ಕ್ರಿಯಾಪದಗಳಲ್ಲಿ ವಿದ್ಯರ್ಥಕ,ನಿಷೇಧಾರ್ಥಕ,ಸಂಭವನಾರ್ಥಕ ಕ್ರಿಯಾಪದ ಗಳೆಂದು ಮೂರು ವಿಧಗಳಿವೆ

- **ವಿದ್ಯರ್ಥಕ: (ಅಲಿ)** ಮಾಡಲಿ,ತಿನ್ನಲಿ,ಓದಲಿ
- **ನಿಷೇಧಾರ್ಥಕ: (ಅನು)** ಮಾಡನು, ತಿನ್ನನು,ಓದರು
- **ಸಂಭಾವನಾರ್ಥಕ: (ಆನು)** ಮಾಡಿಯಾನು, ತಿಂದಾಳು, ಓದಿಯಾರು

## 18.ಅಲಂಕಾರ 1*3=3

ಅಲಂಕಾರ: ಉಪಮಾಲಂಕಾರ **ಉದಾ:**

**ಸೀತೆಯ ಮುಖ ಕಮಲದಂತೆ ಅರಳಿತು**

**ಉಪಮೇಯ : ಸೀತೆಯ ಮುಖ**
**ಉಪಮಾನ : ಕಮಲ**
**ಉಪಮ ವಾಚಕ : ಅಂತೆ**
**ಸಮಾನ ಧರ್ಮ: ಅರಳುವುದು**

**ಸಮನ್ವಯ:** ಇಲ್ಲಿ **ಉಪಮೇಯವಾದ ಸೀತೆ ಮುಖ**ವನ್ನು **ಉಪಮಾನ** ವಾದ **ಕಮಲಕ್ಕೆ** ಹೋಲಿಸಿರುವುದರಿಂದ ಇದು **ಉಪಮಾಲಂಕಾರ**

ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು ಒಳಗಿನ ಮಂದಿ ಗುಂಡು ಹೊಡೆದರೋ ಮುಂಗಾರಿ ಸಿಡಿಲು ಸಿಡಿದ್ಹಾಂಗ ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ

**ರೂಪಕಾಲಂಕಾರ** **ಉದಾ :**
**"ಸೀತೆಯ ಮುಖ ಕಮಲ ಅರಳಿತು"**

**ಉಪಮೇಯ :** ಸೀತೆಯ ಮುಖ
**ಉಪಮಾನ :** ಕಮಲ
**ಅಲಂಕಾರ :** ರೂಪಕಾಲಂಕಾರ
**ಸಮನ್ವಯ : ಇಲ್ಲಿ ಉಪಮೇಯವಾದ** ಸೀತೆಯ **ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ**
ಮಾರಿಗೌತಣವಾಯ್ತು ನಾಳಿನ ಭಾರತವು
ಅಳ್ಳಿರಿಯುತಿಪ್ಪ ಎಮ್ಮ **ಒಡಲ ಬೇಗೆಯ ಬೆಂಕಿಯುರಿ** ನಿನ್ನನಿರಿಯದೆ ಪೇಳು ವಿಶ್ವಮಿತ್ರ ಶಿಕ್ಷಣವು ಸಂಜೀವಿನಿ ಪ್ರಿ ೀತಿಯ ಹಣತೆ

- **ದುಷ್ಟಾಂತಾಲಂಕಾರ:**

**ಮಾತು ಬಲ್ಲವನಿಗೆ ಜಗಳವಿಲ್ಲ , ಊಟ ಬಲ್ಲವನಿಗೆ ರೋಗವಿಲ್ಲ**
**ಮಾತಿನ ಮಹತ್ವ ತಿಳಿದವನಿಗೆ ಜಗಳ ಮಾಡಬೇಕಾದ ಪ್ರಮೇಯವಿಲ್ಲ ಊಟದ ಮರ್ಮ ಅರಿತವನಿಗೆ ರೋಗದ ಭಯವಿಲ್ಲ ಎಂಬ ಅರ್ಥ ಈ ಎರಡೂ ಹೇಳಿಕೆಗಳಿಂದ ತಿಳಿದು ಬರುತ್ತದೆ. ಇಲ್ಲಿ ಒಂದು ಹೇಳಿಕೆ** ಮತ್ತೊಂದು ಹೇಳಿಕೆಯಲ್ಲಿ ಬಿಂಬ–ಪ್ರ ತಿಬಿಂಬ ಭಾವಗಳಂತೆ ವ್ಯಕ್ತವಾಗಿದೆ.
**ಸೂತ್ರ :** ಎರಡು ಬೇರೆಬೇರೆ ವಾಕ್ಯಗಳು (ಉಪಮೇಯ,ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರ ತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದುಷ್ಟಾಂತಾಲಂಕಾರ

**ಉದಾ:** ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನು ರಚಿಸದಿರುವನೇ, ಕತ್ತಲೆಯ ಭಯದಿಂದ ಸೂರ್ಯ ತನ್ನ ಕಿರಣವನ್ನು ಪಸರಿಸದಿರುವನೇ?
**ಉಪಮೇಯ:** ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನು ರಚಿಸದಿರುವನೇ?
**ಉಪಮಾನ:** ಕತ್ತಲೆಯ ಭಯದಿಂದ ಸೂರ್ಯ ತನ್ನ ಕಿರಣವನ್ನು ಪಸರಿಸದಿರುವನೇ? ಅಲಂಕಾರ: **ದುಷ್ಟಾಂತಾಲಂಕಾರ:**
**ಸಮನ್ವಯ:** ದುರ್ಜನರು ನಿಂದಿಸುವರೆಂಬ ಭಯವನ್ನು ಗಣನೆಗೆ ತೆಗೆದುಕೊಳ್ಳದೇ ಒಳ್ಳೆಯ ಕವಿಯಾದವನು ತನ್ನ ಕೃತಿಯನ್ನು ರಚಿಸಿಯೇ ರಚಿಸುತ್ತಾನೆ ಎಂಬ ಮಾತಿಗೂ ಕತ್ತಲೆಯ ಹೆದರಿಕೆಯಿಂದ ಸೂರ್ಯನು ಸುಮ್ಮನಿರದೆ ತನ್ನ ಕಿರಣವನ್ನು ಪಸರಿಸಿಯೆ ಪಸರಿಸುತ್ತಾನೆ ಎಂಬ ಮಾತಿಗೂಅರ್ಥ ಸಾದೃಶ್ಯದಿಂದ ಬಿಂಬ ಪ್ರ ತಿಬಿಂಬಭಾವವೂ ಉಪಮೇಯ ಉಪಮಾನಗಳೆರಡರಲ್ಲೂ ವ್ಯಕ್ತವಾಗುವುದರಿಂದ ಇದು ದುಷ್ಟಾಂತಾಲಂಕಾರ

- ಉತ್ಪ್ರೇಕ್ಷಾಲಂಕಾರ :

ಸೂತ್ರ : ಒಂದು ವಸ್ತುವನ್ನು ಅಥವಾ ಸನ್ನಿವೇಶವನ್ನು ಮತ್ತೊಂದಾಗಿ ಸಂಭಾವಿಸಿ (ಕಲ್ಪಿಸಿಕೊಂಡು) ವರ್ಣಿಸಿದರೆ ಉತ್ಪ್ರೇಕ್ಷಾಲಂಕಾರವಾಗುವುದು.
ಉದಾ: ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು
ಉಪಮೇಯ: ಸೀತೆಯ ಮುಖ
ಉಪಮಾನ: ಕಮಲ
ಅಲಂಕಾರ: ಉತ್ಪ್ರೇಕ್ಷಾಲಂಕಾರ: ಸಮನ್ವಯ: ಉಪಮೇಯವಾದ ಸೀತೆಯ ಮುಖವನ್ನು ಕಮಲವೆಂಬುದಾಗಿ ಕಲ್ಪಿಸಿಕೊಳ್ಳಲಾಗಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರ

- ಅರ್ಥಾಂತರನ್ಯಾಸಾಲಂಕಾರ:

ಒಂದು ವಿಶೇಶ ವಾಕ್ಯವನ್ನು (ಸಾಂದರ್ಭಿಕ ವಾಕ್ಯ) ಸಾಮಾನ್ಯ ವಾಕ್ಯದಿಂದ (ರೂಢಿರಲ್ಲಿರುವ ವಾಕ್ಯ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಾಲಂಕಾರ
ಉದಾ: ಆತ ಉಂಡ ಮನೆಗೆ ಕೇಡು ಬಗೆದ; ಕೃತಘ್ನರು ಏನನ್ನುತಾನೆ ಮಾಡರು?
ಉಪಮೇಯ: (ವಿಶೇಷ ವಾಕ್ಯ) ಆತ ಉಂಡ ಮನೆಗೆ ಕೇಡು ಬಗೆದ
ಉಪಮಾನ: (ಸಾಮಾನ್ಯ ವಾಕ್ಯ) ಕೃತಘ್ನರು ಏನನ್ನುತಾನೆ ಮಾಡರು
ಇಲ್ಲಿ ಉಪಮಾನವಾದ ಕೃತಘ್ನರು ಏನನ್ನುತಾನೆ ಮಾಡರು ಎಂಬ ಲೋಕರೂಢಿಯ ಮಾತನ್ನು ಆಧರಿಸಿ ಉಪಮೇಯವಾದ ಆತ ಉಂಡ ಮನೆಗೆ ಕೇಡು ಬಗೆದ ಎಂಬ ವಿಶೇಷ ವಾಕ್ಯವನ್ನು ಸಮರ್ಥಿಸಲಾಗಿದೆ.

- ಶ್ಲೇಷಾಲಂಕಾರ:

ಒಂದಕ್ಕಿಂತ ಹೆಚ್ಚು ಅರ್ಥಕೊಡುವ ಪದಶಕ್ತಿಗೆ ಶ್ಲೇಷೆ ಎಂದು ಹೆಸರು ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದು ಶ್ಲೇಷಾಲಂಕಾರ:

ಉದಾ:ಆ ವಿವಾಹ ಮಂಟಪ ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧ ಮಿಳಿತವಾಗಿತ್ತು

**ಇಲ್ಲಿ ವಿವಾಹ ಮಂಟಪವೊಂದರ ವರ್ಣನೆ ಮಾಡಲಾಗಿದೆ. ಪುರಂದರಪುರವೆಂದರೆ ದೇವೇಂದ್ರನ ಪಟ್ಟಂ ಅಂದರೆ ಸ್ವರ್ಗ. ರಂಭಾನ್ವಿತ ವಿಬುಧ ಮಿಳಿತ ಎರಡು ಪದಗಳು ಉಪಮೇಯ ಮತ್ತು ಉಪಮಾನಗಳಿಗೆ ಬೇರೆಬೇರೆ ಅರ್ಥವನ್ನು ನೀಡುತ್ತವೆ.**

**ಪದ ವಿವಾಹ ಮಂಟಪದ ಪರವಾಗಿ**
**ರಂಭಾನ್ವಿತ :** ಬಾಳೆಯ ಗಿಡಗಳಿಂದ ಕೂಡಿತ್ತು
**ವಿಬುಧ ಮಿಳಿತ :** ಬ್ರಾ ಹ್ಮಣರಿಂದ ಕೂಡಿತ್ತು

**ಸ್ವರ್ಗದ ಪರವಾಗಿ**
**ರಂಭಾನ್ವಿತ :** ರಂಭೇಯೆಂಬ ಅಪ್ಸರೆಯಿಂದ ಕೂಡಿತ್ತು
**ವಿಬುಧ ಮಿಳಿತ :** ದೇವತೆಗಳಿಂದ ಕೂಡಿತ್ತು

**ಉದಾ: "ಚಕ್ರಾಂಕಂ ಅಗಲ್ವಿನ ಶ್ರಮದಿಂ ನಂಬರಮಂ ಬಿಸುಟುರ್ವಿ ಗಂಧಕಾರಂ ಕವಿತರ್ಪಿನಂ**
**ಚಕ್ರಾಂಕ– ಚಕ್ರವಾಕ ಪಕ್ಷಿಗಳು : ಚಕ್ರವರ್ತಿ ಪದವಿ**
**ಅಂಬರ –ಆಕಾಶ , ಬಟ್ಟೆ**
**ಅಂಧಕಾರ– ಕತ್ತಲೆ , ದುಃಖವೆಂಬ ಕತ್ತಲೆ**

**ಕುರುಕುಲಾರ್ಕನಂ ಅರ್ಕನಂ ಅಸ್ತಮೈದಿದರ್"**

**ಸೂರ್ಯಾಸ್ತಮಾನಕ್ಕೂ , ಕೌರವನ ಅವಸಾನಕ್ಕೂ ಸರಿಹೊಂದುವಂತೆ ರನ್ನನು ಪದ್ಯ ರಚನೆ ಮಾಡಿ, ಕುರುಕುಲಾರ್ಕನ ಸಾವನ್ನು ಹೀಗೆ ವಣಿ ್ಸಿದ್ದಾನೆ**

ಈ ಪದಗಳು ಸೂರ್ಯನಿಗೂ,ಕೌರವನಿಗೂ ಕೂಡಿಯೇ ಹೊಂದಿಕೆಯಾಗುತ್ತದೆ.
**19.ಛಂದಸ್ಸು , ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸು ತಿಳಿಸಿ 1*3=3**


agnidivya.blogspot.com

35. ಕಂದ

UUUU | UU– | UU–

**ಅತಿಕುಟಿ । ಲಮನಂ । ಧನಲು**

UU – | – – | U–U | UU– | UU–

**ಬ್ದತೆಯಿಂ । ದಂದು । ಷ್ಟ ಬುದ್ಧಿ । ನುಡಿದಂ । ಪುಸಿಯಂ**

ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ
( ಛಲಮನೆ ಮೆರೆವೆಂ ಪದ್ಯದ ಇತರ ಸಾಲುಗಳಿಗೆ ಪ್ರ ಸ್ತಾರ ಹಾಕಿ)
**4/4/4/**
**4/4/4/4/4/**

---

**ಷಟ್ಪದಿ: ಭಾಮಿನಿ**

UUU | UU– | UUU | UUUU |

**ಕೊರಳ । ಸೆರೆಹಿ । ಗ್ಗಿದವು । ದೃಗುಜಲ ।**

UUU | UUUU | – U | UU– |

**ಉರವ । ಣೆ ಸಿಕಡು । ನೊಂದ । ನಕಟಾ ।**

UUU | UU – | –U | – UU | U– | UUUU | –

**ಕುರುಪ । ತಿಗೆ ಕೇ । ಡಾದು । ದೆಂದನು । ತನ್ನ । ಮನದೊಳ । ಗೆ**

**3/4/3/4/**
**3/4/3/4/**
**3/4/3/4/3/4/–**

(ಕೌರವೇಂದ್ರ ನ ಕೊಂದೆನೀನು ಪದ್ಯದ ಉಳಿದ ಸಾಲುಗಳಿಗೆ ಪ್ರ ಯತ್ನಿಸಿ)

---

**ಷಟ್ಪದಿ: ವಾರ್ಧಕ**

UU–U | –U– | UUUUU | UUUUU |

**ತೆಗೆದುತ್ತ । ರೀಯಮಂ । ಮುರಿದು ಕುದು । ರೆಯಗಳಕೆ**

UUUUU | –UUU | ––U | UUU– |

**ಬಿಗಿದು ಕದ । ಳೀದ್ರುಮಕೆ । ಕಟ್ಟಲ್ಕೆ । ಮುನಿಸುತರ್**

UUUUU | –U– | UUUUU | –U– | UUUUU | –UUU | –

ಮಿಗೆ ನಡುಗಿ । ಬೇಡಬೇ । ಡರಸುಗಳ । ವಾಜಿಯಂ । ಬಿಡುಬಿಡಿವ । ರೆಮ್ಮನೆನ । ಲು

( ವೀರಲವ ಪದ್ಯದ ಉಳಿದ ಸಾಲುಗಳಿಗೆ ಪ್ರ ಸ್ತಾರ ಹಾಕಲು ಕಲಿಯಿರಿ)
**5/5/5/5/**
**5/5/5/5/**
**5/5/5/5/5/5/–**

---

**ಅಕ್ಷರಗಣ**

**36. ಉತ್ಪಲಮಾಲಾವೃತ್ತ**

ಭ ರ ನ ಭ ಭ ರ ಲ ಗು

–UU | –U– | UUU | –UU | –UU | –U– | U | – |

ಎನ್ನನು। ಗಾಳನೆ । ನ್ನನುಗ । ದಮ್ಮನ । ನಿಕ್ಕಿದ । ಪಾರ್ಥಭೀ । ಮ । ರು ।

- **ಚಂಪಕಮಾಲಾವೃತ್ತ**

ನ ಜ ಭ ಜ ಜ ಜ ರ

UUU | U–U | –UU | U–U | U –U | U–U | –U– |

ಒಡವೆ । ಯನರ್ಥಿ । ಗಿತ್ತೆನ । ವನೀತ । ಳಮಂಗು । ರುಗಿತ್ತೆ । ನೀಗಳೊಂ ।

( ಕೆಮ್ಮನೆ ಮೀಸೆವೊತ್ತೆನೇ ಪದ್ಯಗಳಿಗೆ ಪ್ರ ಸ್ತಾರ ಹಾಕಿ)

---

## ಭಾಗ–3

**ಗಾದೆಮಾತು ವಿಸ್ತರಿಸಿ–3, ಪ್ರಬಂಧ–5, ಪತ್ರಲೇಖನ–5 ಒಟ್ಟು=13**

ಗಾದೆ ಮಾತು ವಿಸ್ತರಿಸಿ ಬರೆಯಿರಿ 1*3=3

ಗಾದೆಗಳು ವೇದಕ್ಕೆ ಸಮಾನ. ಗಾದೆಸುಳ್ಳಾದರೂ ವೇದ ಸುಳ್ಳಾಗದು ಎಂಬ ಮಾತಿದೆ. ಇವು ಜನಮಾನಸದ ಅನುಭವದ ನುಡಿಮುತ್ತುಗಳು ಗಾದೆಗಳು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿವೆ. ದಿನ ನಿತ್ಯದ ಮಾತಿನಲ್ಲಿ ನಲಿದಾಡುವ ಗಾದೆಗಳು ಮಾತಿಗೆ ಚೆಲುವನ್ನು ತಂದು ಕೊಡುತ್ತವೆ.ಇಂತಹ ಪ್ರ ಸಿದ್ಧ ಗಾದೆಗಳಲ್ಲಿ ಕಟ್ಟುವುದು ಕಠಿಣ ಕೆಡಿಸುವುದು ಸುಲಭ ಎಂಬುದೂ ಒಂದಾಗಿದೆ ಯಾವುದೇ ಒಂದು ಕಾರ್ಯವನ್ನು ಮಾಡಲು ಶ್ರ ಮ ವಹಿಸಬೇಕು.ಆದರೆ, ಹಾಳು ಮಾಡಲು ಹೆಚ್ಚು ಶ್ರ ಮ ಬೇಡ. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎಂಬ ಗಾದೆ ಈ ಮಾತನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಒಂದು ಮನೆ ಕಟ್ಟಬೇಕಾದರೆ ಬೇಕಾಗುವ ಶ್ರ ಮಕ್ಕೂ ಹೋಲಿಕೆ ಮಾಡಿದಾಗ ಈ ಮೇಲಿನ ಗಾದೆ ಮಾತು ಅರ್ಥವಾಗಬಹುದು. ಜೀವನದಲ್ಲಿ ಯಶಸ್ಸು ಗಳಿಸಲು ಶ್ರ ಮ ವಹಿಸಲೇಬೇಕು.ಉತ್ತಮನೆನಿಸಿಕೊಳ್ಳಲು ಪ್ರ ಯತ್ನಶೀಲನಾಗಿ ಸದಾ ಎಚ್ಚರದಿಂದಿರಬೇಕು ಎಂಬುದನ್ನು ಈ ಗಾದೆಯಿಂದ ಮನಗಾಣಬಹುದು

1) ಕೈ ಕೆಸರಾದರೆ ಬಾಯಿ ಮೊಸರು
2) ಕುಂಬಾರನಿಗೆ ವರುಷ ಬೆಣ್ಣೆಗೆ ನಿಮಿಷ
3) ಮಾಡಿದ್ದುಣ್ಣೋ ಮಹರಾಯ
4) ಕೂಡಿ ಬಾಳಿದರೆ ಸ್ವರ್ಗಸುಖ
5) ಕಟ್ಟುವುದು ಕಠಿಣ ಕೆಡಿಸುವುದು ಸುಲಭ
6) ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು
7) ಸತ್ಯಕ್ಕೆ ಸಾವಿಲ್ಲ ;ಸುಳ್ಳಿಗೆ ಸುಖವಿಲ್ಲ
8) ಆಳಾಗಬಲ್ಲವನು ; ಅರಸನಾಗಬಲ್ಲನು
9) ಮತೇಮುತ್ತು ;ಮತೇಮೃತ್ಯು
10) ಮನಸ್ಸಿದ್ದರೆ ಮಾರ್ಗ
11) ತಾಳಿದವನು ಬಾಳಿಯಾನು
12) ಅತಿ ಆಸೆ ಗತಿಗೇಡು
13) ಶಕ್ತಿಗಿಂತ ಯುಕ್ತಿ ಮೇಲು ಇತ್ಯಾದಿ

ಪ್ರಬಂಧ 1*5=5

- **ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ :**

**ಪ್ರಸ್ತಾವನೆ:**

**ಪುಸ್ತಕಗಳು ಜ್ಞಾನ ಭಂಡಾರಗಳು,ಭಾಷೆ ವಾಕ್ಚುಷ ರೂಪ ಸಿಕ್ಕಾಗಿನಿಂದ ಮಾನವನ ಅನುಭವಾಮೃತಗಳು ದಾಖಲಿಸಲ್ಪಟ್ಟು ಈಗ ಗ್ರಂಥ ರೂಪದಲ್ಲಿ ಸಂರಕ್ಷಿಸಲ್ಪಟ್ಟಿವೆ. ಪುಸ್ತಕ ಓದುವುದರಿಂದ ತಲತಲಾಂತರ ದಿಂದ ಗಳಿಸಿದ ಜ್ಞಾನವನ್ನು ನಮ್ಮದಾಗಿಸಿಕೊಳ್ಳಬಹುದು. ಪುಸ್ತಕಗಳು ಒಳ್ಳೆಯ ಗೆಳೆಯನಿದ್ದಂತೆ ಗುರುವಿದ್ದಂತೆ. ಓದುವ ಅವ್ಯಾಸವುಳ್ಳವರಿಗೆ ಪುಸ್ತಕಗಳೇ ಜೀವನ ಸಂಗಾತಿ**

**ಒಡಲು: ಪುಸ್ತಕ ಓದುವುದು ಗ್ರಂಥ ಸಂಗ್ರಹ ಮಾಡುವುದು ಅತ್ಯುತ್ತಮ ಅವ್ಯಾಸಗಳಲ್ಲಿ ಒಂದು ಸ್ವಂತವಾಗಿ ಗ್ರಂಥಗಳನ್ನು ಕರೀದಿಸಿ ಸಂಗ್ರಹಿಸುವುದು ಮುಂದಿನ ಜನಾಂಗಕ್ಕೆ ನಾವು ನೀಡುವ ಸಣ್ಣ ಕಾಣಿ ಕೆ. ಗ್ರಂಥ ಗಳನ್ನು ಸಂಗ್ರಹಿಸಿ ಬಳಸುವುದು ಒಂದು ಕಲೆ. ಸಾರ್ವಜನಿಕ ಗ್ರಂಥಾಲಯಗಳು ಹಿರಿ–ಕಿರಿಯರು, ಗುರು–ಶಿಷ್ಯರು, ಹವ್ಯಾಸವುಳ್ಳವರು ಅಧ್ಯಯನ ಶೀಲರು ಎಲ್ಲರಿಗೂ ಬಳಕೆಯಾಗುವ ಗ್ರಂಥಗಳನ್ನು ಹೊಂದಿರಬೇಕು ಓದುವ ಕೊಠಡಿ , ಎರವಲು ಪಡೆಯುವ ಅವಕಾಶಗಳಲ್ಲದೆ, ಕಾಲಕಾಲಕ್ಕೆ ತನ್ನ ಸೇವೆಯನ್ನು ಗ್ರಂಥಾಲಯಗಳು ವಿಸ್ತರಿಸುತ್ತಲೂ ಇರಬೇಕು ಗ್ರಂಥಗಳ ಸದುಪಯೋಗಗಳನ್ನು**

agnidivya.blogspot.com

**ಮನಗಂಡ ಸರ್ಕಾರ ಪ್ರಥಮಿಕ ಶಾಲಾ ಹಂತದಿಂದ ಹಿಡಿದು ಹೊಸ ಅಸ್ತರಕ್ಷ ಹಿರಿಯರಿಗೂ ಗ್ರಂಥಾಲಯಗಳನ್ನು ತೆರೆದಿದೆ. ಪ್ರತೀ ಗ್ರಾಮ ಪಂಚಾಯತಿಗೂ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ. ನಗರ ಪ್ರದೇಶಗಳಲ್ಲಿ ಗ್ರಂಥಾಲಯಗಳ ಉಪಯೋಗ ವಿಸ್ತಾವಾಗಿ ಜಾರಿಯಾಗಿದೆ ಜ್ಞಾನ ಪ್ರಸಾರ ಎಡೆಬಿಡದೆ ಸಾಗಿದೆ.**

**ಉಪ ಸಂಹಾರ:**

**ಓದುವ ಹವ್ಯಾಸ ರೂಡಿಸಿಕೊಳ್ಳುವುದು ಒಂದು ಸಾಧನೆ ಒಮ್ಮೆ ರೂಡಿಸಿಕೊಂಡ ಹವ್ಯಾಸವನ್ನು ಗ್ರಂಥಾಲಯದ ಬಳಕೆಯಿಂದ ಮುಂದುವರೆಸಿ ಜ್ಞಾನಾಭಿವೃದ್ದಿಗೆ ತೊಡಗೊಗಿಸಿಕೊಳ್ಳಬಹುದು**

1) ಗ್ರ ಂಥಾಲಯಗಳ ಮಹತ್ವ
2) ಸಾಮಾಜಿಕ ಪಿಡುಗುಗಳು
3) ಸ್ವಚ್ಛಭಾರತ ಅಭಿಯಾನ
4) ಪ್ರಾ ಚ್ಯ ಸ್ಮಾರಕಗಳ ಸಂರಕ್ಷಣೆ
5) ರಾಷ್ಟ್ರೀಯ ಭಾವೈಕ್ಯ
6) ಗ್ರಾ ಮ ಸ್ವರಾಜ್ಯ
7) ತ್ಯಾಜ್ಯವಸ್ತು ನಿರ್ವಹಣೆ
8) ಲಲಿತ ಕಲೆಗಳು
9) ಮಹಿಳಾ ಸಬಲೀಕರಣ
10) ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ
11) ರಾಷ್ಟ್ರೀಯ ಹಬ್ಬಗಳ ಮಹತ್ವ
12) ಅಂತರ್ಜಲ ಮರುಪೂರಣ
13) ಕಂಪ್ಯೂಟರ್ ಶಿಕ್ಷಣ
14) ನೆರೆ ಹಾವಳಿ ಕಾರಣ ಪರಿಣಾಮ ಪರಿಹಾರ
15) ವರದಕ್ಷಿಣೆ
16) ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

**ಪತ್ರಲೇಖನ 1*5=5**

ಈ ಕೆಳಗಿನ ಮಾದರಿಯಂತೆ ಅಭ್ಯಾಸ ಮಾಡಿರಿ

- **ವ್ಯವಹಾರಿಕ ಪತ್ರ**

–– ನಿಮ್ಮನ್ನು ಚಿತ್ರ ದುರ್ಗದ ಕುವೆಂಪು ಬಡಾವಣೆಯ ರಮ್ಯ/ರಮೇಶ' ಎಂದು ಭಾವಿಸಿ ಕೊಂಡು ನಿಮ್ಮ ಬಡಾವಣೆಯ ರಸ್ತೆ ದುರಸ್ತಿ ಮಾಡುವಂತೆ ಮನವಿ ಮಾಡಿ ಜಿಲ್ಲಾ ಪಂಚಾಯ್ತಿ ಅದ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

–ಗ್ರ ಂಥಾಲಯ ಮಂಜೂರು ಮಾಡುವಂತೆ ಕೋರಿ ಪತ್ರ
–ಕುಡಿಯುವ ನೀರಿನ ಸೌಲಭ್ಯ ಕೋರಿ
–ಬರಪೀಡಿದ ಪ್ರ ದೇಶಕ್ಕೆ ಪರಿಹಾರ ಕೋರಿ –ಇತ್ಯಾದಿ

- ಖಾಸಗಿ ಪತ್ರ

2.ನಿಮ್ಮನ್ನು ಬೆಳಗಾವಿಯ ವಾಸವಿ ಪ್ರೌ ಢಶಾಲೆಯ ಅರಣ ಎಂದು ಭಾವಿಸಿ ಹುಬ್ಬಳ್ಳಿಯಲ್ಲಿ ನೆಲೆಸಿರುವ ನಿಮ್ಮ ಸ್ನೇಹಿತೆ ಸ್ವಾತಿಗೆ ನಿಮ್ಮ ಶಾಲೆಯಲ್ಲಿ ಕೈಗೊಂಡ ಪ್ರ ವಾಸದ ಅನುಭವ ಕುರಿತು ಪತ್ರ ಬರೆಯಿರಿ
–ಪ್ರ ವಾಸಕ್ಕೆ 2000 ರೂ ಹಣ ಕಳುಹಿಸುವಂತೆ ತಂದೆಗೆ ಕೋರಿ ಪತ್ರ
– ಶಾಲೆಯ ವಾರ್ಷಿಕೋತ್ಸವಕ್ಕೆ ಆಹ್ವಾನಿಸುವಂತೆ ತಾಯಿಗೆ ಪತ್ರ
–ಪರೀಕ್ಷಾ ತಯಾರಿ ಕುರಿತು ತಂದೆಗೆ ಪತ್ರ – ಇತ್ಯಾದಿ

- ವರದಿ

3. ನಿಮ್ಮನ್ನು ಧಾರವಾಡದ ಸರ್ವೋದಯ ಪ್ರೌ ಢಶಾಲೆಯ 'ಸುನಿತ' ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರ ಮದ ವರದಿ ಪ್ರ ಕಟಿಸುವಂತೆ ಕೋರಿ 'ವಿಜಯವಾಣಿ' ದಿನಪತ್ರಿ ಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ

–ಸ್ವಾತಂತ್ರ ್ಯ ದಿನಾಚರಣೆಯ ವರದಿ
–ಸಂವಿಧಾನ ದಿನಾಚರಣೆ –ಮಕ್ಕಳ ದಿನಾಚರಣೆ – ಇತ್ಯಾದಿ

**ಮಾದರಿ ಪತ್ರ**

**ನಿಮ್ಮ ಬಡಾವಣೆಯ ದಾರಿದೀಪ ಸರಿಪಡಿಸುವಂತೆ ಕೋರಿ ನಗರಸಭೆ ಅದ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ**

**ಇಂದ:**

**ಸುಪ್ರೀತ 9ನೆ ತರಗತಿ .ಸರ್ಕಾರಿಪ್ರೌಢಶಾಲೆ,**
**ಗಾಂಧಿನಗರ ಚಿತ್ರದುರ್ಗ**

**ಗೆ:**

**ಅಧ್ಯಕ್ಷರು ನಗರಸಭೆ**
**ಚಿತ್ರದುರ್ಗ**

**ಮಾನ್ಯರೆ,**

**ವಿಷಯ: ನಮ್ಮ ಬಡವಣೆಯ ದಾರಿದೀಪ ಸರಿಪಡಿಸುವಂತೆ ಕೋರಿ ಅರ್ಜಿ**

**ಗಾಂಧಿ ನಗರ ಬಡಾವಣೆಯ ನಿವಾಸಿಗಳಾದ ನಮಗೆ ಸಂಜೆಯ ವೇಳೆ ಕಾಡಿನಲ್ಲಿ ಓಡಾಡಿದ ಅನುಭವ ಆಗುತ್ತದೆ. ಕಳೆದ ಒಂದು ತಿಂಗಳಿನಿಂದ ನಮ್ಮ ರಸ್ತೆಯಲ್ಲಿರುವ ಬೀದಿ ದೀಪ ಕೆಟ್ಟು ಹೋಗಿದೆ. ಮಕ್ಕಳಿಗೆ,ವಯಸಾದವರಿಗಂತೂ ತುಂಬ ತೊಂದರೆಯಾಗಿದೆ.ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಿ ಉಪಕಾರ ಮಾಡಬೇಕೆಂದು ಬಡಾವಣೆಯ ಎಲ್ಲ ನಿವಾಸಿಗಳ ಪರವಾಗಿ ಬೇಡಿಕೊಳ್ಳುತ್ತೇನೆ**

**ವಂದನೆಗಳೊಂದಿಗೆ,**

**ಸ್ಥಳ: ಚಿತ್ರದುರ್ಗ ಇಂತಿ ನಿಮ್ಮ ವಿಶ್ವಾಸಿ,**

**ದಿನಾಂಕ: 15–01–2019 (ಸಹಿ/–) ಸುಪ್ರೀತ**

ಹೊಸದಾಗಿ ಬದಲಾದ ಪ್ರ ಶ್ನೆಪತ್ರಿ ಕೆಯ ವಿನ್ಯಾಸಕ್ಕೆ ಅನುಗುಣವಾಗಿ ರಚಿಸಲಾದ ಉತ್ತೀರ್ಣತೆಯ ಪ್ರ ಶ್ನೋತ್ತರ ಕೋಠಿ **ಇದು ನನ್ನದೊಂದು ಸಣ್ಣ ಪ್ರಯತ್ನ.**



agnidivya.blogspot.com